ದೂರದರ್ಶನದಲ್ಲಿ ಕ್ರೈಂನ್ಯೂಸ್ : ಭಾಷಿಕ ಅಧ್ಯಯನ

(ಕನ್ನಡ ವಾಹಿನಿಗಳನ್ನು ಅನುಲಕ್ಷಿಸಿ)

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ
ಹೂಲೆಪ್ಪ ಸಂಡೂರು

ಮಾರ್ಗದರ್ಶಕರು
ಡಾ. ಅಶೋಕ ಕುಮಾರ
ಪ್ರವಾಚಕರು

ಭಾಷಾ ನಿಕಾಯ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೦೭

ದೂರದರ್ಶನದಲ್ಲಿ ಕ್ರೈಂನ್ಯೂಸ್ : ಭಾಷಿಕ ಅಧ್ಯಯನ

(ಕನ್ನಡ ವಾಹಿನಿಗಳನ್ನು ಅನುಲಕ್ಷಿಸಿ)

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ
ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ
ಹೂಲೆಪ್ಪ ಸಂಡೂರು

ಮಾರ್ಗದರ್ಶಕರು
ಡಾ. ಅಶೋಕ ಕುಮಾರ
ಪ್ರವಾಚಕರು

ಭಾಷಾ ನಿಕಾಯ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೦೭

ದೃಢೀಕರಣ ಪತ್ರ

ಹೂಲೆಪ್ಪ ಸಂಡೂರು ಇವರು ದೂರದರ್ಶನದಲ್ಲಿ ಕ್ರೈಂನ್ಯೂಸ್ : ಭಾಷಿಕ ಅಧ್ಯಯನ ಎಂಬ ವಿಷಯ ಕುರಿತ ಸಂಪ್ರಬಂಧವನ್ನು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೮-೦೮-೦೨

ಡಾ. ಅಶೋಕ ಕುಮಾರ
ಮಾರ್ಗದರ್ಶಕರು ಮತ್ತು ಪ್ರವಾಚಕರು
ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ದೂರದರ್ಶನದಲ್ಲಿ ಕ್ರೈಂನ್ಯೂಸ್ : ಭಾಷಿಕ ಅಧ್ಯಯನ ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ. ಅಶೋಕ ಕುಮಾರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೮-೦೮-೦೨

ಹೂಲೆಪ್ಪ ಸಂಡೂರು
ಸಂಶೋಧನಾ ವಿದ್ಯಾರ್ಥಿ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಕೃತಜ್ಞತೆಗಳು

ದೂರದರ್ಶನದಲ್ಲಿ ಕ್ರೈಂನ್ಯೂಸ್ ಭಾಷಿಕ ಅಧ್ಯಯನ ಎಂಬ ವಿಷಯದ ಮೇಲೆ ಎಂ.ಫಿಲ್. ಅಧ್ಯಯನ ಕೈಗೊಳ್ಳಲು ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ ಹಾಗೂ ಇಂದಿನ ಕುಲಪತಿಗಳಾದ ಡಾ. ಕೆ.ವಿ. ನಾರಾಯಣ ಅವರಿಗೆ, ಮಾನ್ಯ ಕುಲಸಚಿವರಾದ ಶ್ರೀ ವಿ. ಶಂಕರ ಅವರಿಗೂ ಮತ್ತು ಮಾನ್ಯ ಉಪಕುಲಸಚಿವರಾದ ಡಾ. ಕೆ. ಪ್ರೇಮಕುಮಾರ ಅವರಿಗೂ ಹಾಗೂ ಭಾಷಾ ನಿಕಾಯದ ಡೀನ್‌ರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಅಧ್ಯಯನ ಕೈಗೊಳ್ಳಲು ಆಡಳಿತಾತ್ಮಕ ಅನುಮತಿ ನೀಡಿ ಸೂಕ್ತ ಸಲಹೆ ಸಹಕಾರ ನೀಡಿದ ಅಂದಿನ ಅಧ್ಯಯನಾಂಗದ ನಿರ್ದೇಶಕರಾದ ಡಾ. ಟಿ.ಆರ್. ಚಂದ್ರಶೇಖರ ಹಾಗೂ ಇಂದಿನ ನಿರ್ದೇಶಕರಾದ ಡಾ. ಡಿ. ಪಾಂಡುರಂಗಬಾಬು ಅವರಿಗೂ ಹಾಗೂ ಕನ್ನಡ ಭಾಷಾಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಪಿ. ಮಹಾದೇವಯ್ಯ ಅವರಿಗೂ ಅನಂತ ಧನ್ಯವಾದಗಳನ್ನು ಸಲ್ಲಿಸುವುದು ಆದ್ಯ ಕರ್ತವ್ಯವೆಂದು ಭಾವಿಸುತ್ತೇನೆ.

ಅಧ್ಯಯನ ಕೈಗೊಳ್ಳಲು ನನಗೆ ನಿಬಂಧದ ವಿಷಯ ಸೂಚಿಸಿ, ಅಧ್ಯಯನದುದ್ದಕ್ಕೂ ತಪ್ಪುಗಳನ್ನು ತಿದ್ದುತ್ತಾ, ತಿಳಿಹೇಳಿ ಮಾರ್ಗದರ್ಶನ ನೀಡಿದ ಅಂದಿನ ವಿಭಾಗದ ಮುಖ್ಯಸ್ಥರೂ ಆಗಿದ್ದ ಡಾ. ಅಶೋಕ ಕುಮಾರ ಅವರಿಗೂ ಹಾಗೂ ಡಾ. ಸಾಂಬಮೂರ್ತಿ ಅವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ನನ್ನ ಅಧ್ಯಯನಕ್ಕೆ ಸ್ಫೂರ್ತಿ ಮತ್ತು ಸೂಕ್ತ ಸಲಹೆ ನೀಡಿದ ಡಾ. ಕೆ. ರವೀಂದ್ರನಾಥ, ಡಾ. ಎಫ್.ಟಿ. ಹಳ್ಳಿಕೇರಿ, ಡಾ. ಎಸ್.ಎಸ್. ಅಂಗಡಿ, ಡಾ. ಸುಬ್ಬಣ್ಣ ರೈ, ಡಾ. ಕೆ.ಕೆ. ಮಾಧವ, ಡಾ. ಸಿ. ವೆಂಕಟೇಶ, ಡಾ. ರಹಮತ್ ತರೀಕೆರೆ, ಡಾ. ಎಂ. ಪುಟ್ಟಯ್ಯ, ಡಾ. ವಿರೂಪಾಕ್ಷ ಪೂಜಾರಿಹಳ್ಳಿ, ಡಾ. ಚಿನ್ನಸ್ವಾಮಿ ಸೋಸಲೆ, ಡಾ. ಎಂ. ಚಂದ್ರಪೂಜಾರಿ, ಡಾ. ಕೆ.ಎಂ. ಮೈತ್ರಿ, ಡಾ. ಚಲುವರಾಜು, ಡಾ. ಮೊಗಳ್ಳಿ ಗಣೇಶ್ ಅವರಿಗೂ ನನ್ನ ಹೃದಯಪೂರ್ವಕ ವಂದನೆಗಳು.

ನನ್ನ ಇಲ್ಲಿಯವರೆಗಿನ ವಿದ್ಯಾಭ್ಯಾಸಕ್ಕೆ ಕಾರಣೀಭೂತರಾದ ಸ್ಫೂರ್ತಿ ತುಂಬಿದ ಡಾ. ಬಸವರಾಜ ಮಲಶೆಟ್ಟಿ, ಡಾ. ಎಸ್. ಶಿವಾನಂದ, ಡಾ. ಮೃತ್ಯುಂಜಯ ರುಮಾಲೆ, ಪ್ರೊ. ಇಟಗಿ ಈರಣ್ಣ, ಡಾ. ಶಾಂತಿನಾಥ ದಿಬ್ಬದ, ಡಾ. ಮೃತ್ಯುಂಜಯ ಹೊರಕೇರಿ, ಡಾ. ಸಿ. ನಾಗಭೂಷಣ, ಡಾ. ಎಚ್.ಟಿ. ಪೋತೆ, ಡಾ. ಮಲ್ಲಿಕಾ ಘಂಟಿ, ಡಾ. ವಿಕ್ರಂ ವಿಸಾಜಿ ಇವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಅಧ್ಯಯನಕ್ಕೆ ಸಹಕರಿಸಿದ ಕನ್ನಡ ಭಾಷಾಧ್ಯಯನ ವಿಭಾಗದ ಸಿಬ್ಬಂದಿ ವರ್ಗದವರಾದ ಶ್ರೀ ಈರೇಶಪ್ಪ, ಮಾರಯ್ಯ ಅವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ನನ್ನ ಅಧ್ಯಯನಕ್ಕೆ ಪೂರಕ ಗ್ರಂಥಗಳನ್ನು ಒದಗಿಸಿದ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯದ ಎಲ್ಲ ಗ್ರಂಥಪಾಲಕರು ಮತ್ತು ಸಿಬ್ಬಂದಿ ವರ್ಗದವರ ಸಹಕಾರವನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಈ ಅಧ್ಯಯನಕ್ಕೆ ಮೂಲ ಪ್ರೇರಣೆ ನೀಡಿದ ಪೂಜ್ಯ ಗುರುಗಳಾದ ಶ್ರೀ ಶ್ರೀ ಯತಿರಾಜ ಪರಮಹಂಸರು ಮತ್ತು ಶ್ರೀ ಶ್ರೀ ಚಂದ್ರಾಮಪ್ಪ ಶರಣರು ಇವರಿಗೂ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಹಲವಾರು ಕಷ್ಟಗಳ ನಡುವೆಯೂ ಹಗಲಿರುಳು ಮಗನ ಓದನ್ನು ಮತ್ತು ಏಳ್ಗೆಯನ್ನು ಸದಾ ಬಯಸುತ್ತಿರುವ ತಂದೆ-ತಾಯಂದಿರುಗಳಿಗೆ, ಚಿಕ್ಕಪ್ಪ-ಚಿಕ್ಕಮ್ಮಂದಿರಿಗೂ ಋಣಿಯಾಗಿರುತ್ತೇನೆ. ವಿಶೇಷವಾಗಿ ನನ್ನನ್ನು ಪ್ರೀತಿಯಿಂದ ಕಾಣುವ ಮಾವನವರಾದ ಚಿತ್ತಪ್ಪ ಮತ್ತು ಜಂಬುನಾಥ ಹಾಗೂ ತಂಗಿಯರಾದ ಲಕ್ಷ್ಮೀದೇವಿ, ಓಬಕ್ಕ, ತಮ್ಮನಾದ ಬೋರಸ್ವಾಮಿಯನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ನನ್ನ ಅಧ್ಯಯನದ ಉದ್ದಕ್ಕೂ ಸಕಲ ರೀತಿಯಿಂದ ಸಹಕರಿಸಿದ ಸ್ನೇಹಮಯಿಗಳಾದ ಡಾ. ಚಾಜಿ ದೇವೇಂದ್ರಪ್ಪ, ಡಾ. ಆಂಜನೇಯ ಉರ್ತಾಳ, ಡಾ. ಸಣ್ಣಪಾಪಯ್ಯ, ಡಾ. ಶ್ಯಾಮ್‌ಮೂರ್ತಿ, ಓಂಪ್ರಕಾಶನಾಯ್ಕ, ದೇವರಾಜ, ಹೋಳಿಬಸಪ್ಪ, ಹಣಮಂತ್ರಾಯ ದೊಡ್ಡಮನಿ, ಗಾದೆಪ್ಪ, ಹುಲುಗೆಪ್ಪ, ಲಿಂಗಣ್ಣ, ಓಬಯ್ಯ, ಅರುಣ್‌ಕುಮಾರ್, ಮೋಹನ್, ಎಸ್. ಮಂಜುನಾಥ, ಸೂಗಣ್ಣ, ಜೆ. ಕುಮಾರ್, ಟಿ. ತುಕಾರಾಮ, ನಾಗರಾಜ್, ರವಿ, ಟಿ. ತಿಪ್ಪೇಸ್ವಾಮಿ, ಚಂದ್ರಪ್ಪ, ನಿರಂಜನ ರಾ.ನ, ತಿರುಪತಿ, ಶಂಕರ್, ವೀರೇಶ್, ವಾಗೀಶ, ಶೇಖರಾಚಾರಿ, ಜಬ್ಬೀರ್ ಇಸ್ಮಾಯಿಲ್, ಬಸವರಾಜ, ಗವಿಸಿದ್ದಪ್ಪ, ಮಾರ್ಕಂಡೇಯ, ಲಲಿತಾ ಬಾವಿಕಟ್ಟಿ, ಸಾವಿತ್ರಿ ಪವಾರ, ದೀಪಾ, ಶರಣ, ಸತ್ಯಮೂರ್ತಿ ಇವರೆಲ್ಲರ ಸ್ನೇಹ ಸಹಕಾರವನ್ನು ಇಲ್ಲಿ ಸ್ಮರಿಸುತ್ತೇನೆ.

ಅಚ್ಚುಕಟ್ಟಾಗಿ ಅಕ್ಷರ ಜೋಡಣೆ ಮಾಡಿಕೊಟ್ಟ ಶ್ರೀಮತಿ ಎ. ನಾಗವೇಣಿಯವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಡಾ. ಹೂಲೆಪ್ಪ ಸಂಡೂರು

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಮಾನವ ಮೊದಲು ಉಪಯೋಗಿಸಿದ ಸಂಕೇತಗಳು ಅವನ ಅಂಗಗಳಿರಬೇಕು. ತಲೆಯನ್ನು ಒಂದು ರೀತಿಯಲ್ಲಿ ತಿರುಗಿಸಿದಾಗ ಒಪ್ಪಿಗೆ. ಇನ್ನೊಂದು ರೀತಿಯಲ್ಲಿ ಅಲ್ಲಾಡಿಸಿದಾಗ ಅಸಮ್ಮತಿ, ಕೈಬೀಸಿ ಕರೆಯುವುದು, ಹೋಗೆಂದು ದಬ್ಬುವುದು, ಕಣ್ಣು ಮಿಟುಕಿಸುವುದು, ಮುಖವನ್ನು ವಿಕಾರ ಮಾಡುವುದು. ಅಳುವುದು ನಗುವುದು ಈಗಲೂ ಚಾಲ್ತಿಯಲ್ಲಿರುವ ಕೆಲವು ಸಂಕೇತಗಳು. ಆನಂತರದಲ್ಲಿ ಮಾನವನು ತನ್ನ ಧ್ವನಿಯಿಂದ ವಸ್ತುಗಳನ್ನು ಸೂಚಿಸಲು ಸಾಧ್ಯವಾದುದು ಮಾನವ ಸಂವಹನದ ಇನ್ನೊಂದು ಮೈಲಿಗಲ್ಲು. ಧ್ವನಿ ಸಂಕೇತಗಳು ಪದಗಳಾದವು. ಮೊದಲು ಹಸು, ಮೀನುಗಳಂತಹ ಪ್ರಾಣಿಗಳು ಮತ್ತು ಭೌತಿಕ ವಸ್ತುಗಳಿಗೆ ಮಾತ್ರ ಇಂತಹ ಪದ ಸಂಕೇತಗಳು ಬಂದಿರಬಹುದು. ಮುಂದೆ ಒಳ್ಳೆಯದು, ಕೆಟ್ಟದ್ದು ಎಂಬಂತಹ ಗುಣಗಳು. ಬಾ, ಹೋಗು, ನಿಲ್ಲು ಅಂತಹ ಕ್ರಿಯೆಗಳನ್ನು ಪದಗಳ ಮೂಲಕ ತಿಳಿಸಲು ಸಾಧ್ಯವಾಯಿತು.

ಭಾಷೆಗಳು ಬೆಳೆದು ಆಡುವ ಭಾಷೆ ಬರೆವಣಿಗೆಯನ್ನು ಪಡೆದುದು ಸಂವಹನದ ಪ್ರಗತಿಯಲ್ಲಿನ ಮುಖ್ಯ ತಿರುವು. ಮಾತು ಆಡಿದರೆ ಹೋಯಿತು, ಆದರೆ ಬರವಣಿಗೆಯು ಸಂವಹನಕ್ಕೆ ಒಂದು ರೀತಿಯ ಶಾಶ್ವತತೆಯನ್ನು ತಂದುಕೊಟ್ಟಿತು. ಜೊತೆಗೆ ಆಡಿದ ಮಾತಿಗಿಂತ ಬರಹ ಹೆಚ್ಚು ಅಧಿಕೃತ, ನಂಬಲರ್ಹವಾದುದು ಎನಿಸಿತು.

ಮನುಷ್ಯ ಆದಿಮ ಕಾಲದಿಂದಲೂ ಸಂಘಜೀವಿ, ಸಮಾಜ ಜೀವಿ ಅವನು ಸಮಾಜದಲ್ಲಿ ಜೀವಿಸಿದ್ದಾನೆ. ಈ ಸಂಘ ಜೀವನ ಅಥವಾ ಸಮುದಾಯ ಜೀವನದ ಮೊದಲ ಮೆಟ್ಟಿಲೆಂದರೆ ಸಂವಹನ. ಸಂಘಜೀವಿಗಳು ಪರಸ್ಪರ ಕಲೆತು ಮಾತುಕತೆ ಆರಂಭಿಸಿದ ದಿನಗಳಿಂದಲೇ ಸಂವಹನ ಶುರುವಾಯಿತು. ಮಾನವ ತನ್ನ ಆಸೆ ಆಕಾಂಕ್ಷೆಗಳನ್ನು ವ್ಯಕ್ತಪಡಿಸಬಲ್ಲ, ತನ್ನ ಜೀವನ ವಿಧಾನಗಳನ್ನು ಬದಲಾಯಿಸಿಕೊಳ್ಳ ಬಲ್ಲ. ಮಾನವ ಸಮಾಜವಿರುವುದೇ ಸಂವಹನದಿಂದ. ಸಂವಹನ ಒಂದು ಅಮೂಲ್ಯ ಮನುಷ್ಯ ಸಂಬಂಧ.

ಸಂವಹನದ ಪ್ರಗತಿಯಲ್ಲಿ ಬರೆವಣಿಗೆಯ ನಂತರದ ಅತೀ ಮುಖ್ಯ ಆವಿಷ್ಕಾರ ಮುದ್ರಣ. ಕಾಲಾನುಕಾಲದಿಂದ ವಿವಿಧ ಬಗೆಗಳಲ್ಲಿ, ರೀತಿ-ರಿವಾಜುಗಳಲ್ಲಿ ಬೆಳೆದು ಬಂದಿರುವ ಸಂವಹನ, ಮಾಹಿತಿ ತಂತ್ರಜ್ಞಾನದ ಈ ಕ್ರಾಂತಿಕಾರಕ ದಿನಗಳಲ್ಲಿ ತುಂಬಾ ಚಾಲ್ತಿಯಲ್ಲಿರುವ ಪದವಾಗಿದೆ. ಇದು ಕೇವಲ ಒಂದು ಪದವಲ್ಲ, ಮಾನವ ಸರಪಳಿಯ ಪ್ರಕ್ರಿಯೆ. ಇಂದು ಸಂವಹನ ಜ್ಞಾನ-ವಿಜ್ಞಾನ, ತಂತ್ರಜ್ಞಾನಗಳ ಲೋಕಕ್ಕೆ ಕೀಲಿ ಕೈ ಇದ್ದಂತೆ. ಪ್ರತೀ ಹೆಜ್ಜೆಯಲ್ಲೂ ಸಂವಹನ ಹೊಸ ಆವಿಷ್ಕಾರಗಳಿಗೆ ಹರಿಕಾರ ಇದ್ದಂತೆ.

ಹತ್ತೊಂಬತ್ತನೆಯ ಶತಮಾನದಲ್ಲಿನ ರೈಲು-ಬಸ್ಸುಗಳಿಂದ ಇಪ್ಪತ್ತನೇ ಶತಮಾನದ ಜೆಟ್‌ವಿಮಾನ, ಅಂತರಿಕ್ಷ ವಾಹನಗಳಿಗೆ ಅತೀ ಶೀಘ್ರದಲ್ಲಿ ಪ್ರಗತಿಯಾಯಿತು. ಸಂವಹನ ಕ್ಷೇತ್ರದಲ್ಲಿ ಮುದ್ರಣದಿಂದ, ರೇಡಿಯೋ, ಟೆಲಿವಿಷನ್, ಕಂಪ್ಯೂಟರ್, ಇಂಟರ್‌ನೆಟ್‌ಗಳಿಗೆ ಅಷ್ಟೇ ವೇಗದಲ್ಲಿ ಪ್ರಗತಿಯಾಗಿದೆ. ಕಾಲಕಾಲದಲ್ಲಿ ಸಂವಹನದ ದಕ್ಷತೆಯನ್ನು ಉತ್ತಮಗೊಳಿಸಲು ಅದರ ಸಾಮರ್ಥ್ಯವನ್ನು ಹೆಚ್ಚಿಸಲು ತುತ್ತೂರಿ, ನಗಾರಿಗಳು ಸಹಾಯಕವಾದವು. ಚರ್ಚಿನ ದೇವಸ್ಥಾನದ ಗಂಟೆಯ ಮೂಲಕ ಆ ಸಮುದಾಯದಲ್ಲಾದ ಹುಟ್ಟು-ಸಾವುಗಳನ್ನು ಸಮುದಾಯದ ಸದಸ್ಯರಿಗೆಲ್ಲಾ ತಿಳಿಸಲು ಒಂದು ಸಂಕೇತ ವ್ಯವಸ್ಥೆಯನ್ನು ಬೆಳೆಸಲು ಸಾಧ್ಯವಾಯಿತು. ಕೆಲವು ಸಂಕೇತಗಳನ್ನು ಮತ್ತಷ್ಟು ದೂರದಲ್ಲಿ ಓದಬಹುದಾಗಿತ್ತು. ತಂತ್ರಜ್ಞಾನ ಅಷ್ಟಾಗಿ ಅಭಿವೃದ್ಧಿಯಾಗದ ಸಮಾಜಗಳಲ್ಲಿ ಗುಡ್ಡಗಾಡು ನಗಾರಿ ಮತ್ತು ಹೊಗೆ ಸಂಕೇತಗಳ ವ್ಯಾಪಾಕ ಬಳಕೆಯಾಗುತ್ತಿತ್ತು.

ತಂತ್ರಜ್ಞಾನ ಬೆಳೆದಂತೆ ಸಂವಹನದ ದಕ್ಷತೆಯನ್ನು ಹೆಚ್ಚಿಸಲು ಹಲವು ಸಾಧನಗಳು ಬಂದವು. ಮುದ್ರಣ ಯಂತ್ರ, ಟೆಲಿಫೋನ್, ಕ್ಯಾಮೆರಾ, ರೇಡಿಯೋ, ಧ್ವನಿ ಸುರುಳಿ, ಟೆಲಿವಿಷನ್, ವಿಡಿಯೋ ಕ್ಯಾಸೆಟ್ - ಸಂವಹನ ಉಪಗ್ರಹ, ಕೇಬಲ್, ಕಂಪ್ಯೂಟರ್, ಇಂಟರ್‌ನೆಟ್ ಇವುಗಳೆಲ್ಲಾ ಸಂವಹನದ ವ್ಯಾಪಕತೆಯನ್ನು ಹೆಚ್ಚಿಸುವುದಕ್ಕೆ ನಮಗೆ ಲಭ್ಯವಿರುವ ಸಾಧನಗಳು. ಇವುಗಳಲ್ಲಿ ಕೆಲವು ಸಂವಹನ ಮಾಧ್ಯಮಗಳೂ ಆಗಿವೆ.

ನಾವು ದಿನನಿತ್ಯದ ಬದುಕಿನಲ್ಲಿ ಬೇರೆಯವರೊಂದಿಗೆ ಹಲವು ಸಂದರ್ಭಗಳಲ್ಲಿ, ಹಲವು ರೀತಿಗಳಲ್ಲಿ ಅಭಿಪ್ರಾಯ, ವಿಚಾರ, ಭಾವನೆಗಳನ್ನು ಹಂಚಿಕೊಳ್ಳುತ್ತೇವೆ. ಇಂಥ ಹಂಚಿಕೊಳ್ಳುವಿಕೆಯೇ ಸಂವಹನ. ನಮ್ಮ ಬೇಕು-ಬೇಡಗಳನ್ನು ತಿಳಿಸಲು, ನಮ್ಮ ವಿಚಾರ, ಭಾವನೆಗಳನ್ನು ಇತರರೊಡನೆ ಹಂಚಿಕೊಳ್ಳಲು, ಒಟ್ಟಾರೆ ಸಂಘಜೀವಿಯಾಗಿ ಬದುಕುಳಿಯಲು ನಾವು ಹಲವು ಜನರೊಂದಿಗೆ ಹಲವು ರೀತಿಯಲ್ಲಿ ಸಂವಹನ ಮಾಡಬೇಕಾಗುತ್ತದೆ. ತೀರಾ ಸರಳ ಸಮಾಜಗಳಲ್ಲಿ ಸುತ್ತಮುತ್ತ ಏನಾಗುತ್ತಿದೆ ಎನ್ನುವುದನ್ನು ವೀಕ್ಷಿಸಲು, ಇಂತಹ ವೀಕ್ಷಣೆಯಿಂದ ಬಂದಂತಹ ಸಮಾಚಾರವನ್ನು ಅರ್ಥಮಾಡಿಕೊಂಡು ಮುಂದೆ ಏನು ಮಾಡಬೇಕೆಂದು ಚರ್ಚಿಸಲು ಸಂವಹನ ಬೇಕಾಗುತ್ತದೆ. ಅಂತಹ ಜೀವನಾನುಭವದಿಂದ ಸಂಚಿತವಾದ ಜ್ಞಾನವನ್ನು ಒಂದು

ಪೀಳಿಗೆಯಿಂದ ಮುಂದಿನ ಪೀಳಿಗೆಗೆ ರವಾನಿಸಲು ಸಂವಹನ ಬೇಕಾಗುತ್ತದೆ. ಅಂಥ ಸಂವಹನಕ್ಕೆಂದೇ ಸಮೂಹ ಮಾಧ್ಯಮಗಳು ಹುಟ್ಟಿಕೊಂಡವು.

ಪತ್ರಿಕೆ, ರೇಡಿಯೋ ಮತ್ತು ಟೆಲಿವಿಷನ್ ಪ್ರಮುಖವಾದ ಸಂವಹನ ಮಾಧ್ಯಮಗಳಾಗಿವೆ. ಈ ಮಾಧ್ಯಮಗಳಿಂದ ದಿನಾಲು ನಮ್ಮ ಸುತ್ತಲಿನ ಪರಿಸರದ ಸರ್ವ ಸುದ್ದಿ-ಸಮಾಚಾರಗಳು ನಮ್ಮನ್ನು ಅಂದೇ ತಲುಪುತ್ತವೆ. ಮೊದಲಿಗೆ ಸಾರಿಗೆ ಮೂಲಕ ಸಂಪರ್ಕ ಹೊಂದುತ್ತಿದ್ದ ಸಂವಹನ ನಂತರ ಧ್ವನಿಯ ಮೂಲಕ ಸಂಪರ್ಕವಾಯಿತು. ಆನಂತರದಲ್ಲಿ ತರಂಗಗಳ ಮೂಲಕ ಧ್ವನಿ ಮತ್ತು ದೃಶ್ಯ ಎರಡನ್ನು ಏಕಕಾಲದಲ್ಲಿ ನೋಡುವಂಥ ಸಂವಹನ ಸಾಧನಗಳು ಆವಿಷ್ಕಾರಗೊಂಡವು. ಇಂದು ಇಡೀ ವಿಶ್ವ ಒಂದು ಪುಟ್ಟ ಗ್ರಾಮವಾಗಿದೆ. ಕ್ಷಣಾರ್ಧದಲ್ಲೇ ಇಡೀ ವಿಶ್ವವನ್ನು ಅವಲೋಕಿಸುವ ಸಂಪರ್ಕ ವ್ಯವಸ್ಥೆ ಬಂದಿದೆ. ಮಾಹಿತಿ ತಂತ್ರಜ್ಞಾನದ ಕೊಡುಗೆಯಿಂದ ಇಂದು ಸಂವಹನ ಶೀಘ್ರಗೊಂಡಿದೆ. ಸಂಪರ್ಕವೂ ಹತ್ತಿರವಾಗಿದೆ.

ಆಧುನಿಕ ಯುಗದಲ್ಲಿ ಮನುಷ್ಯನ ದೈನಂದಿನ ವ್ಯವಹಾರದಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಮಹತ್ವಪೂರ್ಣವಾದುದು. ಜಾಗತಿಕ ಮಟ್ಟದಿಂದ ಹಿಡಿದು ಕಣ್ಣ ಮುಂದಿನ ಸ್ಥಳೀಯ ಘಟನೆಗಳ ಕುರಿತಾಗಿ ಪ್ರಸಾರ ಮಾಡುವಲ್ಲಿ ತಮ್ಮ ವ್ಯಾಪ್ತಿಯನ್ನು ಹರಡಿಕೊಂಡಿವೆ. ಈ ಮಾಧ್ಯಮಗಳ ಮೂಲಕ ಪ್ರಪಂಚದ, ದೇಶದ, ರಾಜ್ಯದ, ನಾಡಿನ ವಿವಿಧ ಪ್ರದೇಶಗಳಲ್ಲಿನ ಸುದ್ದಿ-ಸಮಾಚಾರಗಳು, ಸಂಗತಿಗಳು, ಘಟನೆಗಳು, ಮಾಹಿತಿಗಳು ನಮಗೆ ದಿನನಿತ್ಯ ವಿಲೇವಾರಿಯಾಗುತ್ತಿವೆ. ಈ ಮೂಲಕ ನಮಗೆ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ ವಿಷಯಗಳು ಮಾಧ್ಯಮಗಳ ಮೂಲಕ ತಲುಪುತ್ತಿವೆ. ಇಂಥ ಮಾಧ್ಯಮಗಳಲ್ಲಿ ಟಿ.ವಿ. ಮಾಧ್ಯಮದ ಪಾತ್ರ ಬಹಳ ಮುಖ್ಯವಾದುದು.

ಟಿ.ವಿ. ಎಂದರೆ ಟೆಲಿವಿಷನ್ ಎಂಬುದರ ಸಂಕ್ಷಿಪ್ತ ಪದ. ಈ ಟೆಲಿವಿಷನ್ (ಟಿ.ವಿ.) ಇಂದು ಪ್ರಮುಖ ಸಂವಹನ ಮಾಧ್ಯಮವಾಗಿದೆ. ಇದರ ಮುಖಾಂತರ ನಮಗೆ ಹಲವಾರು ಕಾರ್ಯಕ್ರಮಗಳು ದೊರೆಯುತ್ತವೆ. ಅಂತೆಯೇ ರೇಡಿಯೋದಲ್ಲಿ ಅನೇಕ ಕಾರ್ಯಕ್ರಮಗಳು ಪ್ರಸಾರಗೊಳ್ಳುತ್ತಿವೆ. ಅವುಗಳ ಮುಖಾಂತರ ವಾರ್ತೆಗಳು, ಸುದ್ದಿ-ಸಮಾಚಾರಗಳು ತಿಳಿಯುತ್ತವೆ. ಹಾಗೆಯೇ ದಿನಪತ್ರಿಕೆಗಳ ಮೂಲಕ ನಮ್ಮ ಸುತ್ತಲಿನ ಪರಿಸರದ ಸುದ್ದಿಯು ನಮ್ಮನ್ನು ತಲುಪುತ್ತವೆ. ದೃಶ್ಯ-ಶ್ರವ್ಯ ಮಾಧ್ಯಮವಾದ ಟೆಲಿವಿಷನ್‌ನಿಂದ ಇಂದು ನೇರವಾಗಿ ಘಟನೆಗಳನ್ನು, ಸಂಗತಿಗಳನ್ನು, ಸುದ್ದಿಯನ್ನು ಗ್ರಹಿಸಬಹುದಾಗಿದೆ.

ಮಾಧ್ಯಮಗಳ ಮೂಲಕ ನಾವು ಮನರಂಜನೆಯೊಂದನ್ನು ಅಲ್ಲದೇ ಮಾಹಿತಿಯನ್ನು ಪಡೆಯುತ್ತೇವೆ. ವಿವಿಧ ಕಾರ್ಯಕ್ರಮಗಳ ಮೂಲಕ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಅಂಶಗಳನ್ನು ತಿಳಿಯಬಹುದಾಗಿದೆ. ಟಿ.ವಿ. ಮಾಧ್ಯಮದಿಂದ ಬಿತ್ತರಗೊಳ್ಳುವ ಕಾರ್ಯಕ್ರಮಗಳು ವೈವಿಧ್ಯ ಪೂರ್ಣವಾಗಿರುತ್ತವೆ.

ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳು ಸಮಾಜದ ಪ್ರಮುಖ ಅಂಗಗಳಾಗಿವೆ. ಮಾಧ್ಯಮಗಳಿಲ್ಲದೇ ಯಾವುದೇ ಸಂವಹನ ಕ್ರಿಯೆ ನಡೆಯುವಂತಿಲ್ಲ. ಸಮಾಜ ಚೇತನಶಾಲಿಯಾಗಿ, ಕ್ರಿಯಾತ್ಮಕವಾಗಿರುವಲ್ಲಿ ಮಾಧ್ಯಮಗಳ ಪಾತ್ರ ಮುಖ್ಯ. ದೈನಂದಿನ ಸಮಾಚಾರಗಳನ್ನು ಜನಮನಕ್ಕೆ ತಲುಪಿಸುವಲ್ಲಿ ಯಶಸ್ವಿಯಾಗಿವೆ. ಹಾಗಾಗಿ ಮಾಧ್ಯಮಗಳನ್ನು ಸಮಾಜದ ಪ್ರಮುಖ ನಾಡಿಗಳೆಂದು ಕರೆಯಬಹುದು. ಈ ಮಾಧ್ಯಮಗಳ ಕುರಿತು ಅಧ್ಯಯನಗಳು ನಡೆಯುತ್ತಾ ಇವೆ. ಪ್ರತ್ಯೇಕವಾಗಿ ಒಂದೊಂದು ಸಮೂಹ ಮಾಧ್ಯಮವನ್ನು ಕುರಿತು ಅಧ್ಯಯನವನ್ನು ಮಾಡುವಂಥ ಪ್ರಕ್ರಿಯೆ ಆರಂಭಗೊಂಡಿವೆ. ಈ ಮಾಧ್ಯಮಗಳನ್ನು ಪ್ರವೇಶಿಸುವವರಿಗೆ ಶಿಕ್ಷಣ ವಲಯದಲ್ಲಿ ಒಂದೊಂದು ಕೋರ್ಸಾಗಿ ಕಲಿಸಲಾಗುತ್ತಿದೆ. ಆಸಕ್ತರಿಗೆ ಬಹುಮುಖ್ಯ ಕ್ಷೇತ್ರಗಳಾಗಿ ಮಾಧ್ಯಮಗಳು ಇಂದು ಬಳಕೆಯಲ್ಲಿವೆ.

ದಿನನಿತ್ಯ ಬೆಳಿಗ್ಗೆ ಎದ್ದು ಕೂಡಲೇ ಟೀ, ಕಾಫಿ ಜೊತೆಗೆ ಬಿಸಿಬಿಸಿ ಸುದ್ದಿಯ ದಿನಪತ್ರಿಕೆಗಳು ಬೇಕು ಹಾಗೂ ಉದಯಕ್ಕೇನೆ ಟೆಲಿವಿಷನ್ ಸುದ್ದಿ ಸಮಾಚಾರಗಳು, ರೇಡಿಯೋ ನ್ಯೂಸ್‌ಗಳು ಇತ್ಯಾದಿ ಇಂದು ಮನುಷ್ಯನಿಗೆ ಅತೀ ಅಗತ್ಯವಾಗಿವೆ. ಓದು ಬರಹ ಬಲ್ಲವರು ದಿನಾಲು ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡಿರುತ್ತಾರೆ. ಅವರಿಗೆ ಒಂದು ದಿನವೂ ಪತ್ರಿಕೆ ನೋಡದಿದ್ದರೆ ಆಗದು. ಅಂತೆಯೇ ಟೆಲಿವಿಷನ್ ಸಹ, ಮನರಂಜನೆ ಜೊತೆಗೆ ಸುದ್ದಿ-ಸಮಾಚಾರಗಳನ್ನು ನೀಡುತ್ತದೆ. ಹಾಗೇನೇ ರೇಡಿಯೋದಿಂದ ಪ್ರಸಾರವಾಗುವ ಸುದ್ದಿಯನ್ನು ಆಲಿಸುತ್ತಾರೆ. ಜೀವನದ ಸಂಗಾತಿಯಾಗಿ ಈ ಮಾಧ್ಯಮಗಳು ಇಂದು ಬಳಕೆಯಾಗುತ್ತಿವೆ.

ಶಿಕ್ಷಣ ವಲಯದಲ್ಲಿ ಬಹುಮುಖ್ಯವಾದ ಪಾತ್ರವನ್ನು ಮಾಧ್ಯಮಗಳು ವಹಿಸುತ್ತಿವೆ. ಪತ್ರಿಕೆ, ರೇಡಿಯೋ, ಟೆಲಿವಿಷನ್ ಮತ್ತು ಸಿನೇಮಾಗಳು ಸಾಮಾಜಿಕ ಶಿಕ್ಷಣದ ಜವಾಬ್ದಾರಿ ಹೊತ್ತಿರುತ್ತವೆ. ಮಾಹಿತಿಯನ್ನು ಅವು ಒದಗಿಸಿಕೊಡುವ ಮೂಲಕ ಜ್ಞಾನವನ್ನು ಹೆಚ್ಚಿಸುತ್ತವೆ. ಮನೆಯಲ್ಲಿ ಟಿ.ವಿ. ಕಾರ್ಯಕ್ರಮಗಳನ್ನು ವೀಕ್ಷಿಸುವ ಮಕ್ಕಳು, ಮನೆಯಲ್ಲಿಯೇ ಕುಳಿತು ಮಹತ್ವದ ವಿಷಯದ ಬಗ್ಗೆ, ವ್ಯಕ್ತಿಗಳ ಮತ್ತು ಸ್ಥಳಗಳನ್ನು ಪರಿಚಯ ಮಾಡಿಕೊಳ್ಳಬಹುದು. ಸಾಕಷ್ಟು ಮಾಹಿತಿಯನ್ನು ಪಡೆಯುತ್ತಾರೆ. ಇಲ್ಲಿಂದಲೇ ಕಲಿಕೆ ಆರಂಭವಾಗುವುದರ ಜೊತೆಗೆ ಜ್ಞಾನದ ಬೆಳವಣಿಗೆ ಆಗುತ್ತದೆ. ಇದಲ್ಲದೇ ಇತರೆ ವಲಯಗಳಲ್ಲೂ ಟೆಲಿವಿಷನ್ ಪ್ರಮುಖ ಪಾತ್ರವನ್ನು ಪಡೆದುಕೊಂಡಿದೆ.

ಕನ್ನಡದಲ್ಲಿ ಪ್ರಸಾರವಾಗುವಂಥ ಅನೇಕ ವಾಹಿನಿಗಳು ವಿವಿಧ ರೀತಿಯ ಪ್ರಸಾರ ಕಾರ್ಯವನ್ನು ಕೈಗೊಂಡಿವೆ. ಅವುಗಳಲ್ಲಿ ವಿವಿಧ ವಾಹಿನಿಗಳಾದ 'ಉದಯ ಟಿ.ವಿ', 'ಈ.ಟಿ.ವಿ. ಕನ್ನಡ', 'ಝೀ ಕನ್ನಡ', 'ಟಿ.ವಿ.೯' ಹಾಗೂ ಚಂದನ ಮುಂತಾದ ವಾಹಿನಿಗಳು ವಿಶಿಷ್ಟವಾದ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿವೆ. ಅವುಗಳಲ್ಲಿ ಒಂದು ವಿಶಿಷ್ಟ ಕಾರ್ಯಕ್ರಮವೆಂದರೆ ಕ್ರೈಂನ್ಯೂಸ್‌ಗಳ ಪ್ರಸಾರ, ಉದಯ

ಟಿ.ವಿ.ಯಲ್ಲಿ ಕ್ರೈಂಸ್ಟೋರಿ, ಈ.ಟಿ.ವಿ.ಯಲ್ಲಿ 'ಕ್ರೈಂಡೈರಿ', 'ಟಿ.ವಿ.೯'ರಲ್ಲಿ 'ವಾರೆಂಟ್' ಎಂಬ ಎಪಿಸೋಡ್‌ಗಳಲ್ಲಿ ಕ್ರೈಂನ್ಯೂಸ್ ಪ್ರಸಾರ ಮಾಡುತ್ತಿವೆ.

ಕ್ರೈಂನ್ಯೂಸ್ ಟಿ.ವಿ. ಮಾಧ್ಯಮದಲ್ಲಿ ಬಿತ್ತರಗೊಂಡು ಇಂದು ಆಕರ್ಷಕವಾಗಿ ಜನಪ್ರಿಯವಾಗಿವೆ. ಸಮಾಜದಲ್ಲಿ ಜರುಗುವ ಅಪರಾಧಗಳನ್ನು ತಿಳಿಯುವ, ತಿಳಿಸುವ ನಿಟ್ಟಿನಲ್ಲಿ ಜನರಲ್ಲಿ ವಿಶ್ವಾಸ ಪಡೆದಿವೆ. ಸಾಮಾಜಿಕ ಎಚ್ಚರ ಹಾಗೂ ಸಾಮಾಜಿಕ ಜವಾಬ್ದಾರಿ ಜಾಗರೂಕತೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗುತ್ತಿವೆ. ಅಂತೆಯೇ ಕೆಲವೊಮ್ಮೆ ಸಮಾಜದಲ್ಲಿ ನಡೆಯುವ ಅಪರಾಧಗಳಿಗೆ ಪ್ರೇರಕ ಆಗಬಹುದಾಗಿ ಕಂಡು ಬಂದರೂ ಇದರಿಂದ ಸಮಾಜಕ್ಕೆ ಎಚ್ಚರ ಮೂಡಿಸುತ್ತದೆ. ಮಾಧ್ಯಮಗಳ ಉದ್ದೇಶ ಅಪರಾಧಗಳ ಮೇಲೆ ಗಮನಹರಿಸುವುದು. ಸಾಮಾಜಿಕ ನ್ಯಾಯ ಕಾಪಾಡುವಲ್ಲಿ ಇವು ಕೆಲಸ ನಿರ್ವಹಿಸುತ್ತವೆ.

ಕ್ರೈಂನ್ಯೂಸ್‌ಗಳನ್ನು ಪ್ರಸಾರ ಮಾಡುವುದರಿಂದ ಜನರಲ್ಲಿ ಅಪರಾಧಗಳ ಬಗ್ಗೆ ಪ್ರಜ್ಞೆ ಬಂದು, ಅವುಗಳನ್ನು ನಿಲ್ಲಿಸುವಂಥ ಮನೋಭಾವನೆಯನ್ನು ಮೂಡಿಸುತ್ತಿವೆ. ಅದು ಆ ಮಾಧ್ಯಮದ ಉಪಯೋಗದ ದೃಷ್ಟಿಯಲ್ಲಿ ತಾನು ಪ್ರಯೋಜನಕಾರಿಯಾಗಿರುತ್ತದೆ. ಬರೀ ಮನರಂಜನೆಗೋಸ್ಕರ ಬಳಸಿದರೆ ಸಾಲದು. ಅದರ ಪ್ರಯೋಜನವು ವಿವಿಧ ನೆಲೆಯಲ್ಲಿ ಆದಾಗ ಮಾತ್ರ ಉಪಯೋಗದ ದೃಷ್ಟಿ ಉತ್ತಮವಾಗಿದ್ದಾಗ ಅಲ್ಲಿ ಫಲಪ್ರದವಾದ ಬೆಳವಣಿಗೆಯನ್ನು ಕಾಣುತ್ತೇವೆ.

ಕ್ರೈಂನ್ಯೂಸ್ ಸಾಮಾಜಿಕ ಸಮಸ್ಯೆಗಳನ್ನು, ಸವಾಲುಗಳನ್ನು ಮತ್ತು ಅವುಗಳ ಪರಿಹಾರ ಕುರಿತು ಯೋಚಿಸುವಲ್ಲಿ ವೀಕ್ಷಕರಿಗೆ ಸಹಕಾರಿಯಾಗಿರುತ್ತವೆ. ಯಾವುದೇ ಮೂಢನಂಬಿಕೆಗೆ-ಅಂಧಶ್ರದ್ಧೆಗೆ ಒಳಗಾಗಿ ಮೋಸ ಹೋಗದೆ ಜಾಗರೂಕತೆ ಬರುತ್ತದೆ. ಸಾಮಾಜಿಕ ಬದಲಾವಣೆಯ ದೃಷ್ಟಿಯಲ್ಲೂ ಸಹ ಪರಿಣಾಮ ಬೀರಿ ಅದರಿಂದ ಸಾಮಾಜಿಕ ಬದಲಾವಣೆಯಾಗುತ್ತದೆ. ಇದರ ಜೊತೆಗೆ ಸಮೂಹ ಮಾಧ್ಯಮಗಳು ಪ್ರೇಕ್ಷಕನನ್ನು ಹಿಡಿದಿಡಲು ಪರಿಣಾಮಕಾರಿಯಾಗಿ ಮೂಡಿಬರಲು ಹಲವಾರು ಕಸರತ್ತುಗಳು ಮಾಡುತ್ತಿವೆ. ಅವುಗಳಲ್ಲಿ ಭಾಷಾ ಬಳಕೆ ದೃಷ್ಟಿಯಿಂದಲೂ ಗಮನಾರ್ಹವಾಗಿದೆ. ಹೀಗಾಗಿ ಇಲ್ಲಿನ ಭಾಷಾಬಳಕೆ ಕುರಿತು ವಿಶೇಷ ಅಧ್ಯಯನ ನಡೆಯಬೇಕಿದೆ.

ಕ್ರೈಂನ್ಯೂಸ್ ಓದುವ ಸುದ್ದಿ ವಾಚಕರು ಅಥವಾ ಸುದ್ದಿಯನ್ನು ಓದುವವರು, ನಿರೂಪಣೆಯನ್ನು ಮಾಡುವ ನಿರೂಪಕರು ಭಾಷೆಯನ್ನು ವಿಶಿಷ್ಟವಾಗಿ ಬಳಸುವುದನ್ನು ಕಾಣುತ್ತೇವೆ. ಅಲ್ಲಿನ ಸಂದರ್ಭಕ್ಕೆ ತಕ್ಕಂತೆ ದೃಶ್ಯ ಮತ್ತು ಶ್ರವ್ಯ ಎರಡೂ ಸಹ ಪರಿಣಾಮಕಾರಿಯಾಗಿದ್ದು, ಭಾಷೆ ಔಪಚಾರಿಕವೂ ಅಲ್ಲದ ಅನೌಪಚಾರಿಕವೂ ಅಲ್ಲದ ವಿಭಿನ್ನವಾದ ವಿಶಿಷ್ಟ ರೀತಿಯಲ್ಲಿ ಬಳಕೆಯಾಗುವುದು ಕಂಡು ಬರುತ್ತದೆ. ಒಮ್ಮೊಮ್ಮೆ ಆಡುಮಾತಿನಂತೆ ಭಾಷೆ ಬಳಸಲ್ಪಟ್ಟರೂ ಅಲ್ಲಿನ ವಾಕ್ಯಗಳ ರಚನೆ, ಪದಗಳ ರಚನೆ, ಬಹು ವಿಶಿಷ್ಟವಾಗಿದ್ದು ಸರಳವೂ ಮತ್ತು ಸಂಕೀರ್ಣವೂ ಕೂಡ ಆಗಿರುತ್ತವೆ. ಸರಳ ಮತ್ತು ಸಂಕೀರ್ಣ ವಾಕ್ಯಗಳು

ರಚನೆಗೊಂಡು ಕೆಲವೊಮ್ಮೆ ಅಪೂರ್ಣ ವಾಕ್ಯಗಳಂತೆ ಕಂಡು ಬಂದರೂ, ಅರ್ಥಪೂರ್ಣವಾಗಿ ಇರುತ್ತವೆ. ದೃಶ್ಯ ಮತ್ತು ಶ್ರವ್ಯ ಎರಡೂ ನಿಟ್ಟಿನಲ್ಲಿ ಕ್ರೈಂನ್ಯೂಸ್ ಪ್ರಸಾರಗೊಂಡು ವೀಕ್ಷಕನಿಗೆ ಅತ್ಯಂತ ಆಕರ್ಷಕವಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಮಾಧ್ಯಮಗಳಲ್ಲಿ ಪೈಪೋಟಿ ಹೆಚ್ಚಾಗಿದೆ. ಅಂದರೆ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣದ ಪ್ರಭಾವದಿಂದಾಗಿ ಮಾಧ್ಯಮಗಳು ಉದ್ಯಮಗಳಾಗಿ ಬೆಳೆದಿವೆ. ಮಾಧ್ಯಮಗಳು ಅತೀ ವೇಗದ ಸಂವಹನ ಸಂಪರ್ಕಿಸುವಲ್ಲಿ ಪೈಪೋಟಿ ನಡೆಸುತ್ತಿವೆ. ವ್ಯಾಪಾರೀಕರಣದ ದೃಷ್ಟಿಯಿಂದ ಉದ್ಯಮಗಳಾಗಿ ಬೆಳೆದಿರುವ ಮಾಧ್ಯಮಗಳು Competative ಆಗಿರುವುದು ಸಹಜವಾಗಿದೆ. ಇಲ್ಲಿ ಸಾರ್ವತ್ರಿಕ ಸಂವಹನದ ದೃಷ್ಟಿಯಿಂದ ದೃಶ್ಯ ಮತ್ತು ಶ್ರವ್ಯ ಮಾಧ್ಯಮ ಪ್ರಚುರತೆ ಹೊಂದಿದೆ. ತಕ್ಷಣದ ಸಂಪರ್ಕವನ್ನು ಒದಗಿಸುವಲ್ಲಿ ಅವು ಯಶಸ್ವಿಯಾಗುತ್ತಿವೆ. ಈ ಮುಖಾಂತರ ಸಾರ್ವತ್ರಿಕ ಅಭಿವೃದ್ಧಿಯೊಂದಿಗೆ ಭಾಷಾಭಿವೃದ್ಧಿಯೂ ಒಂದಂಶವಾಗಿದೆ. ಆದ್ದರಿಂದ ಇಂದು ಮಾಧ್ಯಮಗಳ ಅಧ್ಯಯನ ಹಾಗೂ ಮಾಧ್ಯಮಗಳ ಭಾಷೆ ಕುರಿತಾದ ಅಧ್ಯಯನಗಳು ಜರುಗುತ್ತಿವೆ.

ಈ ಹಿನ್ನೆಲೆಯಲ್ಲಿ ಟಿ.ವಿ. ಮಾಧ್ಯಮದಲ್ಲಿ ಪ್ರಸಾರಗೊಳ್ಳುವ ನಾನಾ ರೀತಿಯ ಕಾರ್ಯಕ್ರಮಗಳಲ್ಲಿ ಕ್ರೈಂನ್ಯೂಸ್ ಪ್ರಸಾರ ಒಂದು. ಅಂತಹ ಕ್ರೈಂನ್ಯೂಸ್ ಭಾಷೆ ಸಮಾಜದಲ್ಲಿ ಸಂವಹನಗೊಳ್ಳುತ್ತಿರುವ ಬಗ್ಗೆ ಹಾಗೂ ಅದರ ಪರಿಣಾಮ ಭಾಷೆ ರಚನೆ ಮತ್ತು ಬಳಕೆಯ ದೃಷ್ಟಿಯಿಂದ ಕುತೂಹಲ ಎನಿಸಿದೆ. ಕನ್ನಡ ವಾಹಿನಿಗಳಾದ 'ಉದಯ', 'ಈ ಟಿ.ವಿ. ಕನ್ನಡ', 'ಟಿ.ವಿ.೯', ಖಾಸಗಿ ಚಾನೆಲ್‌ಗಳಲ್ಲಿ Episodeಗಳಲ್ಲಿ ಪ್ರಸಾರವಾಗುವ ಕ್ರೈಂಸ್ಟೋರಿ, ಕ್ರೈಂಡೈರಿ, ವಾರೆಂಟ್ ಎಂಬುವ ಕಾರ್ಯಕ್ರಮಗಳನ್ನು ಅನುಲಕ್ಷಿಸಿ ಈ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನದಲ್ಲಿ ಕ್ರೈಂನ್ಯೂಸ್, ಕ್ರೈಂಡೈರಿ, ಕ್ರೈಂಸ್ಟೋರಿ ಮತ್ತು ವಾರೆಂಟ್‌ಗಳಲ್ಲಿ ಬಳಕೆಯಾಗುತ್ತಿರುವ ಭಾಷೆ ಹೇಗೆ ಬರಹದ ಕನ್ನಡ ಭಾಷೆಗಿಂತ ಮತ್ತು ಆಡುಮಾತಿನ ಕನ್ನಡಕ್ಕಿಂತ ಭಿನ್ನವಾಗಿದೆ ಎಂಬುದನ್ನು ವಿಶ್ಲೇಷಿಸುವುದೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಇಲ್ಲಿ ಆಡುವಂಥ ಮಾತು, ಬಳಸುವಂಥ ಭಾಷೆ - ನಿರೂಪಣೆ, ಕುತೂಹಲಭರಿತವಾಗಿದೆ. ಕೆಲವೊಮ್ಮೆ ವ್ಯಂಗ್ಯಾರ್ಥದಲ್ಲಿ ಬಳಕೆಯಾದರೆ ಮತ್ತೆ ಕೆಲವೊಮ್ಮೆ ನಾಟಕೀಯವಾಗಿಯೂ ಬಳಕೆಯಾಗುತ್ತಿರುವುದನ್ನು ನೋಡಬಹುದು. ಅಂದರೆ ವಿವಿಧ ವಲಯಗಳಲ್ಲಿ ಬಳಕೆ ಆಗುತ್ತಿರುವ ಕನ್ನಡ, ಕ್ರೈಂನ್ಯೂಸ್‌ನಲ್ಲಿ ವಿಭಿನ್ನವಾಗಿ ಹೇಗೆ ಬಳಕೆಯಾಗುತ್ತಿದೆಯೆಂಬುದನ್ನು ಗಮನಿಸುವುದು ಮತ್ತು ಇಲ್ಲಿ ಬಳಕೆಯಾಗುತ್ತಿರುವ ಧ್ವನಿ, ಪದ, ವಾಕ್ಯ ಮತ್ತು ಪದಕೋಶ ಹೇಗೆ ವಿಶಿಷ್ಟವಾಗಿದೆ, ಅದು ಜನಸಾಮಾನ್ಯರನ್ನು ಸುಲಭವಾಗಿ ಮುಟ್ಟುವಲ್ಲಿ ಯಶಸ್ವಿಯಾಗಿದೆಯೇ ಎಂಬುದನ್ನು ವಿಶ್ಲೇಷಿಸುವುದೂ ಕೂಡ ಈ ಅಧ್ಯಯನದ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ.

P.T.O

ಒಂದು ನಿರ್ದಿಷ್ಟ ವಲಯದ ಪದ ಬೇರೊಂದು ವಲಯದಲ್ಲಿ ಬಳಕೆಯಾಗುವುದರ ಹಿನ್ನೆಲೆ ತುಂಬಾ ಕುತೂಹಲಕರವಾಗಿದೆ. ಉದಾಹರಣೆಗೆ 'ಅಲಿಯಾಸ್' ಎಂಬ ಪದವು ರೆವಿನ್ಯೂ ವಲಯದಲ್ಲಿ ಹೆಚ್ಚು ಬಳಕೆಯಲ್ಲಿದೆ. ಅದು ಇಂದು ಕ್ರೈಂ ನ್ಯೂಸ್‌ಗಳಲ್ಲಿ ಹೆಚ್ಚು ಬಳಕೆಯಾಗುತ್ತಿರುವುದರ ಹಿಂದೆ ಇರುವ ಭಾಷಾ ರಾಜಕಾರಣ ಏನು ಎಂಬುದನ್ನು ತಿಳಿಯಬಹುದಾಗಿದೆ. ಅಂದರೆ ಅಪರಾಧ, ಕಾನೂನು, ವರದಕ್ಷಿಣೆ ಪಿಡುಗು, ಜೀತಪದ್ಧತಿ, ಮಹಿಳಾ ಶೋಷಣೆ, ಲೈಂಗಿಕ ವಿಚಾರಗಳು ಇನ್ನೂ ಮುಂತಾದ ವಲಯಗಳಲ್ಲಿ ಬೇರೆ ಬೇರೆ ಮಾದರಿಗಳ ಭಾಷೆ ವಿಶಿಷ್ಟವಾಗಿರುವುದನ್ನು ನೋಡಬಹುದು. ನಿರೂಪಕರು ತಾವು ನಿರೂಪಿಸುವ ವಿಷಯಕ್ಕನುಸಾರವಾಗಿ ಭಾಷಾಭೇದ ಇಲ್ಲದೆ ನುಡಿ ಪಲ್ಲಟ ಮತ್ತು ನುಡಿ ಮಿಶ್ರಣ ಮಾಡುವುದು ಹೆಚ್ಚು ಕಂಡು ಬರುತ್ತದೆ. ಈ ಎಲ್ಲಾ ದೃಷ್ಟಿಕೋನದಿಂದ ಕ್ರೈಂ ಭಾಷೆಯನ್ನು ಅಧ್ಯಯನ ಮಾಡುವುದು ಪ್ರಸ್ತುತ ನಿಬಂಧದ ಆಶಯವಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದಲ್ಲಿ ಮುಖ್ಯವಾಗಿ ಕ್ರೈಂನ್ಯೂಸ್‌ನಲ್ಲಿ ಬಳಕೆಯಾಗುವ ಭಾಷೆಯನ್ನು ಕುರಿತು ಚರ್ಚಿಸಲಾಗಿದೆ. ಅಧ್ಯಯನಕ್ಕೆ ಅನುಗುಣವಾಗಿ ಆಯ್ಕೆ ಮಾದರಿ (Shampling Method) ವಿಧಾನವನ್ನು ಅನುಸರಿಸಿದೆ. ಕ್ರೈಂಸ್ಟೋರಿ, ಕ್ರೈಂಡೈರಿ, ಕ್ರೈಂನ್ಯೂಸ್ ಮತ್ತು ವಾರೆಂಟ್‌ಗಳಲ್ಲಿ ಭಾಷಾಬಳಕೆ ವೈವಿಧ್ಯತೆಯಿಂದ ಕೂಡಿರುವುದಿಂದ ಅಂಥ ವೈವಿಧ್ಯತೆಯನ್ನು ಗುರುತಿಸಲು ನೇರವಾಗಿ ವೀಕ್ಷಿಸಿ ಅಧ್ಯಯನಕ್ಕೆ ಸೂಕ್ತವಾದ ಮಾಹಿತಿಗಳನ್ನು ಸಂಗ್ರಹಸಿಕೊಳ್ಳಲಾಗಿದೆ. ಟಿ.ವಿ.ಯಲ್ಲಿ ಪ್ರಸಾರಗೊಳ್ಳುವ ಕ್ರೈಂ ನ್ಯೂಸ್‌ಗಳನ್ನು ಧ್ವನಿ ಮುದ್ರಿಸಿಕೊಳ್ಳಲಾಗಿದೆ. ಪತ್ರಿಕೆಯಲ್ಲಿನ ಕ್ರೈಂನ್ಯೂಸ್‌ಗಳನ್ನು ಆಯ್ದುಕೊಂಡು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಅಲ್ಲದೆ ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಆಗಿರುವ ಅಧ್ಯಯನಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅಧ್ಯಯನದ ಪ್ರಾಮುಖ್ಯತೆ

ಪ್ರಸ್ತುತ ಅಧ್ಯಯನವು ಹಲವು ದೃಷ್ಟಿಕೋನಗಳಿಂದ ಮಹತ್ವಪೂರ್ಣವಾಗಿದೆ. ಕನ್ನಡ ಭಾಷೆಯಲ್ಲಿನ ಬಳಕೆ ಇತ್ತೀಚಿನ ದಿನಗಳಲ್ಲಿ ವೈವಿಧ್ಯತೆಯಿಂದ ಕೂಡಿದೆ. ಇದಕ್ಕೆ ಕಾರಣಗಳು ಇಲ್ಲದೇ ಇಲ್ಲ. ಅನೇಕ ಒತ್ತಡಗಳಿಂದ ಕನ್ನಡ ಭಾಷೆಯ ಬರಹ ಮತ್ತು ಆಡುಮಾತಿನ ಮಾದರಿಗಳು ವಿಸ್ತರಿಸಿಕೊಳ್ಳುತ್ತಿವೆ. ಉದಾಹರಣೆಗೆ ಸಮೂಹ ಮಾಧ್ಯಮಗಳಾದ ಪತ್ರಿಕೆ, ರೇಡಿಯೋ, ದೂರದರ್ಶನ, ಆಡಳಿತ ಮತ್ತು ಕಾನೂನು ಮುಂತಾದ ವಲಯಗಳು. ಇವುಗಳಲ್ಲಿ ಕನ್ನಡ ಭಾಷೆಯ ಬಳಕೆಯ ವಲಯಗಳು ವಿಸ್ತರಿಸಿದಷ್ಟು ಬಳಕೆ ಮಾಡಬೇಕಾದ ರೂಪಗಳ ಬಗೆಗೆ ಗೊಂದಲ ಸೃಷ್ಟಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾ

ಬಳಕೆಯ ಮಾದರಿಗಳನ್ನು ಗುರುತಿಸಿ ಅವುಗಳ ಬಳಕೆಯ ಸ್ವರೂಪವನ್ನು ವಿಶ್ಲೇಷಿಸುವುದರಿಂದ ಪ್ರಸ್ತುತ ಅಧ್ಯಯನವು ಮಹತ್ವದ್ದಾಗಿದೆ. ಇಂತಹ ಅಧ್ಯಯನಗಳು ಕನ್ನಡದಲ್ಲಿ ಹೆಚ್ಚು ಹೆಚ್ಚು ಆಗಬೇಕಿದೆ. ಪ್ರಸ್ತುತ ಅಧ್ಯಯನವು ಇನ್ನೂ ವಿಸ್ತೃತವಾದ ಆಳವಾದ ಅಧ್ಯಯನಕ್ಕೆ ಪ್ರೇರಣೆ ನೀಡಿದರೆ ಈ ಪ್ರಯತ್ನ ಸಾರ್ಥಕವೆನ್ನಬಹುದು.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವನ್ನು ಕ್ರೈಂನ್ಯೂಸ್, ಕ್ರೈಂಸ್ಟೋರಿ, ಕ್ರೈಂಡೈರಿ ಮತ್ತು ವಾರೆಂಟ್‌ಗಳಲ್ಲಿ ಬಳಕೆಯಾಗಿರುವ ಭಾಷೆಯನ್ನು ಮಾತ್ರ ಕುರಿತು ಚರ್ಚಿಸಲಾಗಿದೆ. ಅದರಲ್ಲೂ ೨೦೦೬-೦೭ನೇ ಸಾಲಿನಲ್ಲಿ ಪ್ರಕಟವಾಗಿರುವ ಮಾಹಿತಿಯನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇದು ಒಂದು ಎಂ.ಫಿಲ್. ಅಧ್ಯಯನವಾಗಿರುವುದರಿಂದ ಇದು ಮಿತಿಯೂ ಹೌದು, ವ್ಯಾಪ್ತಿಯೂ ಹೌದು.

□□

ಅಧ್ಯಾಯ ೨

ಮಾಧ್ಯಮಗಳ ಹುಟ್ಟು ಮತ್ತು ಬೆಳವಣಿಗೆ

ಅಧ್ಯಾಯ ೨

ಮಾಧ್ಯಮಗಳ ಹುಟ್ಟು ಮತ್ತು ಬೆಳವಣಿಗೆ

ಸಮೂಹ ಮಾಧ್ಯಮಗಳು ಆಧುನಿಕ ತಂತ್ರಜ್ಞಾನದ ಕೊಡುಗೆ. ಇಪ್ಪತ್ತೊಂದನೆಯ ಶತಮಾನದ ಒಂದು ದೊಡ್ಡ ಪವಾಡವೆಂದರೂ ತಪ್ಪಲ್ಲ. ಸಮೂಹ ಮಾಧ್ಯಮಗಳೆಂದರೆ ಪತ್ರಿಕೆ, ರೇಡಿಯೋ ಮತ್ತು ಟೆಲಿವಿಷನ್ ಮುಂತಾದವು. ಸಮಾಜದಲ್ಲಿ ಇಂದು ಇವುಗಳ ಪಾತ್ರ ಮಹತ್ವವಾದುದು. ಇಂದಿನ ಮಾಹಿತಿಯುಗದಲ್ಲಿ ಅವುಗಳದ್ದೇ ಪೈಪೋಟಿ. ಇಂದು ಈ ಮಾಹಿತಿ ಸರಬರಾಜು ಒಂದು ಉದ್ಯಮವಾಗಿದೆ. ಮಾಹಿತಿ ತಂತ್ರಜ್ಞಾನದಿಂದ ವಿಶ್ವಮಟ್ಟದ ವ್ಯಾಪಾರ ವಹಿವಾಟು ಕ್ಷಣ ಮಾತ್ರದಲ್ಲಿ ನಡೆಯುತ್ತಿದೆ. ಅದಕ್ಕಾಗಿ ಕಾಲ್ ಸೆಂಟರ್‌ಗಳು ಸ್ಥಾಪಿತವಾಗಿವೆ. ಹಾಗೆಯೇ ಅಗಾಧವಾಗಿ ಬೆಳೆದಿದೆ. ಬೆಳೆಯುತ್ತಲಿದೆ. ಹೊಸ ಹೊಸ ಸಂವಹನ ಉಪಕರಣಗಳ ಆವಿಷ್ಕಾರವಾದ ಹಾಗೆ ಮಾನವ ಸಮಯ ಮತ್ತು ದೂರುಗಳನ್ನು ಗೆಲ್ಲುವ ಯಶಸ್ಸು ಗಳಿಸುತ್ತಿದ್ದಾನೆ. ಖ್ಯಾತ ಸಂವಹನ ತಜ್ಞ ಮಾರ್ಷೆಲ್ ಮ್ಯಾಕ್‌ಲೂಹನ್ ಹೇಳುವಂತೆ ಇಡೀ ಭೂಮಂಡಲವೇ ಒಂದು 'ವಿಶ್ವಗ್ರಾಮ'ವಾಗಿ ಪರಿವರ್ತನೆಗೊಂಡಿದೆ.

ಸಮೂಹ ಮಾಧ್ಯಮಗಳ ಆವಿಷ್ಕಾರಕ್ಕೆ ಮಾನವನ ಸಂವಹನದ ಭಾವನಾತ್ಮಕ ಒತ್ತಡವೇ ಕಾರಣ. ಸಂವಹನ ಪ್ರಕ್ರಿಯೆ ಪೂರ್ಣಗೊಳ್ಳಲು ಮಿಲಿಯಗಟ್ಟಲೇ ವರ್ಷಗಳು ಬೇಕಾದವು. ಭಾಷೆಗಳು ಬೆಳೆಯಬೇಕಿತ್ತು. ಆಗ ನಾಗರೀಕತೆಗಳು ವಿಕಾಸಗೊಂಡಂತೆ ಭಾಷೆಗಳು ಬದಲಾದಂತೆ ಸಂವಹನ ಜನಜೀವನದಲ್ಲಿ ಪ್ರಮುಖ ಪಾತ್ರ ವಹಿಸತೊಡಗಿತು. ಕೃಷಿ ಆಧಾರಿತ ಪಾರಂಪರಿಕ ಸಮಾಜದಲ್ಲಿ ಮೌಖಿಕ ಸಂವಹನವೇ ಮುಖ್ಯವಾಗಿತ್ತು. ಕೈಗಾರಿಕಾ ಕ್ರಾಂತಿಯೊಂದಿಗೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹೊಸ ಅರ್ಥ ಬಂದಿತು. ರಾಜಕೀಯ ಸಿದ್ಧಾಂತಗಳು ಬೆಳೆದವು. ಸಮೂಹ ಮಾಧ್ಯಮಗಳು ಯಂತ್ರಯುಗದ ಹರಿಕಾರ ಎನಿಸಿದವು.

ಸಾಮಾಜಿಕ ಸಂವಹನ ಇಂದು ಮಾಧ್ಯಮಗಳ ಮುಖೇನ ಜರುಗುತ್ತಿವೆ. ಇವೆಲ್ಲಕ್ಕೂ ಭಾಷೆ ಮಾಧ್ಯಮವಾಗಿದೆ. ಇಂಥ ಮಾಧ್ಯಮಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ಇಲ್ಲಿ ನೋಡುವುದು ಔಚಿತ್ಯವಾಗಿದೆ. ಮಾನವನ ಉಗಮದೊಂದಿಗೆ ಸಂವಹನ ನಡೆದು ಬಂದ ಬಗೆ ವಿಸ್ಮಯವಾದುದು.

ಜೀವವಿಕಾಸದಲ್ಲಿ ಮಾನವ ಭಾಷೆ ಮತ್ತು ಸಂವಹನ ವಿಸ್ಮಯ. ಅದು ವಿಕಾಸಗೊಂಡು ಸಮೂಹ ಸಂವಹನ ಮಾಧ್ಯಮಗಳು ಹುಟ್ಟಿಕೊಂಡವು. ಅವುಗಳು ಬೆಳೆದು ಬಂದ ಬಗೆಯನ್ನು ಇಲ್ಲಿ ಚರ್ಚಿಸಲಾಗಿದೆ.

*** ಪತ್ರಿಕೆ**

ಸಮೂಹ ಮಾಧ್ಯಮಗಳಲ್ಲಿ ಪತ್ರಿಕೆಗೆ ಪ್ರಮುಖ ಸ್ಥಾನವಿದೆ. 'ಪತ್ರಿಕೆ' ಎಂದರೆ ಕೇವಲ ವೃತ್ತಪತ್ರಿಕೆಯಾಗಿರದೆ ಇಡೀ ಪತ್ರಿಕಾ ಪ್ರಪಂಚವೇ ಆಗಿದೆ. ಇಂಗ್ಲೀಶಿನ Press ಪದಕ್ಕೆ ಸಂವಾದಿಯಾಗಿ 'ಪತ್ರಿಕೆ' ಎಂಬ ಪದವನ್ನು ನಾವು ಬಳಸುತ್ತಿದ್ದೇವೆ. ಪತ್ರಿಕೆಯ ಮೂಲ ಉದ್ದೇಶ ಪರಿಸರದ ಸುದ್ದಿಯನ್ನು ಜನಸಮೂಹಕ್ಕೆ ಬಿತ್ತರಿಸುವುದು. ಆ ಮೂಲಕ ಜನಾಂಗದ ಸರ್ವಾಂಗೀಣ ಪ್ರಗತಿ ಸಾಧಿಸುವುದು. 'ಸುದ್ದಿ' ಎಂಬ ಪದವನ್ನು ಇಂಗ್ಲೀಶಿನ 'NEWS' ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತದೆ. NEWS ಎಂದರೆ ಸಾಮಾನ್ಯವಾಗಿ ಸುದ್ದಿ ಸಮಾಚಾರ. ಸುತ್ತಲಿನ ಪರಿಸರದ ಸುದ್ದಿ ಎಂದು ಅರ್ಥ. NEWS ಎಂಬುದರ ವಿಸ್ತೃತ ರೂಪ ಹೀಗಿದೆ.

N = North
E = East
W = West
S = South

} ಈ ನಾಲ್ಕು ದಿಕ್ಕಿನ ಸುದ್ದಿಯನ್ನು NEWS ಎಂದು ಕರೆಯುತ್ತಾರೆ. ('ನ್ಯೂಸ್' ಎಂದಿದ್ದಾರೆ.)

"ಸಾರ್ವಜನಿಕ ಸುದ್ದಿಗಳನ್ನು, ಸಾರ್ವಜನಿಕ ಅಭಿಪ್ರಾಯಗಳನ್ನು ಮತ್ತು ಸಾರ್ವಜನಿಕ ಸತ್ಯದ ಮತ್ತು ವಿನೋದಗಳನ್ನು ಆಧುನಿಕ ಪ್ರಚಾರ ಮಾರ್ಗಗಳ ಮೂಲಕ ಕ್ರಮಬದ್ಧವಾಗಿ ನಂಬಿಕೆಗರ್ಹವಾಗುವಂತೆ ಪ್ರಚಾರ ಪಡಿಸುವ ಸಾಧನವೇ ಪತ್ರಿಕೋದ್ಯಮ". ಅಮೆರಿಕಾದ ವಿದ್ವಾಂಸನಾದ ರೋಲೆಂಡ್-ಇ-ವುಲ್‌ಸೆಲ್ ಇವರ ಈ ಮಾತುಗಳು ಪತ್ರಿಕೆಯ ಸ್ವರೂಪ ಹಾಗೂ ಉದ್ದೇಶಗಳನ್ನು ಸ್ಪಷ್ಟಪಡಿಸುತ್ತವೆ.

೧. ಪತ್ರಿಕೆಯನ್ನು ರಾಷ್ಟ್ರಾಡಳಿತದ ನಾಲ್ಕನೇ ಸ್ತಂಭ ಎನ್ನಬಹುದು.

೨. ಇದೊಂದು ಖಾಸಗೀ ಉದ್ಯಮ ಸಂಪೂರ್ಣ ಸ್ವಾತಂತ್ರ್ಯವಾಗಿ ಉಸಿರಾಡುತ್ತದೆ.

೩. ಒಂದು ರಾಷ್ಟ್ರದ ಅಳಿವು, ಉಳಿವು ಹಾಗೂ ಬೆಳವಣಿಗೆಗೆ ಕಾರಣವಾಗಬಲ್ಲ ಅದ್ಭುತ ಶಕ್ತಿ ಇದಕ್ಕಿದೆ.

೪. ದೇಶದ ಸ್ವಾತಂತ್ರ್ಯ, ಐಕ್ಯತೆ, ಸಮಗ್ರತೆಗಳನ್ನು ಉಳಿಸಿಕೊಳ್ಳುವುದರಲ್ಲಿ ಆಸಕ್ತಿ.

೫. ದೇಶದ ಸರ್ವಾಂಗೀಣ ಅಭಿವೃದ್ಧಿಯಲ್ಲಿಯೂ ಸಕ್ರಿಯ ಪಾತ್ರವಹಿಸಿ ಅತ್ಯಂತ ಧೈರ್ಯ ಹಾಗೂ ಶ್ರದ್ಧೆಯಿಂದ ಕಾರ್ಯ ನಿರ್ವಹಿಸುತ್ತದೆ.

* ಪತ್ರಿಕೆಯ ಹುಟ್ಟು ಮತ್ತು ಬೆಳವಣಿಗೆ

ಮಾನವ ಮೊದಲು ಕಾಡಿನಲ್ಲಿ ಒಂಟಿ ಜೀವಿಯಾಗಿದ್ದನು. ನಂತರ ಸಮಾಜ ಜೀವನ ಮಾಡಿ ಸಂಘಜೀವಿಯಾದ. ಸಮಾಜ ಜೀವಿಯಾಗಿ ಬಾಳಲು ಬಮಸಲು ಆರಂಭಿಸಿದೊಡನೆ ತನ್ನ ಆಸೆ ಆಕಾಂಕ್ಷೆಗಳು ಬೇಕು-ಬೇಡಗಳನ್ನು ಆಲೋಚನೆ-ಆದೇಶಗಳನ್ನು ತಿಳಿಯಲು ಆತನಿಗೆ ಸಮೂಹ ಮಾಧ್ಯಮಗಳ ಅನಿವಾರ್ಯ ಉಂಟಾಯಿತು. ಮೊದಲು ಅಂಗಚೇಷ್ಟೆ ಮತ್ತು ವಸ್ತುಗಳ ಮುಖಾಂತರ ಸಂಪರ್ಕಿಸತೊಡಗಿದ. ನಂತರ ಭಾಷೆ ಸೃಷ್ಟಿಗೊಂಡಾಗ ಅದನ್ನು ಮಾಧ್ಯಮವನ್ನಾಗಿ ಬಳಸಿಕೊಂಡ. ನಂತರದಲ್ಲಿ ಲಿಪಿ ಕಂಡುಕೊಂಡ. ಹೀಗೆ ಬೌದ್ಧಿಕ ಬೆಳವಣಿಗೆ ಔದ್ಯೋಗಿಕ ಕ್ರಾಂತಿಯಿಂದ ಅದರ ಫಲ ಸ್ವರೂಪವಾಗಿ ಹೊಸ ಆಧುನಿಕ ಯಂತ್ರಗಳ ಆವಿಷ್ಕಾರಗಳನ್ನು ಬೆಳೆಸಿಕೊಂಡ. ಇಂದಿನ ಮುದ್ರಣ ಯಂತ್ರಗಳ ಪೂರ್ವದಲ್ಲಿ ಕಲ್ಲಚ್ಚನ್ನು ಬಳಸುತ್ತಿದ್ದರು.

ಚೀನಾ ದೇಶ ಕ್ರಿ.ಶ. ೭೯೩ ರಲ್ಲಿ ಕಾಗದ ಸಿದ್ಧಗೊಳಿಸಿ ಕ್ರಿ.ಶ. ೮೬೮ ರಲ್ಲಿ 'ಹಿರಾಕ ಸೂತ್ರ' ಎಂಬ ಕೃತಿ ಅಚ್ಚು ಮಾಡಿದರು. ಇದು ಚೀನಾ ದೇಶವು ಪ್ರಪಂಚದ ಮುದ್ರಣ ಕಲೆಗೆ ನೀಡಿದ ಪ್ರಥಮ ಕಾಣಿಕೆ. ಈ ದಿಶೆಯಲ್ಲಿ ಸಂಶೋಧನೆಗಳು ಮುಂದುವರೆದು, ಮುದ್ರಣ ಯಂತ್ರ, ಅಚ್ಚಿನ ಮೊಳೆಗಳು ಸಂಶೋಧಿಸಲ್ಪಟ್ಟವು. ೧೫ನೇ ಶತಮಾನದ ಕೊನೆಗೆ ಇಂಗ್ಲೆಂಡಿನ 'ವೆಲ್‌ಪೇಲ್'ದಲ್ಲಿ ಆಂಗ್ಲಭಾಷೆಯ ಮುದ್ರಣಾಲಯ ಸ್ಥಾಪನೆಯಾಯಿತು. ಅತಿ ಶೀಘ್ರವಾಗಿ ಈ ಯಂತ್ರ ಪ್ರಪಂಚದ ಅನೇಕ ದೇಶಗಳಿಗೆ ರವಾನೆಯಾಯಿತು. ಕ್ರಿ.ಶ. ೧೬೧೫ರಲ್ಲಿ ಪ್ರಕಟವಾದ 'ಜರ್ಮನ್ ಪತ್ರಿಕೆ' ಪ್ರಪಂಚದ ಮೊದಲ ಪತ್ರಿಕೆ. ಔದ್ಯೋಗಿಕ ಕ್ರಾಂತಿ ಪರಿಣಾಮದಿಂದ ಪತ್ರಿಕೆಗೆ ಮಾರುಕಟ್ಟೆ ದೊರೆಯಿತು. ಕ್ರಿ.ಶ. ೧೯೩೦ರಲ್ಲಿ ಅಮೆರಿಕಾದಲ್ಲಿ ಹುಟ್ಟಿಕೊಂಡ ಪೆನ್ನಿ ಹೆಸರಿನ ಪತ್ರಿಕೆ. ನಿಜವಾಗಿ ಪ್ರಥಮ ಸಮೂಹ ಮಾಧ್ಯಮದ ಪತ್ರಿಕೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಭಾರತದಲ್ಲಿ ಕ್ರಿಶ್ಚಿಯನ್ ಮಿಶನರಿಗಳ ಪ್ರಯತ್ನದ ಫಲವಾಗಿ ಪಾಶ್ಚಾತ್ಯ ದೇಶಗಳಿಂದ ನಮ್ಮ ದೇಶಕ್ಕೆ ಮುದ್ರಣ ಯಂತ್ರಗಳು ಹೆಜ್ಜೆ ಇಟ್ಟವು. ಕ್ರಿ.ಶ. ೧೫೫೬ ರಲ್ಲಿ ಗೋವಾದಲ್ಲಿ ಮುದ್ರಣ ಯಂತ್ರ ಸ್ಥಾಪಿಸಲ್ಪಟ್ಟಿತು. ದೇಶದ ಪ್ರಥಮ ಮುದ್ರಣ ಯಂತ್ರ ಇಲ್ಲಿ ಬರೀ ಕ್ರಿಶ್ಚಿಯನ್ನರ ಧರ್ಮೋಪದೇಶದ ಬೈಬಲ್ ಧರ್ಮಗ್ರಂಥಗಳು ಮಾತ್ರ ಅಚ್ಚಾಗುತ್ತಿದ್ದವು. ಕ್ರಿ.ಶ. ೧೭೮೦ ಜನವರಿ ೨೯ ರಂದು ಜೇಮ್ಸ್ ಅಗಸ್ಟಸ್ ಹಿಕ್ಕಿ ಎಂಬ ಆಂಗ್ಲ ವಿದ್ವಾಂಸ ಕಲ್ಕತ್ತದಲ್ಲಿ 'The Bengal Gazett' ಎಂಬ ಪತ್ರಿಕೆ ಮುದ್ರಿಸಿ ಪ್ರಕಟಿಸಿದ. ಇದು ಭಾರತದ ಪ್ರಥಮ ಪತ್ರಿಕೆ. ಅನೇಕ ತೊಂದರೆಗಳ ಮಧ್ಯೆದಲ್ಲಿಯೂ ಜೇಮ್ಸ್ ಅಗಸ್ಟಸ್ ಹಿಕ್ಕಿ ಅತ್ಯಂತ ಧೈರ್ಯದಿಂದ 'The Bengal Gazett' ಎಂಬ ತನ್ನ ಪತ್ರಿಕೆಯನ್ನು ಮುಂದುವರಿಸಿ ಭಾರತೀಯ ಪತ್ರಿಕೋದ್ಯಮಗಳಿಗೆ ಮಾರ್ಗದರ್ಶಿಯಾದ್ದರಿಂದ ಇವನನ್ನು "ಭಾರತೀಯ ಪತ್ರಿಕೋದ್ಯಮದ ಪಿತಾಮಹ" ಎಂದು ಕರೆಯಲಾಗುತ್ತದೆ.

ದೇಶ ಭಾಷಾ ಪತ್ರಿಕೆಗಳನ್ನು ಹೊರಡಿಸಿ ಪತ್ರಿಕಾ ಪ್ರಪಂಚಕ್ಕೆ ಭಾರತದಲ್ಲಿ ಭದ್ರ ನೆಲೆ ಹಾಕಿದವರು ರಾಜಾರಾಮ ಮೋಹನರಾಯ್ ಮತ್ತು ಜೋಷಿ ಇವರು ಅವಿಸ್ಮರಣೀಯರು. ಕನ್ನಡ ನಾಡಿನಲ್ಲಿ ಪತ್ರಿಕೆ ಆರಂಭ ಕ್ರಿ.ಶ. ೧೮೨೭ ರಲ್ಲಿ ಬಳ್ಳಾರಿಯಲ್ಲಿ ಮೊದಲ ಮುದ್ರಣ ಯಂತ್ರ ಸ್ಥಾಪನೆ ನಂತರ ಬೆಂಗಳೂರು, ಮೈಸೂರು, ಮಂಗಳೂರು ಮತ್ತು ಬೆಳಗಾವಿಯಲ್ಲಿ ಸ್ಥಾಪನೆಯಾಯಿತು. ಕ್ರಿ.ಶ. ೧೮೪೩ ರಲ್ಲಿ ಕನ್ನಡದ ಮೊಟ್ಟಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' ಪ್ರಕಟಗೊಂಡಿತು.

ಕನ್ನಡ ಪತ್ರಿಕೋದ್ಯಮದಲ್ಲಿ ಪ್ರಾರಂಭದ ದಿನಗಳಲ್ಲಿ ನೇತಾರರಾಗಿ ಕಾರ್ಯ ನಿರ್ವಹಿಸಿದವರು ಶ್ರೀ ಎಂ. ವೆಂಕಟಕೃಷ್ಣಯ್ಯ, ಡಿ.ವಿ.ಜಿ., ತಿರುಮಲೆ ತಾತಾಚಾರ್ಯ, ಸಿದ್ಧವನಹಳ್ಳಿ ಕೃಷ್ಣಶರ್ಮ ಮುಂತಾದವರು.

ಕ್ರಿ.ಶ. ೧೯೨೬ ರಲ್ಲಿ ತಾಯಿನಾಡು (ಮೈಸೂರು)

ಕ್ರಿ.ಶ. ೧೯೩೧ ರಲ್ಲಿ ಪ್ರಜಾಮತ (ಮೈಸೂರು)

ಕ್ರಿ.ಶ. ೧೯೩೩ ರಲ್ಲಿ ಸಂಯುಕ್ತ ಕರ್ನಾಟಕ (ಹುಬ್ಬಳ್ಳಿ)

ಕ್ರಿ.ಶ. ೧೯೩೮ ರಲ್ಲಿ ಸಂಯುಕ್ತ ಕರ್ನಾಟಕ (ಬೆಂಗಳೂರು)

ಕ್ರಿ.ಶ. ೧೯೪೧ ರಲ್ಲಿ ನವಭಾರತ (ಮಂಗಳೂರು)

ಕ್ರಿ.ಶ. ೧೯೪೮ ರಲ್ಲಿ ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ

ಕ್ರಿ.ಶ. ೧೯೬೫ ರಲ್ಲಿ ಸುಧಾ ಪತ್ರಿಕೆ

ಕ್ರಿ.ಶ. ೧೯೬೮ ರಲ್ಲಿ ಕನ್ನಡ ಪ್ರಭ

ಕ್ರಿ.ಶ. ೧೯೭೧ ರಲ್ಲಿ ಉದಯವಾಣಿ ಇತ್ಯಾದಿಯಾಗಿ ಅನೇಕ ಪತ್ರಿಕೆಗಳು ಹುಟ್ಟಿಕೊಂಡವು. ಇತ್ತೀಚಿಗೆ 'ವಿಜಯ ಕರ್ನಾಟಕ' ಎಂಬ ಪತ್ರಿಕೆಯು ಪ್ರಕಟಗೊಂಡು ಜನಪ್ರಿಯ ಪತ್ರಿಕೆಯಾಗಿದೆ. ವಿಜಯ ಸಂಕೇಶ್ವರರ ನೇತೃತ್ವದಲ್ಲಿ ಈ ಪತ್ರಿಕೆ ನಾಡಿನಾದ್ಯಂತ ಪ್ರಚಾರ ಪಡೆದಿದೆ. ವಿ.ಆರ್.ಎಲ್.ನ ಸಂಪರ್ಕ ವ್ಯವಸ್ಥೆಯಲ್ಲಿ ಅನುಕೂಲಕರವಾಗಿ ಈ ಪತ್ರಿಕೆ ಪ್ರಸಾರಗೊಳ್ಳುತ್ತಿದೆ.

*** ಪತ್ರಿಕೆಯ ಪ್ರಕಾರಗಳನ್ನು ಈ ರೀತಿ ವಿಂಗಡಿಸಬಹುದು.**

೧. ವೃತ್ತ ಪತ್ರಿಕೆ

೨. ವಾರ ಪತ್ರಿಕೆ

೩. ಅರೆಮಾಸಿಕ ಅಥವಾ ಪಾಕ್ಷಿಕ ಪತ್ರಿಕೆ

೪. ಮಾಸಿಕ ಪತ್ರಿಕೆ

೫. ದ್ವೈಮಾಸಿಕ

೬. ತ್ರೈಮಾಸಿಕ

೭. ಚತುರ್ಮಾಸಿಕ

೮. ಷಣ್ಮಾಸಿಕ

೯. ವಾರ್ಷಿಕ ಪತ್ರಿಕೆ ಎಂದು ಒಂದು ರೀತಿಯ ವಿಂಗಡನೆಯಿದೆ.

ಇನ್ನೊಂದು ರೀತಿ ವಿಂಗಡಣೆ ಹೀಗಿದೆ.

೧. **ಸಾಮಾಜಿಕ ವಿಷಯಕ್ಕೆ ಸಂಬಂಧಿಸಿದ ಪತ್ರಿಕೆಗಳು :** ಸುಧಾ, ತರಂಗ, ಪ್ರಜಾಮತ, ಮಂಗಳ, ಸಂಗಾತಿ, ವನಿತಾ, ಕರ್ಮವೀರ.

೨. **ರಾಜಕೀಯ ವಿಷಯಕ್ಕೆ ಸಂಬಂಧಿಸಿದ ಪತ್ರಿಕೆಗಳು :** ಲಂಕೇಶ, ಸುದ್ದಿಸಂಗಾತಿ, ಪ್ರಪಂಚ, ಕೆಂಬಾವುಟ, ಐಕ್ಯರಂಗ, ಸಂಕೇತ, ಹಾಯ್ ಬೆಂಗಳೂರು, ಅಗ್ನಿ ಇತ್ಯಾದಿ.

೩. **ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದ ಪತ್ರಿಕೆಗಳು :** ಲಿಂಗಾಯತ, ಕಲ್ಯಾಣ ಕಿರಣ, ಬಸವ ಮಾರ್ಗ, ಮಾಮಿಡಿ, ಲಿಂಗನುಡಿ, ವಿವೇಕವಾಣಿ, ವಿವೇಕ ಸಂಪದ, ವಾಲ್ಮೀಕಿವಾಣಿ, ಮಂಜುವಾಣಿ, ಓಶೋ ವಚನ, ಅಧ್ಯಾತ್ಮ ಪ್ರಕಾಶ.

೪. **ಸಾಹಿತ್ಯಕ ವಿಷಯಕ್ಕೆ ಸಂಬಂಧಿಸಿದ ಪತ್ರಿಕೆಗಳು :** ಪ್ರಬುದ್ಧ ಕರ್ನಾಟಕ, ಮಯೂರ, ತುಷಾರ, ಮಲ್ಲಿಗೆ, ಕಸ್ತೂರಿ, ಸಂಕ್ರಮಣ, ಋಜುವಾತು, ಅನ್ವೇಷಣೆ, ಹೊಸತು, ಸಂವಾದ, ಹೊನ್ನಾರು ಇತ್ಯಾದಿ.

೫. **ಸಿನಿಮಾ ಪತ್ರಿಕೆಗಳು :** ರೂಪತಾರ, ಅರಗಿಣಿ, ಸೂರ್ಯ ಇತ್ಯಾದಿ

೬. **ಇತರೆ :** ಪೊಲೀಸ್ ನ್ಯೂಸ್, ಪೊಲೀಸ್ ಸ್ಟೋರಿ, ಕ್ರೈಂ ನ್ಯೂಸ್, ಕ್ರಿಮಿನಲ್ ಡೈರಿ ಇತ್ಯಾದಿ.

*** ಪತ್ರಿಕಾ ಲೋಕದ ಕಾರ್ಯಕರ್ತರು**

೧. ವರದಿಗಾರರು

೨. ವಿಶೇಷ ವರದಿಗಾರರು

೩. ವಿಶೇಷ ಲೇಖಕರು

೪. ಸಾಹಿತ್ಯ ವಿಮರ್ಶಕರು

೫. ಸಂಗೀತ ವಿಮರ್ಶಕರು

೬. ನಾಟಕ ವಿಮರ್ಶಕರು

೭. ಚಿತ್ರಶಿಲ್ಪ ವಿಮರ್ಶಕರು

೮. ಫೋಟೋಗ್ರಾಫರ್

೯. ಉಪಸಂಪಾದಕರು

೧೦. ಸಂಪಾದಕರು ಇತ್ಯಾದಿ ಪತ್ರಿಕಾ ಲೋಕದಲ್ಲಿ ಕೆಲಸ ನಿರ್ವಹಿಸುವವರು.

*** ಕಾರ್ಯಕರ್ತರ ಕರ್ತವ್ಯಗಳು**

೧. ಸುದ್ದಿ ಸ್ವೀಕಾರ

೨. ವಿಶ್ಲೇಷಣೆ

೩. ಜೋಡಣೆ ಮತ್ತು ಅಂತಿಮ ರೂಪ ನೀಡುವಿಕೆ ಕರ್ತವ್ಯವಾಗಿದೆ.

ಈ ರೀತಿ ಪತ್ರಿಕಾ ಮಾಧ್ಯಮದ ಉಗಮ ಮತ್ತು ವಿಕಾಸವನ್ನು ನೋಡುತ್ತೇವೆ. ಆಧುನಿಕ ಯುಗದಲ್ಲಿ ಪತ್ರಿಕೋದ್ಯಮ ಮಹತ್ವದ ಪಾತ್ರವನ್ನು ವಹಿಸುತ್ತದೆ. ಹಾಗೆಯೇ ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಸಮಾಜದಲ್ಲಿ ಸಂವಹನ ಮಾಧ್ಯಮವಾಗಿ ಬೆಳೆದಿದೆ. ಜೊತೆಗೆ ಭಾಷೆಯನ್ನು ಹೆಚ್ಚಾಗಿ ದುಡಿಸಿಕೊಳ್ಳುವ ಕ್ಷೇತ್ರ ಇದಾಗಿದೆ.

*** ಆಕಾಶವಾಣಿ**

ಕ್ರಿ.ಶ. ೧೮೯೪ ರಲ್ಲಿ ಮಾರ್ಕೋನಿಯು ರೇಡಿಯೋ ಶೋಧನದಲ್ಲಿ ತೊಡಗಿದ್ದನು. ಈ ಹಿಂದೆ ಶೋಧ ಮಾಡಿದ್ದ ಹರ್ಟ್ಸ್‌ನ್ನನ ತರಂಗಗಳನ್ನು ಕುರಿತು ಅಧ್ಯಯನ ಕೈಗೊಂಡನು. ಇದೇ ಸಮಯದಲ್ಲಿ ರಷ್ಯಾದ ವಿಜ್ಞಾನಿಗಳು ಸರ್ ಅಲಿವರ್‌ಲಾಜ್ ಮತ್ತು ಎ.ಎಸ್. ಪಾಪೋಟ್ ಅವರು ಹರ್ಟ್ಸ್‌ನ್ನನ ವೇವ್ಸ್ ಬಗೆಗೆ ಅಭ್ಯಾಸಕ್ಕೆ ತೊಡಗಿದ್ದರು. ಆದರೆ ಇವರಲ್ಲಿ ಕೊನೆಗೆ ಜಯ ಸಿಕ್ಕಿದ್ದು ಮಾತ್ರ ಮಾರ್ಕೋನಿಗೆ. ಎಲ್ಲರೂ ಮಾರ್ಕೋನಿಯನ್ನು ಆಕಾಶವಾಣಿಯ ಸಂಶೋಧಕನೆಂದು ಸರ್ವಾನುಮತದಿಂದ ಒಪ್ಪಿಕೊಂಡರು. ಕ್ರಿ.ಶ. ೧೮೯೭ ರಲ್ಲಿ ಮಾರ್ಕೋನಿ ತಯಾರಿಸಿದ್ದ ಆಕಾಶವಾಣಿ ಮಾಧ್ಯಮದಿಂದ ಸಂದೇಶವನ್ನು ಕಳುಹಿಸಿದನು. ಅದು ಸುಮಾರು ೨೯ ಕಿ.ಮೀ.ಗಳ ಅಂತರವನ್ನು ಉಪಕ್ರಮಿಸಿತು.

ಮಾರ್ಕೋನಿ ತಾನು ತನ್ನದೇ ಆದ ಒಂದು 'ರಿಸ್ಪಿವರ್' ತಯಾರಿಸಿದ್ದನು. ಅದನ್ನು 'ಕೋಹಿರರ್' ಎಂದು ಹೆಸರಿಸಲಾಯಿತು. ಕಬ್ಬಿಣದ ಲೋಹದಿಂದ ಅದನ್ನು ತಯಾರಿಸಲಾಗಿತ್ತು. ಕೆಲವು ವರ್ಷಗಳಲ್ಲಿಯೇ ಈ ಆಕಾಶವಾಣಿಯು ತನ್ನ ಪೂರ್ಣ ರೂಪವನ್ನು ಪಡೆದುಕೊಳ್ಳುವಂತಾಯಿತು. ಕ್ರಿ.ಶ. ೧೯೦೬ ರಲ್ಲಿ ಮೊಟ್ಟ ಮೊದಲನೆಯ ಭಾಷಣದ ಪ್ರಸಾರ ಕಾರ್ಯವನ್ನು ಅಮೆರಿಕಾದಲ್ಲಿ ಮತ್ತು ಜರ್ಮನಿಯಲ್ಲಿ ಮಾಡಲಾಯಿತು. ಕ್ರಿ.ಶ. ೧೯೨೧ ರಲ್ಲಿ ಅಮೆರಿಕಾದಲ್ಲಿ ಮೊಟ್ಟಮೊದಲ ಪ್ರಸಾರಕೇಂದ್ರ ಸ್ಥಾಪಿತವಾಯಿತು. ಕ್ರಿ.ಶ. ೧೯೨೨ ರಲ್ಲಿ ಬಿ.ಬಿ.ಸಿ. ಲಂಡನ್ ಕೇಂದ್ರವು ವ್ಯಾಪಾರಿ ಸಂಸ್ಥೆಯಾಗಿ ತಲೆ ಎತ್ತಿತ್ತು. ಭಾರತ ದೇಶದಲ್ಲಿ ಕ್ರಿ.ಶ. ೧೯೨೭ರ ಜುಲೈ ೨೩ ರಂದು ಆಕಾಶವಾಣಿಯ ಪ್ರಸಾರ ಕಾರ್ಯ ಪ್ರಾರಂಭವಾಯಿತು. ಕ್ರಿ.ಶ. ೧೯೨೬ ರಲ್ಲಿ 'Indian Broadcosting Company' ಮೈದಾಳಿತು. ಕ್ರಿ.ಶ. ೧೯೨೭ ರಲ್ಲಿ ಜುಲೈ ೨೩ ರಂದು ಮುಂಬೈನಲ್ಲಿ ಒಂದು ಕೇಂದ್ರ ಸ್ಥಾಪಿಸಲಾಯಿತು. ಕ್ರಿ.ಶ. ೧೯೨೭ ರ ಆಗಸ್ಟ್ ೨೬ ರಂದು ಕಲ್ಕತ್ತಾದಲ್ಲಿ ಒಂದು ರೇಡಿಯೋ ಕೇಂದ್ರ ಆರಂಭವಾಯಿತು. ೧೯೩೫ ರಲ್ಲಿ AIR ಎಂದು ನಾಮಕರಣವಾಯಿತು.

ಕರ್ನಾಟಕದಲ್ಲಿ ಕ್ರಿ.ಶ. ೧೯೫೦ ಜನವರಿ ೮ ರಂದು ಧಾರವಾಡ ಆಕಾಶವಾಣಿ ಕೇಂದ್ರ ಸ್ಥಾಪನೆಯಾಯಿತು. ಕ್ರಿ.ಶ. ೧೯೫೫ ರ ನವೆಂಬರ್ ೭ ರಂದು ಬೆಂಗಳೂರು ಆಕಾಶವಾಣಿ ಕೇಂದ್ರ ಸ್ಥಾಪನೆಯಾಯಿತು. ಅಂದಿನಿಂದ ಕನ್ನಡದಲ್ಲಿ ಕಾರ್ಯಕ್ರಮ ಪ್ರಸಾರವಾಗಿ ಸಮಾಜದ ಸಂವಹನೆಗೆ ತೊಡಗಿತು. ಈ ಸಂವಹನದ ಬಗೆಗೆ ಮುಂದೆ ಚರ್ಚಿಸಲಾಗಿದೆ.

*** ಆಕಾಶವಾಣಿ ಮತ್ತು ಸಂವಹನ**

ಸಂವಹನ ವಿಧಾನಗಳಲ್ಲಿ ಮುಖಾಮುಖಿ ಸಂಪರ್ಕವೇ ಅತ್ಯಂತ ಪರಿಣಾಮಕಾರಿ ವಿಧಾನ. ಕೇಳುವ ವ್ಯಕ್ತಿ ನಮ್ಮೆದುರಿಗೇ ಇದ್ದು ನಮ್ಮನ್ನು ನೋಡುತ್ತಲೇ ನಮ್ಮ ಮಾತನ್ನು ಕೇಳಿಸಿಕೊಳ್ಳುತ್ತಲೂ ಇರುತ್ತಾನೆ. ನಾವು ಬಳಸುವ ಅಂಗಾಂಗಗಳ ಹಾವಭಾವಗಳ ಜೊತೆಗೆ ನಾವು ತೋರಿಸುವ ಚಿತ್ರ ವಸ್ತುಗಳನ್ನು ನೋಡಬಲ್ಲವನಾಗಿರುತ್ತಾನೆ. ಅಂದರೆ ಆತನ ಜ್ಞಾನೇಂದ್ರಿಯಗಳ ಪೈಕಿ ಅತ್ಯಂತ ಪ್ರಮುಖವಾದ ಎರಡು ಕಣ್ಣು ಮತ್ತು ಕಿವಿ ಸಂಯುಕ್ತವಾಗಿ ಈಗ ಸಂವಹನವನ್ನು ಸ್ವೀಕರಿಸುವುದರಲ್ಲಿ ತೊಡಗಿರುತ್ತವೆ. ಹೀಗಾಗಿ ಸಂವಹನ ಕ್ರಿಯೆ ಹೆಚ್ಚು ಪರಿಣಾಮಕಾರಿ ಆಗುತ್ತದೆ.

ರೇಡಿಯೊ ಮೂಲಕ ನಡೆಯುವ ಸಂವಹನದಲ್ಲಿ ಈ ಪರಿಸ್ಥಿತಿಯ ಅರ್ಧದಷ್ಟಾದರೂ ಅಂಶಗಳು ಬಳಕೆಯಾಗುತ್ತವೆ. ಕೇಳುವ ನೋಡುವ ವ್ಯಕ್ತಿ ಹೇಳುವ ವ್ಯಕ್ತಿಗೆ ಕಾಣಿಸುವುದಿಲ್ಲ ಎಂಬ ಪ್ರಮುಖವಾದ ಕೊರತೆ ಇದೆ. ಆದರೂ ಇತರ ಕೆಲವು ತಂತ್ರಗಳ ಮೂಲಕ ಅನುಭವದಿಂದ ಈ ಕೊರತೆಯನ್ನು ನೀಗಬಹುದು. ಜೊತೆಗೆ ಸಂಕಲನದ ಸ್ಪೆಷಲ್ ಎಫೆಕ್ಟ್ ಧ್ವನಿ ವಿಶೇಷ, ಸಂಗೀತ ಇತ್ಯಾದಿಗಳ ವಿಶಿಷ್ಟ ಬಳಕೆಯಿಂದಾಗಿ

ಧ್ವನಿ ದೃಶ್ಯ ಎರಡರ ಸತ್ವವೂ ಹೆಚ್ಚಿ ಸುಲಭವಾಗಿ ಮುಖಾಮುಖಿ ಸಂವಹನಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಬಲ್ಲದು.

ರೇಡಿಯೋ ಸಂವಹನದಲ್ಲಿ ದೃಶ್ಯವಿರುವುದಿಲ್ಲ. ಧ್ವನಿ ಮಾತ್ರ ಇರುತ್ತದೆ. ವಾಸ್ತವ ದೃಶ್ಯ ಇಲ್ಲದಿರುವುದು ಮಾಧ್ಯಮದ ದೌರ್ಬಲ್ಯ ಎಂಬುದು ಬಹಳ ಮೇಲ್ನೋಟದ ಹಾಗೂ ಟೆಲಿವಿಷನ್‌ನೊಂದಿಗೆ ಹೋಲಿಸಿದ ಮಾತಾಗಿ ಬಿಡುತ್ತದೆ ಅಷ್ಟೇ. ಅಂದರೆ ಧ್ವನಿಯ ಹಲವಾರು ಸಾಧ್ಯತೆಗಳ ಸಮರ್ಥ ಬಳಕೆಯಿಂದಾಗಿ ರೇಡಿಯೋ ಮಾಧ್ಯಮವೂ ಅತ್ಯಂತ ಜೀವಂತ ನೈಜ ಮಾಧ್ಯಮವಾಗಬಲ್ಲದು. ಟೆಲಿವಿಷನ್‌ನಲ್ಲಿ ದೃಶ್ಯ, ಟಿ.ವಿ. ಪರದೆಯ ಮೇಲೆ ಮೂಡಬಹುದು. ಆದರೆ ರೇಡಿಯೋ ಮೂಲಕ ಪ್ರಸಾರವಾದ ಧ್ವನಿ ಕೇಳುಗರ ಮನಸ್ಸಿನ ಪರದೆಯ ಮೇಲೆ ಅದ್ಭುತ ರಮ್ಯ ದೃಶ್ಯಗಳನ್ನು ಸೃಷ್ಟಿಸಬಲ್ಲದು. ಸಂವಹನ ಪರಿಣಾಮಕಾರಿಯಾಗಿರುತ್ತದೆ.

ಕೆಲವು ಕಾರಣಗಳಿಗಾಗಿ ರೇಡಿಯೋ ಸಂವಹನ ಟೆಲಿವಿಷನ್ ಸಂವಹನಕ್ಕಿಂತ ಹೆಚ್ಚು ಸ್ವಾಗತಾರ್ಹವೂ ಆಗಿಬಿಡುತ್ತದೆ. ರೇಡಿಯೋ ತಂತ್ರಜ್ಞಾನ ಟಿ.ವಿ. ತಂತ್ರಜ್ಞಾನಕ್ಕಿಂತ ಸರಳ. ಅದಕ್ಕೊಂದೇ ಅದರ ಸ್ಥಾಪನೆ ನಿರ್ವಹಣೆಗೆ ಕಡಿಮೆ ಖರ್ಚಾಗುತ್ತದೆ. ರೇಡಿಯೋ ತಾಂತ್ರಿಕತೆಯ ವೈಶಿಷ್ಟ್ಯದಿಂದಾಗಿ ಅದು ಅತಿದೂರಗಳನ್ನು ತಲುಪಬಲ್ಲದು. ರೇಡಿಯೋ ಪ್ರಸಾರವನ್ನು ಮನೆಗಳಲ್ಲಿ ಪಡೆಯುವ ಸಾಧನವಾದ 'ಟ್ರಾನ್‌ಸಿಸ್ಟರ್' ಟಿ.ವಿ. ಗಿಂತ ತುಂಬಾ ಕಡಿಮೆ ಬೆಲೆ ಹಾಗೆಯೇ ಸುಲಭವಾಗಿ ಎಲ್ಲೆಂದರಲ್ಲಿಗೆ ಎತ್ತಿಕೊಂಡು ಓಡಾಡಲು ಸಾಧ್ಯವಿರುವಂತಹುದಾಗಿದೆ. ಅದರ ಮೇಲೆ ಟಿ.ವಿ.ಯನ್ನು ನೋಡಲು ನಾವು ಎಲ್ಲ ಕೆಲಸವನ್ನು ಬಿಟ್ಟು ಕುಳಿತುಕೊಳ್ಳಬೇಕು. ರೇಡಿಯೋಕ್ಕಾದರೆ ಹಾಗಿಲ್ಲ. ಇನ್ನೇನೋ ಕೆಲಸ ಮಾಡುತ್ತಲೇ ಇದನ್ನು ಕೇಳಿಸಿಕೊಳ್ಳ ಬಹುದು. ಈ ಎಲ್ಲಾ ವೈಶಿಷ್ಟ್ಯಗಳಿಂದಾಗಿ ರೇಡಿಯೋ ನಮ್ಮಂಥ ದೇಶದಲ್ಲಿ ಸಾಮೂಹಿಕ ಸಂವಹನ ಶಿಕ್ಷಣಕ್ಕಾಗಿ ಅತ್ಯಂತ ಸೂಕ್ತ ಮಾಧ್ಯಮ. ಅದರ ಹೊರತಾಗಿ ಟಿ.ವಿ.ಗೇ ಪ್ರಾಶಸ್ತ್ಯ ಸಿಕ್ಕಿರುವುದು ಇತ್ತೀಚಿನ ದಿನಗಳಲ್ಲಿ ಗಮನಾರ್ಹ.

ಎಲೆಕ್ಟ್ರಾನಿಕ್ ಮಾಧ್ಯಮಗಳಾದ ರೇಡಿಯೋ ಮತ್ತು ಟೆಲಿವಿಷನ್‌ಗಳಲ್ಲಿ ಅಭಿವೃದ್ಧಿ ಹೊಂದಿದ್ದು, ಅಂತೆಯೆ ಭಾರತಕ್ಕೆ ಬಂದದ್ದು ಮೊದಲಿಗೆ ರೇಡಿಯೋನೆ. ಅಮೆರಿಕಾ, ಇಂಗ್ಲೆಂಡ್‌ಗಳಲ್ಲಿ ಮೊತ್ತಮೊದಲು ರೇಡಿಯೋ ಪ್ರಸಾರ ಸಾಧ್ಯವಾದ ಒಂದೆರಡು ವರ್ಷಗಳಲ್ಲಿ ಅದು ಭಾರತದಲ್ಲೂ ಸಾಕಾರವಾಯಿತು.

* ಆಕಾಶವಾಣಿ ಸಂಹಿತೆ (AIR CODE)

ಆಕಾಶವಾಣಿಯು ಸಮೂಹ ಸಂಪರ್ಕ ಮಾಧ್ಯಮವೆಂದು ತಿಳಿದು ಎಲ್ಲ ವಿಧದ ಕಾರ್ಯಕ್ರಮಗಳು ಆ ಮೂಲಕ ಪ್ರಸಾರ ಮಾಡುವುದು ಸಾಧ್ಯವಿಲ್ಲ. ಎಂತೆಂತಹ ಕಾರ್ಯಕ್ರಮಗಳನ್ನು ಪ್ರಸಾರ

ಮಾಡಬೇಕೆಂಬುದರ ಬಗೆಗೆ ಅದಕ್ಕೆ ಅವರದೇ ಆದ ಕೆಲವು ನಿಬಂಧನೆಗಳು ಸಂಹಿತೆಯಲ್ಲಿ ರೂಪಿಸಲಾಗಿರುತ್ತದೆ. ಅವುಗಳೆಂದರೆ,

೧. ಮಿತ್ರ ರಾಷ್ಟ್ರಗಳ ಟೀಕೆ ಮಾಡಬಾರದು.

೨. ಧರ್ಮ, ಜಾತಿ, ಮತ, ಪಂಥಗಳ ಅವಹೇಳನ ಮಾಡಬಾರದು.

೩. ಕಾನೂನು ಕಟ್ಟಳೆಗಳನ್ನು ಉಲ್ಲಂಘಿಸುವಂತಹ ಕಾರ್ಯಕ್ರಮಗಳು ಇರಬಾರದು.

೪. ನ್ಯಾಯಾಲಯಗಳನ್ನು ಅವಹೇಳನ ಮಾಡಬಾರದು.

೫. ಭಾರತ ದೇಶದ ಅಧ್ಯಕ್ಷರ ಬಗೆಗೆ ಟೀಕೆ ನಿಂದೆ ಮಾಡಬಾರದು.

೬. ರಾಜಕೀಯ ಪಕ್ಷಗಳ ಟೀಕೆ ಮಾಡಬಾರದು.

೭. ಕೇಂದ್ರ-ರಾಜ್ಯ ಸರ್ಕಾರಗಳ ನಿಂದನೆ ಮಾಡಬಾರದು.

೮. ಭಾರತದ ಸಂವಿಧಾನಕ್ಕೆ ಅಗೌರವ ಸೂಚಿಸುವಂತಹ ಕಾರ್ಯಕ್ರಮಗಳು ನಿಷಿದ್ಧ.

೯. ವೈಯಕ್ತಿಕವಾದ ಟೀಕೆಗಳಿರಬಾರದು.

೧೦. ಸಾರ್ವಜನಿಕ ಸಂಘ ಸಂಸ್ಥೆಗಳನ್ನು ಟೀಕಿಸಬಾರದು. ಇತ್ಯಾದಿ ನಿಯಮ ನಿಬಂಧನೆಗಳನ್ನು ಒಳಗೊಂಡಿರುತ್ತದೆ.

*** ದೂರದರ್ಶನ (ಟೆಲಿವಿಷನ್)**

ಟೆಲಿವಿಷನ್ ಮಾಧ್ಯಮದ ಆವಿಷ್ಕಾರ ೧೯೨೦ರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ನಡೆಯಿತು. ಮಹಾಯುದ್ಧಗಳ ತರುವಾಯ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಟೆಲಿವಿಷನ್ ಪ್ರಮುಖ ಸಮೂಹ ಮಾಧ್ಯಮವಾಗಿ ರೂಪುಗೊಂಡಿತು. ಉಪಗ್ರಹ ಸಂವಹನ ಯುಗಕ್ಕೆ ೧೯೬೨ ರಲ್ಲಿ ಜಗತ್ತು ಕಾಲಿಟ್ಟಾಗಿನಿಂದ ಉಪಗ್ರಹ ಟೆಲಿವಿಷನ್ ಛಾನಲ್‌ಗಳ ಸಂಖ್ಯೆ ಗಣನೀಯವಾಗಿ ಏರಿದೆ. ಪ್ರತಿಯೊಂದು ಚಾನೆಲ್ ಮಿಲಿಯಗಟ್ಟಲೆ ವೀಕ್ಷಕರನ್ನು ತಲುಪುವ ಗುರಿಯನ್ನು ಹೊಂದಿದೆ. ಭಾರತದಲ್ಲಿ ಉಪಗ್ರಹ ಟೆಲಿವಿಷನ್ ಜಾಲದ ವಿಸ್ತರಣೆಗೆ ಇನ್ಸಾಟ್ ಉಪಗ್ರಹ ಸಂಪರ್ಕ ವ್ಯವಸ್ಥೆಯೇ ಆಧಾರ. ದೇಶದಲ್ಲಿ ಪ್ರಾಯೋಗಿಕ ಟೆಲಿವಿಷನ್ ಕೇಂದ್ರ ನವದೆಹಲಿಯಲ್ಲಿ ೧೯೫೯ ರಲ್ಲಿ ಸೆಪ್ಟೆಂಬರ್ ೧೫ ರಂದು ಅಸ್ತಿತ್ವಕ್ಕೆ ಬಂದಿತು. ಸಮುದಾಯ ಅಭಿವೃದ್ಧಿ ಮತ್ತು ಔಪಚಾರಿಕ ಶಿಕ್ಷಣ ಪ್ರಗತಿಗೆ ಅನುಕೂಲವಾಗುವ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಇದಕ್ಕೆ ಯುನೆಸ್ಕೋ ಸಂಸ್ಥೆಯ ಆರ್ಥಿಕ ನೆರವು ಇತ್ತು. ಸು. ೧೮೦ ಟೆಲಿಕ್ಲಬ್‌ಗಳು, ನಲವತ್ತು ಕಿ.ಮೀ. ಪರಿಧಿಯಲ್ಲಿ ಕಾರ್ಯಕ್ರಮ ವೀಕ್ಷಣೆಗೆಂದು ಸ್ಥಾಪನೆಗೊಂಡವು.

"ಬ್ರಿಟಿಶ್ ವಿಜ್ಞಾನಿ ಜಾನ್‌ಬೇಯರ್ಡ್ ಕ್ರಿ.ಶ. ೧೯೨೬ ರಲ್ಲಿ ಟೆಲಿವಿಷನ್ ಪ್ರಸಾರ ಸಾಧ್ಯ ಮಾಡುವ ತಂತ್ರಜ್ಞಾನವನ್ನು ಪ್ರದರ್ಶಿಸಿದ. ಬ್ರಿಟಿಶ್ ಮತ್ತು ಅಮೆರಿಕಾದಲ್ಲಿ ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ ಕ್ರಿ.ಶ. ೧೯೩೬ ರಲ್ಲಿಯೇ ಸಾರ್ವಜನಿಕ ಟಿ.ವಿ. ಪ್ರಸಾರ ಪ್ರಾರಂಭವಾಯಿತು. ಆದರೆ ಎರಡನೇ ಮಹಾಯುದ್ಧದಿಂದಾಗಿ ಪ್ರಸಾರ ಮುಂದುವರೆಯಲಿಲ್ಲ. ಯುದ್ಧದ ನಂತರ ಕ್ರಿ.ಶ. ೧೯೪೫ ರಲ್ಲಿ ಟಿ.ವಿ. ಪ್ರಸಾರ ಪುನರಾರಂಭವಾಯಿತು. ಕ್ರಿ.ಶ. ೧೯೭೦ ರಲ್ಲಿ ಉಪಗ್ರಹ ಟೆಲಿವಿಷನ್ ಯುಗ ಪ್ರಾರಂಭವಾಯಿತು. ಟೆಲಿವಿಷನ್ ಮಾಧ್ಯಮವು ಭಾರತಕ್ಕೆ ಕಾಲಿಟ್ಟಿದ್ದು ತಡವಾಗಿ. ಪಾಶ್ಚಿಮಾತ್ಯ ರಾಷ್ಟ್ರಗಳಿಗಿಂತ ಎರಡು ದಶಕ ಮತ್ತು ಅಭಿವೃದ್ಧಿ ಪರ ದೇಶಗಳಿಗಿಂತ ಒಂದು ದಶಕ ತಡವಾಗಿ ಬಂದಿತು. ದೆಹಲಿ ದೂರದರ್ಶನ ಕೇಂದ್ರದ ಉದ್ಘಾಟನೆ ಕ್ರಿ.ಶ. ೧೯೫೯ ರಲ್ಲಿ ಆಯಿತು. ದೈನಂದಿನ ಟಿ.ವಿ. ಪ್ರಾರಂಭವಾದದ್ದು ಕ್ರಿ.ಶ. ೧೯೬೫ ರಲ್ಲಿ. ಕ್ರಿ.ಶ. ೧೯೭೨-೧೯೭೫ ರ ಅವಧಿಯಲ್ಲಿ ದೂರದರ್ಶನ ದೇಶದ ಇನ್ನೂ ಆರು ನಗರಗಳಿಗೆ ವ್ಯಾಪಿಸಿತು. ಕ್ರಿ.ಶ. ೧೯೮೨ ರಿಂದ ಪ್ರಾರಂಭವಾದ ಮೂರನೆಯ ಘಟ್ಟದಲ್ಲಿ ದೆಹಲಿಯಿಂದ ಬರುವ ಕಾರ್ಯಕ್ರಮಗಳನ್ನು ಮರು ಪ್ರಸಾರ ಮಾಡುವ ಕೇಂದ್ರಗಳು ತ್ವರಿತವಾಗಿ ಬೆಳೆದವು. ೧೯೯೧ ರಲ್ಲಿ ಪ್ರಾರಂಭವಾದ ವಿದೇಶಿ ಉಪಗ್ರಹ ಚಾನೆಲ್‌ಗಳ ಪ್ರವೇಶ ಭಾರತದ ಟೆಲಿವಿಷನ್ ಚಿತ್ರವನ್ನು ಮೂಲಭೂತವಾಗಿ ಬದಲಿಸಿತು."[೧೧]

ಮುಂಬಯಿ ಕ್ರಿ.ಶ. ೧೯೭೨, ಕಲ್ಕತ್ತಾ, ಮದರಾಸು ಮತ್ತು ಲಕ್ನೋ ನಗರಗಳಲ್ಲಿ ಕ್ರಿ.ಶ. ೧೯೭೫ ರಲ್ಲಿ ಟೆಲಿವಿಷನ್ ಕೇಂದ್ರಗಳು ಸ್ಥಾಪನೆಯಾದವು. ಅಮೆರಿಕೆಯ ನಾಸಾ ಸಂಸ್ಥೆಯು ಉಪಗ್ರಹ ಬಳಸಿ ೧೯೭೫ ರಲ್ಲಿ SITE ಕಾರ್ಯಕ್ರಮವೊಂದನ್ನು ಆರು ರಾಜ್ಯಗಳ ಹಳ್ಳಿಗಳಿಗೆಂದು ರೂಪಿಸಲಾಯಿತು. ಟೆಲಿವಿಷನ್ ಮಾಧ್ಯಮ ಇಂದು ದೇಶಾದ್ಯಂತ ಹರಡಿದೆ. ಕರ್ನಾಟಕದಲ್ಲಿ ದೂರದರ್ಶನ ರಾಜ್ಯದ ಉತ್ತರದ ಜಿಲ್ಲೆಗಳಲ್ಲಿ ೧೯೭೫-೭೬ರಲ್ಲಿ ನಡೆದಂಥ SITE (Satellite Instructions Television Experiment) ಪ್ರಯೋಗದಿಂದಾಗಿ ಕರ್ನಾಟಕದಲ್ಲಿ ದೂರದರ್ಶನ ಪಾದಾರ್ಪಣೆಯಾಯಿತು. ನವೆಂಬರ್ ೧, ೧೯೮೧ ರಂದು ಬೆಂಗಳೂರು ಕೇಂದ್ರ ಆರಂಭವಾದರೂ ಅದು ದೆಹಲಿ, ಮದ್ರಾಸ್ ಮತ್ತು ಮುಂಬಯಿ ಕೇಂದ್ರಗಳ ಕಾರ್ಯಕ್ರಮಗಳನ್ನು ಮರುಪ್ರಸಾರ ಮಾಡುವ ಕೇಂದ್ರ ಮಾತ್ರ ಆಗಿತ್ತು. ನವೆಂಬರ್ ೯, ೧೯೯೩ ರಲ್ಲಿ ಸ್ವತಂತ್ರ ಕಾರ್ಯಕ್ರಮ ನಿರ್ಮಾಣ ಕೇಂದ್ರದ ರೂಪವನ್ನು ಪಡೆಯಿತು. ಈಗ ಬೆಂಗಳೂರಲ್ಲದೆ, ಗುಲಬರ್ಗಾದಲ್ಲಿಯೂ ಒಂದು ನಿರ್ಮಾಣ ಕೇಂದ್ರವಿದೆ.

ಕನ್ನಡ, ಉರ್ದು, ಸಂಸ್ಕೃತ, ತುಳು ಹಾಗೂ ಕೊಂಕಣಿ ಭಾಷೆಗಳಲ್ಲಿ ಕಾರ್ಯಕ್ರಮಗಳು ತಯಾರಾಗುತ್ತವೆ. ಧಾರವಾಡ, ಗುಲಬರ್ಗಾ ಹಾಗೂ ಶಿವಮೊಗ್ಗಗಳಲ್ಲಿಯೂ ಅಧಿಕ ಸಾಮರ್ಥ್ಯದ ಟ್ರಾನ್ಸ್‌ಮೀಟರ್‌ಗಳಲ್ಲದೇ ಇತರೆಡೆ ಒಟ್ಟು ೩೫ಕ್ಕೂ ಹೆಚ್ಚು ಸಾಮರ್ಥ್ಯದ L.P.T. ಗಳಿವೆ. ಮೊದಲು L.P.T. ಗಳಲ್ಲಿ ದೆಹಲಿ ಕಾರ್ಯಕ್ರಮ ಮಾತ್ರ ಮರುಪ್ರಸಾರವಾಗುತ್ತಿತ್ತು. ೧೯೯೦ ರಿಂದ ಬೆಂಗಳೂರು

ಕೇಂದ್ರ ರಾಜ್ಯದ ಇತರ ಕೇಂದ್ರಗಳೊಂದಿಗೆ ಸಂಪರ್ಕ ಪಡೆಯಿತು. ಆಗಿನಿಂದ ಕರ್ನಾಟಕ ಪ್ರಸಾರ ಅಖಿಲ ಕರ್ನಾಟಕ ಮಟ್ಟದಲ್ಲಿ ನಡೆಯುತ್ತಿದೆ. ೧೯೯೪ ರಲ್ಲಿ ಡಿ.ಡಿ.೯ ಚಾನಲ್ ಆರಂಭವಾದಂದಿನಿಂದ ಕನ್ನಡ ಕಾರ್ಯಕ್ರಮ ರಾಷ್ಟ್ರೀಯ ಮಟ್ಟದಲ್ಲೂ ಲಭ್ಯವಾಗುವಂತಾಗಿದೆ. ಈಗ ಬೆಂಗಳೂರು ದೂರದರ್ಶನ ರಾಜ್ಯದ ಜನಸಂಖ್ಯೆಯ ಶೇ. ೭೦ ಜನರಿಗೆ ತಲುಪುತ್ತಲಿದೆ. ಅದರಲ್ಲಿ ಸುಮಾರು ೨೨ ದಶಲಕ್ಷ ಜನ ದೂರದರ್ಶನದ ವೀಕ್ಷಕರಾಗಿದ್ದಾರೆ.

ಕನ್ನಡದ ಮೊದಲ ಖಾಸಗಿ ಚಾನಲ್ ಉದಯ ಟಿ.ವಿ. ಪ್ರಸಾರ ಪ್ರಾರಂಭವಾದದ್ದು ೧೯೯೪ ರಲ್ಲಿ. ೨೦೦೦-೨೦೦೧ರ ಚಾನಲ್‌ಗಳ ಮಹಾಪೂರದ ನಂತರ ಕನ್ನಡದಲ್ಲಿ ಈಗ ದಿನದ ೨೪ ಗಂಟೆಯೂ ಕೆಲಸ ಮಾಡುವ ಆರು ಚಾನಲ್‌ಗಳಿವೆ. ಉದಯ, ಈ ಟಿ.ವಿ., ಝೀ ಟಿ.ವಿ., ಡಿ.ಡಿ.೯, ಚಂದನ, ಟಿ.ವಿ.೯ ಇತ್ಯಾದಿ ಚಾನಲ್‌ಗಳು ಕನ್ನಡದಲ್ಲಿ ಪ್ರಸಾರ ಕಾರ್ಯ ಮಾಡುತ್ತಿವೆ.

ಅಡಿಟಿಪ್ಪಣಿ

೧. ಡಾ.ಬಿ.ಎಸ್. ಚಂದ್ರಶೇಖರ್, ಸಂವಹನ ಮಾಧ್ಯಮಗಳು, ಪು.೨೫೭.

ಅಧ್ಯಾಯ ೩

ಸಮೂಹ ಮಾಧ್ಯಮಗಳನ್ನು ಕುರಿತು ಕನ್ನಡದಲ್ಲಿ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ೩

ಸಮೂಹ ಮಾಧ್ಯಮಗಳನ್ನು ಕುರಿತು ಕನ್ನಡದಲ್ಲಿ ನಡೆದ ಅಧ್ಯಯನಗಳ ಸಮೀಕ್ಷೆ

ಸಮೀಕ್ಷೆ

ಸಮೂಹ ಮಾಧ್ಯಮಗಳ ಕುರಿತಾಗಿ ಈಗಾಗಲೇ ಕೆಲವು ಅಧ್ಯಯನಗಳು ನಡೆದಿವೆ. ಮಾಧ್ಯಮಗಳ ಹುಟ್ಟು, ಬೆಳವಣಿಗೆ ಮತ್ತು ಪ್ರಯೋಜನ ಕುರಿತು ಅನೇಕ ಕೃತಿಗಳು ಹೊರಬಂದಿವೆ. ಅವುಗಳಲ್ಲಿ ಪ್ರಮುಖ ಕೃತಿಗಳೆಂದರೆ ಡಾ.ಡಿ.ಬಿ. ನಾಯಕರವರು ರಚಿಸಿರುವಂತಹ "ಸಮೂಹ ಮಾಧ್ಯಮಗಳು ಮತ್ತು ಸಮಾಜ" ಎನ್ನುವ ಕೃತಿ ಹಾಗೂ ಡಾ.ಟಿ.ಸಿ. ಪೂರ್ಣಿಮಾ ಅವರು ರಚಿಸಿರುವ "ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ", ಡಾ.ಬಿ.ಎಸ್. ಚಂದ್ರಶೇಖರ ಅವರು ರಚಿಸಿದಂತಹ "ಸಂವಹನ ಮಾಧ್ಯಮಗಳು", ಶ್ರೀ ಕೆ.ವಿ. ನಾಗರಾಜ್ ಅವರು ರಚಿಸಿರುವಂಥ "ಸಮೂಹ ಮಾಧ್ಯಮಗಳು ಮತ್ತು ಸಮಾಜ" ಹಾಗೂ ಡಾ.ಎಸ್.ಎಂ. ಹಿರೇಮಠ ಹಾಗೂ ಡಿ.ಬಿ. ನಾಯಕ ಇವರೀರ್ವರೂ ಸೇರಿ ರಚಿಸಿದಂತಹ "ಸಂವಹನ ಮಾಧ್ಯಮಗಳು" ಎಂಬ ಕೃತಿಗಳು ಪ್ರಮುಖವಾಗಿವೆ.

ಡಾ.ಡಿ.ಬಿ. ನಾಯಕರು ರಚಿಸಿದ "ಸಮೂಹ ಮಾಧ್ಯಮಗಳು ಮತ್ತು ಸಮಾಜ" ಎಂಬ ಕೃತಿಯಲ್ಲಿ ಮಾಧ್ಯಮಗಳೆಂದರೇನು? ಮಾಧ್ಯಮಗಳ ಹುಟ್ಟು ಮತ್ತು ಬೆಳವಣಿಗೆ ಹಾಗೂ ಮಾಧ್ಯಮಗಳ ಸ್ವರೂಪ ಕುರಿತು ಚರ್ಚಿಸಿದ್ದಾರೆ. ಪ್ರಾಥಮಿಕ ತಿಳುವಳಿಕೆಗೆ, ಶೈಕ್ಷಣಿಕ ಕಲಿಕೆಗೆ ಅರ್ಹವಾಗಿರುವಂತಹ ಕೃತಿಯಾಗಿದೆ. ಇದರಲ್ಲಿ ಲೇಖಕರು ಸಮಾಜದಲ್ಲಿ ಮಾಧ್ಯಮಗಳ ಪಾತ್ರವನ್ನು ಪರಿಚಯಿಸಿದ್ದಾರೆ. ಸಮೂಹ ಮಾಧ್ಯಮಗಳ ಸ್ವರೂಪ, ಲಕ್ಷಣ ಹಾಗೂ ಕಾರ್ಯಚಟುವಟಿಕೆಗಳನ್ನು ವಿವರಿಸಿದ್ದಾರೆ. ಮಾಧ್ಯಮಗಳ ಪರಂಪರೆ ಮತ್ತು ಪ್ರಯೋಜನೆಗಳನ್ನು ಕುರಿತು ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತದೆ. ಮಾಧ್ಯಮಗಳ ಕುರಿತಾಗಿ ಅಧ್ಯಯನ ಮಾಡುವವರಿಗೆ ಗಮನಾರ್ಹವಾದ ಕೃತಿಯಾಗಿದೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ ವಿವೇಚಿಸಿರುವಂತಹ ಕೃತಿಯಾಗಿದೆ.

ಡಾ.ಟಿ.ಸಿ. ಪೂರ್ಣಿಮಾ ಅವರ ಕೃತಿ "ಆಧುನಿಕ ಸಂವಹನ ಮಾಧ್ಯಮಗಳು" ಮತ್ತು ಕನ್ನಡದ ಅಭಿವೃದ್ಧಿ". ಇದು ಅಪಾರ ಅನುಭವ ಮತ್ತು ಆಳವಾದ ಅಧ್ಯಯನದ ಫಲವಾಗಿ ಈ ಕೃತಿ ರಚನೆಯಾಗಿದೆ.

ಮಾಧ್ಯಮಗಳು ಮತ್ತು ಸಮಾಜದ ನಡುವಿನ ಚಾರಿತ್ರಿಕ ಹಿನ್ನೆಲೆ ಹಾಗೂ ಪರಿಳಿತಗಳನ್ನು ಕುರಿತಾಗಿ ತಲಸ್ಪರ್ಶಿ ಅಧ್ಯಯನ ಇದಾಗಿದೆ. ಮಾಹಿತಿ ತಂತ್ರಜ್ಞಾನದ ಸಾನ್ನಿಧ್ಯದಲ್ಲಿ ಮಾಧ್ಯಮಗಳ ಪ್ರಸ್ತುತತೆ ಮತ್ತು ಸಾಮಾಜಿಕ ಸಹಕಾರದೊಂದಿಗೆ ಕನ್ನಡದ ಅಭಿವೃದ್ಧಿ ಕುರಿತು ಅಧ್ಯಯನ ಮಾಡಿದ್ದಾರೆ. ಸಂಶೋಧನಕಾರರಿಗೆ ಈ ಕೃತಿ ಮಾದರಿಯಾಗಿದೆ.

ಡಾ.ಬಿ.ಎಸ್. ಚಂದ್ರಶೇಖರ ಅವರ "ಸಂವಹನ ಮಾಧ್ಯಮಗಳು" ಎಂಬ ಕೃತಿ ಮಾಧ್ಯಮಗಳ ಕುರಿತಾಗಿ ಬಂದಂತಹ ಕೃತಿಗಳಲ್ಲಿ ಉತ್ತಮ ಕೃತಿಯಾಗಿದೆ. ಇದರಲ್ಲಿ ಆಧುನಿಕ ಯುಗದಲ್ಲಿ ಸಮೂಹ ಸಂವಹನ ಮಾಧ್ಯಮಗಳ ಪಾತ್ರ ಮತ್ತು ಮಹತ್ವವನ್ನು ಕುರಿತು ಸಮಗ್ರವಾಗಿ ವಿಶ್ಲೇಷಿಸಿದ್ದಾರೆ. ಸಂವಹನ - ಸಮೂಹ ಸಂವಹನ - ಸಮೂಹ ಮಾಧ್ಯಮಗಳು ಮತ್ತು ಮಾಧ್ಯಮಗಳ ಅಧ್ಯಯನವನ್ನು ಕುರಿತು ಚರ್ಚಿಸಿದ್ದಾರೆ. ಹೊಸ ಮಾಧ್ಯಮಗಳನ್ನು ಕುರಿತು ಸ-ವಿವರವಾದ ಚರ್ಚೆಯನ್ನೊಳಗೊಂಡಿದೆ. ಇದೊಂದು ಉಪಯುಕ್ತ ಮಾಹಿತಿ ಸಂಗ್ರಹವಾಗಿದೆ.

ಶ್ರೀ ಕೆ.ವಿ. ನಾಗರಾಜ್ ಅವರು ರಚಿಸಿದ ಕೃತಿ "ಸಮೂಹ ಮಾಧ್ಯಮಗಳು ಮತ್ತು ಸಮಾಜ". ಇದು ಮಾಧ್ಯಮಗಳ ಪರಿಚಯ, ಹುಟ್ಟು ಮತ್ತು ಬೆಳವಣಿಗೆ ಹಾಗೂ ಸಮಾಜ ಸೇವೆಯನ್ನು ವಿವರಿಸುವಂಥ ಕೃತಿಯಾಗಿದೆ. ಪ್ರಾಥಮಿಕ ಹಂತದಲ್ಲಿ ಮಾಧ್ಯಮಗಳ ಪರಿಚಯವನ್ನು ಸರಳವಾಗಿ ವಿವರಿಸುವ ಕೃತಿ ಇದಾಗಿದೆ.

ಶ್ರೀ ಎಸ್.ಎಂ. ಹಿರೇಮಠ ಮತ್ತು ಡಿ.ಬಿ. ನಾಯಕರು ಸೇರಿ ರಚಿಸಿರುವಂಥ ಕೃತಿ "ಸಂವಹನ ಮಾಧ್ಯಮಗಳು". ಇದು ಸ್ನಾತಕೋತ್ತರ ಪದವಿ ಓದುವ ವಿದ್ಯಾರ್ಥಿಗಳಿಗೆ ಸಮೂಹ ಸಂವಹನ ಮಾಧ್ಯಮಗಳ ಕುರಿತು ಸುಲಭವಾಗಿ ರಚನೆಗೊಂಡಂತಹ ಕೃತಿಯಾಗಿದೆ. ಇದರಲ್ಲಿ ಮಾಧ್ಯಮಗಳ ಚಾರಿತ್ರಿಕ ಹಿನ್ನೆಲೆ, ಮಾಧ್ಯಮಗಳ ಸ್ವರೂಪ, ಕಾರ್ಯ ಚಟುವಟಿಕೆ ಹಾಗೂ ಮಾಧ್ಯಮಗಳ ಪ್ರಯೋಜನ ಕುರಿತು ವಿವರಿಸುವಂತಹ ಕೃತಿಯಾಗಿದೆ.

ಶ್ರೀ ಪದ್ಮರಾಜ ದಂಡಾವತಿಯವರು ರಚಿಸಿದ "ಪತ್ರಿಕಾ ಭಾಷೆ" ಮತ್ತು "ರಿಪೋರ್ಟಿಂಗ್" ಎಂಬ ಕೃತಿಗಳು, ಪತ್ರಿಕಾ ಮಾಧ್ಯಮದ ವರದಿಗಾರಿಕೆ ಹಾಗೂ ಭಾಷೆಯನ್ನು ಕುರಿತು ವಿವರಿಸುತ್ತವೆ. ಪತ್ರಿಕಾ ವಲಯದಲ್ಲಿ ವರದಿಗಾರರು ಹೇಗೆ ಕಾರ್ಯನಿರ್ವಹಿಸಬೇಕು ಮತ್ತು ಬಳಸುವ ಭಾಷೆ ಹೇಗಿರಬೇಕು ಎಂಬುದರ ಕುರಿತು ಈ ಕೃತಿಗಳಲ್ಲಿ ಸವಿವರವಾಗಿ ಚರ್ಚಿಸಿದ್ದಾರೆ. ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಈ ಎರಡು ಕೃತಿಗಳು ಕೈಪಿಡಿಯಂತಿವೆ. ಅಧ್ಯಯನಕಾರರಿಗೆ ಉತ್ತಮ ಮಾಹಿತಿಯನ್ನು ಒದಗಿಸುವ ಕೃತಿಗಳಾಗಿವೆ.

ಶ್ರೀ ಡಿ.ವಿ. ಗುಂಡಪ್ಪನವರು ರಚಿಸಿರುವ "ವೃತ್ತ ಪತ್ರಿಕೆ" ಎಂಬ ಕೃತಿ ಪತ್ರಿಕಾ ಮಾಧ್ಯಮದ ಅಧ್ಯಯನಗಳಲ್ಲೊಂದಾದ ಉತ್ಕೃಷ್ಟ ಕೃತಿ. ಇದು ಪತ್ರಿಕಾ ಪ್ರಪಂಚದ ಪ್ರಮುಖ ಮಾಹಿತಿಗಳನ್ನೊಳಗೊಂಡ

ಕೃತಿ. ಪತ್ರಿಕೆಯ ಬಗೆಗೆ ಅಧ್ಯಯನ ಕೈಗೊಳ್ಳುವವರು ಗಮನಿಸುವಂಥ ಕೃತಿಯಾಗಿದೆ. ಇದರಲ್ಲಿ ಪತ್ರಿಕಾರಂಗದ ನೀತಿ-ನಿಯಮಗಳು, ಕರ್ತವ್ಯಗಳು ಕುರಿತು ವಿವರಿಸಿದ್ದಾರೆ.

ಶ್ರೀ ಹ.ವೆಂ. ನಾಗರಾಜರಾವ್ ಅವರು ರಚಿಸಿರುವ "ವಾರ ಪತ್ರಿಕೆಗಳು" ಎಂಬ ಕೃತಿ ೧೯೮೮ರಲ್ಲಿ ರಚನೆಯಾಯಿತು. ಇದು ಪತ್ರಿಕಾರಂಗದಲ್ಲಿ ಕನ್ನಡದಲ್ಲಿ ವಾರಪತ್ರಿಕೆಗಳ ಕುರಿತು ಮೊದಲು ಅಧ್ಯಯನ ಮಾಡಿದ ಕೃತಿ. ಇದೂ ಸಹ ಸಮೂಹ ಮಾಧ್ಯಮಗಳ ಅಧ್ಯಯನಕಾರರಿಗೆ ಉಪಯುಕ್ತ ಮಾಹಿತಿಯನ್ನು ಒಳಗೊಂಡ ಕೃತಿಯಾಗಿದೆ. ಇದರಲ್ಲಿ ವಾರಪತ್ರಿಕೆಗಳ ಸ್ವರೂಪ, ರಚನೆ ಮತ್ತು ವಿಧಾನವನ್ನು ಕುರಿತು ವಿವರಿಸುತ್ತದೆ. ಲೇಖಕರು ವಾರಪತ್ರಿಕೆಗಳ ಬಗೆಗೆ ವಿಶಿಷ್ಟ ಚರ್ಚೆಯನ್ನು ಮಾಡಿದ್ದಾರೆ. ಪತ್ರಿಕಾ ಮಾಧ್ಯಮದ ಪ್ರಮುಖ ಅಧ್ಯಯನಗಳಲ್ಲಿ ಈ ವಾರಪತ್ರಿಕೆಗಳ ಅಧ್ಯಯನ ಒಂದು. ಲೇಖಕರು ತಮ್ಮ ಅನುಭವವನ್ನು ಇಟ್ಟುಕೊಂಡು ಚರ್ಚಿಸಿದ್ದಾರೆ.

ಶ್ರೀ ಎಸ್.ಎಂ. ಕಮ್ಮಾರ ಮತ್ತು ಡಾ.ಎಂ.ಬಿ. ಬೆಳವಟಗಿಯವರು ಕ್ರಿ.ಶ. ೧೯೯೯ರಲ್ಲಿ ಮುಂಡರಗಿಯಲ್ಲಿ ಒಂದು ಕೃತಿಯನ್ನು ಹೊರತಂದರು. ಆ ಕೃತಿ "ಸಮೂಹ ಮಾಧ್ಯಮಗಳು ಹಾಗೂ ಸಮುದಾಯ" ಎಂಬುದು. ಇದು ಪ್ರಾಥಮಿಕ ವಲಯದ ದೃಷ್ಟಿಯಲ್ಲಿ ಅಂದರೆ ಮಾಧ್ಯಮಗಳ ಪರಿಚಯ ಮತ್ತು ಮಾಧ್ಯಮಗಳ ಪ್ರಯೋಜನ ಕುರಿತು ಚರ್ಚಿಸಿದ್ದಾರೆ. ಸಮೂಹ ಮಾಧ್ಯಮಗಳ ಬಗ್ಗೆ ತಿಳಿದುಕೊಳ್ಳುವಲ್ಲಿ ಈ ಕೃತಿ ಸರಳ ಮತ್ತು ಸುಲಭವಾಗಿದೆ. ಇದು ಸಾಮಾನ್ಯ ಓದುಗರಿಗೆ ಕೈಗೆಟಕುವಂತಹ ಕೃತಿಯಾಗಿದೆ. ಸಮಾಜದಲ್ಲಿ ಮಾಧ್ಯಮಗಳ ಪಾತ್ರ ಮತ್ತು ಕಾರ್ಯ ಚಟುವಟಿಕೆಯನ್ನು ವಿವರಿಸುತ್ತಾರೆ.

ಶ್ರೀ ವಿ. ನಾಗರಾಜರಾವ್, ಕೆ.ಎಸ್. ನಾಗಭೂಷಣಂ ಮತ್ತು ಎಸ್. ಅರ್ಜುನದೇವ ಅವರು ಸೇರಿ ಕರ್ನಾಟಕ ಮಾಧ್ಯಮ ಅಕಾಡೆಮಿ ಬೆಂಗಳೂರು ಇಂದ "ಮಾಧ್ಯಮ ಪಾರಿಭಾಷಿಕ" ಎಂಬ ಕೃತಿಯನ್ನು ಹೊರತಂದಿದ್ದಾರೆ. ಇದು ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾಗಿದೆ. ಇದು ಮಾಧ್ಯಮ ಅಧ್ಯಯನಕಾರರಿಗೆ ಸಹ ಉಪಯುಕ್ತ ಗ್ರಂಥವಾಗಿದೆ. ಇದರಲ್ಲಿ ಇಂದು ಮಾಧ್ಯಮ ವಲಯದಲ್ಲಿ ಬಳಕೆಯಲ್ಲಿರುವ ಪಾರಿಭಾಷಿಕ ಪದಕೋಶವನ್ನು ಸಂಗ್ರಹಿಸಿದ್ದಾರೆ.

ಈ ಪ್ರಕಾರ ಹಲವಾರು ಕೃತಿಗಳು ಸಮೂಹ ಮಾಧ್ಯಮಗಳ ಕುರಿತು ಹೊರಬಂದಿವೆ. ಒಟ್ಟಾರೆ ಈ ಕೃತಿಗಳು ಸಮಾಜದಲ್ಲಿ ಮಾಧ್ಯಮಗಳು ಪಾತ್ರವಹಿಸುವ ಕುರಿತು ಹಾಗೂ ಅವುಗಳ ಕಾರ್ಯಚಟುವಟಿಕೆ ಕುರಿತು ಸಮಗ್ರವಾದ ತಿಳುವಳಿಕೆಯನ್ನು ನೀಡುತ್ತವೆ. ಯಾವುದೇ ಮಾಧ್ಯಮದಿಂದ ಅಧ್ಯಯನವನ್ನು ಕೈಕೊಂಡಲ್ಲಿ ಇವುಗಳನ್ನು ಗಮನಿಸಲೇಬೇಕಾಗಿದೆ. ಇಲ್ಲಿನ ಕೃತಿಗಳಲ್ಲಿ ನಡೆದ ಅಧ್ಯಯನ ಕಂಡು ಬರುವುದು ಸಾಮಾಜಿಕ ಮತ್ತು ಶೈಕ್ಷಣಿಕ ನೆಲೆಯಲ್ಲಿ ಮಾತ್ರ. ಆದರೆ ಪ್ರಸ್ತುತ ಅಧ್ಯಯನ ಭಾಷಿಕ ನೆಲೆಯಲ್ಲಿದೆ. ಈಗ ಭಾಷಿಕ ನೆಲೆಯಲ್ಲಿ ಅಧ್ಯಯನ ನಡೆಯಬೇಕಿದೆ. ಆ ನಿಟ್ಟಿನಲ್ಲಿ ಈ ನಿಬಂಧದ ಅಧ್ಯಯನ ನಡೆದಿದೆ.

ಸಮೂಹ ಮಾಧ್ಯಮಗಳ ಬಗ್ಗೆ ನಡೆದ ಬಹುತೇಕ ಅಧ್ಯಯನಗಳಲ್ಲಿ ಅವುಗಳಲ್ಲಿ ಬಳಕೆಯಾಗುವ ಭಾಷೆಯನ್ನು ಕುರಿತು ಆಂಶಿಕವಾಗಿ ಮಾತ್ರ ಚರ್ಚಿಸಲಾಗಿದೆ. ಇಂಗ್ಲೀಶ್, ತಮಿಳು ಮತ್ತಿತರ ಭಾಷೆಗಳಲ್ಲಿ ಸಮೂಹ ಮಾಧ್ಯಮಗಳಲ್ಲಿನ ಬಳಕೆಯ ಭಾಷೆ ಕುರಿತು ಅನೇಕ ಅಧ್ಯಯನಗಳು ನಡೆದಂತೆ ಕನ್ನಡದಲ್ಲಿ ನಡೆದೇ ಇಲ್ಲ ಎಂದರೂ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿ ದೂರದರ್ಶನ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುತ್ತಿರುವ ಕ್ರೈಂನ್ಯೂಸ್ ಭಾಷಾ ಬಳಕೆ ಕುರಿತು ಈ ಅಧ್ಯಯನ ಕೈಗೊಳ್ಳಲಾಗಿದೆ.

□□

ಅಧ್ಯಾಯ ೪

ಕ್ರೈಂನ್ಯೂಸ್‌ನಲ್ಲಿ ಭಾಷಾ ಬಳಕೆ

೪.೧ ಧ್ವನಿರಚನೆ

೪.೨ ಪದರಚನೆ

೪.೩ ವಾಕ್ಯ ರಚನೆ

ಅಧ್ಯಾಯ ೪

ಕ್ರೈಂನ್ಯೂಸ್‌ನಲ್ಲಿ ಭಾಷಾ ಬಳಕೆ

ಭಾಷೆಯನ್ನು ಕುರಿತು ಹಲವು ಅಧ್ಯಯನಗಳು ನಡೆದಿವೆ. ಸಮೂಹ ಮಾಧ್ಯಮಗಳಲ್ಲಿ ಭಾಷೆ ಕುರಿತು ಅನೇಕ ಜನ ವಿದ್ವಾಂಸರು ಅಧ್ಯಯನವನ್ನು ನಡೆಸಿದ್ದಾರೆ. ಭಾಷಾ ಬಳಕೆಯು ಪ್ರಮುಖವಾಗಿ ಮೂರು ವಲಯಗಳಲ್ಲಿ ಗುರುತಿಸುತ್ತಾರೆ. ಒಂದು ಶಿಕ್ಷಣ ವಲಯ, ಎರಡನೆಯದು ಆಡಳಿತ ವಲಯ ಮತ್ತು ಮೂರನೆಯದು ಮಾಧ್ಯಮ ವಲಯ. ಈ ಮೂರೂ ವಲಯಗಳಲ್ಲಿ ಸಾಮಾಜಿಕ ವ್ಯವಹಾರದಲ್ಲಿ ಭಾಷೆಯ ಬಳಕೆಯನ್ನು ಗುರುತಿಸುತ್ತೇವೆ. ಭಾಷಾ ಬಳಕೆ ಔಪಚಾರಿಕ ಮತ್ತು ಅನೌಪಚಾರಿಕವೆಂದು ಎರಡು ರೀತಿಯಲ್ಲಿ ಬಳಸಲ್ಪಡುವುದನ್ನು ಕಾಣುತ್ತೇವೆ.

ಮಾಧ್ಯಮಗಳಲ್ಲಿ ಪ್ರಮಾಣಿತವಾದ ಭಾಷೆಯು ಬಳಕೆಯಾಗುತ್ತದೆ. ದೂರದರ್ಶನದಲ್ಲಿ ನಿರೂಪಕ, ನಿರೂಪಕಿಯರಿಂದ ಹಾಗೂ ಸುದ್ದಿ ವಾಚಕರಿಂದ ಭಾಷೆಯು ವಿಶಿಷ್ಟವಾಗಿ ಬಳಕೆಯಾಗುತ್ತಿರುತ್ತದೆ. ಅಲ್ಲಿ ಒಂದು ಶಿಷ್ಟ ಭಾಷೆ ಬಳಸಲ್ಪಡುತ್ತಿದೆ. ಆದರೆ ಅಪರಾಧದ ಘಟನೆಯನ್ನಾಧರಿಸಿದ ಕ್ರೈಂನ್ಯೂಸ್‌ನ ಭಾಷೆ ಔಪಚಾರಿಕವೂ ಅಲ್ಲದ ಅನೌಪಚಾರಿಕವೂ ಅಲ್ಲದ ರೀತಿಯಲ್ಲಿ ಬಳಕೆಯಾಗುವುದನ್ನು ಕಾಣುತ್ತೇವೆ. ಅದು ವೀಕ್ಷಕನಿಗೆ ಆಕರ್ಷಣೀಯವಾಗಿರುತ್ತದೆ. ಇದಕ್ಕೆ ಕಾರಣವೇನು? ಏಕೆ ಅತ್ಯಾಕರ್ಷಕವಾಗಿರುತ್ತದೆ? ಭಾಷಾ ಬಳಕೆಯ ವಿಧಾನವೇ? ಅಥವಾ ಭಾಷಾ ರಚನೆಯ ಶೈಲಿಯೇ? ವಾಚನ ಮಾಡುವಂಥ ವಿಧಾನವೇ ಎಂಬ ಪ್ರಶ್ನೆಗಳ ಹುಡುಕಾಟದಲ್ಲಿ ಪ್ರಸ್ತುತ ಅಧ್ಯಯನ ನಡೆದಿದೆ.

ಈ ಹಿನ್ನೆಲೆಯಲ್ಲಿ ಕ್ರೈಂನ್ಯೂಸ್ ಭಾಷಾ ಬಳಕೆಯನ್ನು ಮೂರು ಪ್ರಮುಖ ಅಂಶಗಳಲ್ಲಿ ಚರ್ಚಿಸಲಾಗಿದೆ. ಅವುಗಳೆಂದರೆ

೧) ಧ್ವನಿ ರಚನೆ

೨) ಪದ ರಚನೆ

೩) ವಾಕ್ಯ ರಚನೆ

೪.೧ ಧ್ವನಿರಚನೆ

ಧ್ವನಿಗಳು ಹುಟ್ಟುವ ಸ್ಥಾನಗಳ ಕುರಿತಾಗಿರುವ ಅಧ್ಯಯನ ಕ್ರಮವೇ ಧ್ವನಿರಚನಾಶಾಸ್ತ್ರವಾಗಿರುತ್ತದೆ. ಉಚ್ಚಾರಣೆಯ ಸ್ಥಾನವನ್ನು ಮತ್ತು ಉಚ್ಚಾರಣೆಯ ಕ್ರಮವನ್ನು ಗುರುತಿಸಲಾಗುತ್ತದೆ. ಯಾವ ಧ್ವನಿ ವಿರೋಧ ಪರಿಸರದಲ್ಲಿ ಒಂದು ಅರ್ಥ ಭೇದಕ ಶಕ್ತಿಯನ್ನು ಪಡೆದಿರುತ್ತದೆಯೋ ಅಂತಹ ಧ್ವನಿಗಳನ್ನು "ಧ್ವನಿಮಾ"ಗಳೆಂದು ಕರೆದಿದ್ದಾರೆ. ಇಲ್ಲಿ ನಾವು ಕ್ರೈಂನ್ಯೂಸ್‌ಗಳಲ್ಲಿ ಧ್ವನಿರಚನೆ ಹೇಗೆ ಆಗಿದೆ? ಮತ್ತು ಧ್ವನಿಗಳ ಬಳಕೆಯಿಂದ ಕ್ರೈಂನ್ಯೂಸ್ ಸಿದ್ಧಪಡಿಸುವವರು ಹೇಗೆ ಪರಿಣಾಮಕಾರಿಗೊಳಿಸುತ್ತಾರೆ ಎಂಬುದು ಗಮನಿಸುವಂತಹ ಅಂಶ.

ಕ್ರೈಂನ್ಯೂಸ್ ಪ್ರಸಾರದಲ್ಲಿ ಸುದ್ದಿಯನ್ನು ಓದುವಂತಹ ವ್ಯಕ್ತಿಯ ಭಾಷೆಯಲ್ಲಿ ಧ್ವನಿರಚನೆ ವಿಶಿಷ್ಟವಾಗಿರುತ್ತದೆ. ಮೊಟ್ಟಮೊದಲನೆಯದಾಗಿ ನಾವು ಗಮನಿಸುವ ಅಂಶವೆಂದರೆ ಓದುವಂತಹ ವ್ಯಕ್ತಿಯ ಧ್ವನಿ ಮೂಲತಃ ಗಡುಸಾಗಿ, ಒರಟಾಗಿದ್ದು ಗಮನ ಸೆಳೆಯುವಂತಿರುತ್ತದೆ. ಉದಾಹರಣೆಗೆ "ಕ್ರೈಂ ಸ್ಟೋರಿ"ಯನ್ನು ನಿರೂಪಿಸುವಂಥ ಬಾಲಕೃಷ್ಣ ಕಾಕತ್ಕಾರ್ ಮತ್ತು "ಕ್ರೈಂಡೈರಿ"ಯನ್ನು ನಿರೂಪಿಸುವಂಥ ರವಿಬೆಳಗೆರೆ ಅವರ ಧ್ವನಿ ಆಕರ್ಷಕವಾಗಿರುತ್ತದೆ. ಅವರ ಭಾಷೆಯಲ್ಲಿ ಧ್ವನಿರಚನೆಯನ್ನು ಗಮನಿಸುವುದಾದರೆ "ಆ್ಯ$_{s}$, ಏ$_{s}$, ಓ$_{s}$, ಹೋ$_{s}$" ಎಂಬ ಧ್ವನಿಗಳು ಬಳಕೆಯಲ್ಲಿವೆ.

ಉದಾಹರಣೆ : "ಇದ್ಯಾವುದೋ ಕಾವೇರಿ ನೀರಿಗಾಗಿ ನಡೀತಾ ಇರೋ ಪ್ರತಿಭಟನೆ ಅಂದುಕೊಂಡ್ರ್ಯಾ$_{ss}$ ಖಂಡಿತಾ$_{s}$ ಅಲ್ಲ!"

ಈ ಮೇಲಿನ ವಾಕ್ಯದಲ್ಲಿ "ಅಂದುಕೊಂಡ್ರ್ಯಾ$_{ss}$" ಎಂಬ ಪದದ ಕೊನೆಯಲ್ಲಿ "ಆ್ಯ$_{ss}$" ಎಂಬ ಧ್ವನಿಯು ಬಳಕೆಯಲ್ಲಿರುವುದು ಗಮನಿಸಬಹುದು. ಕನ್ನಡದಲ್ಲಿ ಮ್ಯಾಲೆ, ಬ್ಯಾಟೆ, ಪ್ಯಾಟೆ ಮುಂತಾದ ಪದಗಳಲ್ಲಿ 'ಆ್ಯ$_{s}$' ಧ್ವನಿ ಬಳಕೆಯಲ್ಲಿದೆ.

"ಯಾಕೇ$_{s}$? ಮಹಾಂತೇಶಾ ಅನ್ನೋ ನೀಚ ತಾಯಮ್ಮನನ್ನು ದಾರಿ ತಪ್ಪಿಸಿದ್ದು ಯಾಕೇ$_{s}$? ಯಾಕೇ$_{s}$ ಅಂದ್ರೇ ತಾಯಮ್ಮ ಅವನ ತಂದೆ-ತಾಯಿಗೆ ಹಿಡಿಸಿರಲಿಲ್ಲ!" ಈ ವಾಕ್ಯದಲ್ಲಿ 'ಏ$_{s}$' ಎಂಬ ಧ್ವನಿ 'ಯಾಕೇ$_{s}$' ಎಂಬ ಪದಾಂತ್ಯದಲ್ಲಿ ಬಳಕೆಯಾಗಿದೆ.

ಉದಾಹರಣೆ : "ಓ$_{s}$ ಹೋ$_{s}$ ... ರವಿಪೂಜಾರಿ ಜಪ್ಪಯ್ಯಾ$_{ss}$ ಅಂದ್ರೂ$_{s}$ ಸರೆಂಡರ್ ಆಗೋದಿಲ್ಲ ಅಂತಾನೇ$_{ss}$."

ಈ ಮೇಲಿನ ವಾಕ್ಯದಲ್ಲಿ 'ಓ$_{s}$' 'ಹೋ$_{s}$' 'ಆ್ಯ$_{s}$' ಮತ್ತು 'ಏ' ನಾಲ್ಕು ಧ್ವನಿಗಳು ಒಂದೇ ವಾಕ್ಯದಲ್ಲಿ ಗುರುತಿಸಬಹುದು. ಅನುಕ್ರಮವಾಗಿ 'ಓ$_{s}$ ... ಹೋ$_{s}$ ...' 'ಜಪ್ಪಯ್ಯಾ$_{ss}$' 'ಅಂತಾನೇ$_{ss}$' ಈ ಪದಗಳಲ್ಲಿ ನಾಲ್ಕೂ ಧ್ವನಿಗಳನ್ನು ಕಾಣುತ್ತೇವೆ.

ಟಿ.ವಿ.ಯಲ್ಲಿ ಅಪರಾಧ ಸುದ್ದಿಯನ್ನು ಓದುವಾಗ ವಾಕ್ಯದ ಮಧ್ಯ ಮತ್ತು ಕೊನೆಯ ಪದಗಳನ್ನು ದೀರ್ಘ ಸ್ವರ ಇಲ್ಲವೆ ಪ್ಲುತ ಸ್ವರವಾಗಿ ಉಚ್ಚಾರಣೆ ಮಾಡುತ್ತಾರೆ. ಈ ಮೇಲೆ ಉದಾಹರಿಸಿದ ವಾಕ್ಯದಲ್ಲಿನ ಸ್ವರಗಳನ್ನು ಗಮನಿಸಬಹುದು.

ದೂರದರ್ಶನದಲ್ಲಿ ಕ್ರೈಂನ್ಯೂಸ್ ಪ್ರಸಾರ ಅತೀ ಹೆಚ್ಚು ಆಕರ್ಷಕವಾಗಿ ತೋರಲು ಮತ್ತು ಸಂವಹನಗೊಳ್ಳುವಲ್ಲಿ ಧ್ವನಿರಚನೆಯು ಸಹ ಪರಿಣಾಮಕಾರಿಯಾಗಿದೆ. ಭಾಷಾ ಬಳಕೆಯಲ್ಲಿ ಧ್ವನಿ ಸಹ ಪ್ರಮುಖ ಪಾತ್ರವಹಿಸುತ್ತದೆ. ವಿಶಿಷ್ಟ ಧ್ವನಿಗಳನ್ನು ಬಳಸಿ ಭಾಷೆಯನ್ನು ಆಡುವುದರಿಂದ ಅದು ಆಕರ್ಷಣೀಯವಾಗಿರುತ್ತದೆ. ಅಲ್ಲಿ ಅಂತಹ ವಿಶಿಷ್ಟ ಧ್ವನಿಗಳೇ ಗಮನಸೆಳೆಯುವಲ್ಲಿ ಕಾರಣೀಭೂತ ವಾಗಿರುತ್ತವೆ.

೪.೨ ಪದರಚನೆ

ಹಲವು ಧ್ವನಿಗಳ ಮೊತ್ತವೇ ಪದರಚನೆಯಾಗಿರುತ್ತದೆ. ಅಂತಹ ಪದರಚನೆ ಹಲವು ಬಗೆಯಾಗಿರುತ್ತದೆ. ಪ್ರಮುಖವಾಗಿ ಮೂರು ಪದಗಳನ್ನು ಹೆಸರಿಸುತ್ತೇವೆ. ೧. ನಾಮಪದ, ೨. ಕ್ರಿಯಾಪದ, ೩. ಗುಣವಾಚಕ ಎಂಬ ಮೂರು ಪ್ರಕಾರಗಳನ್ನು ಗುರುತಿಸುತ್ತೇವೆ. ಇಂತಹ ಪದರಚನೆ ಕ್ರೈಂ ನ್ಯೂಸ್‌ಗಳಲ್ಲಿ ಆದ ಬಗೆಯನ್ನು ಇಲ್ಲಿ ಉದಾಹರಣೆಗಳ ಮೂಲಕ ನೋಡಬಹುದು.

ಉದಾಹರಣೆಗೆ :

೧. ಕ್ರೈಂನ್ಯೂಸ್‌ಗಳನ್ನು ಓದುವವರು ನಾಮಪದ ಮತ್ತು ಸರ್ವನಾಮಗಳನ್ನು ವ್ಯಂಜನಾಂತವಾಗಿ ಉಚ್ಚರಿಸುತ್ತಾರೆ.

   ನಾಮಪದಗಳು : ಸೂರ್, ನೀರ್, ಊರ್.

   ಸರ್ವನಾಮಗಳು : ನೀವ್, ತಾವ್, ಯಾರ್, ಯಾವ್, ಯಾಕ್.

೨. ಆಂಗ್ಲ ಪದಗಳ ಬಳಕೆ ಯಥೇಚ್ಛವಾಗಿ ಬಳಕೆಯಾಗುತ್ತವೆ ಮತ್ತು ವ್ಯಂಜನಾಂತಗೊಳ್ಳುತ್ತವೆ.

   ಉದಾಹರಣೆ : ಮರ್ಡರ್, ರಿವಾಲ್ವರ್, ಆಫೀಸ್, ರೆಸಿಸ್ಟ್, ಫೈರ್, ಫ್ಲ್ಯಾಶ್, ಸರೆಂಡರ್, ಅ್ಯರೆಸ್ಟ್, ರ್‍ಯಾಗಿಂಗ್ ಇತ್ಯಾದಿ.

೩. ಹೊಸ ಬಗೆಯ ಪದಗಳು ರಚನೆಗೊಳ್ಳುತ್ತವೆ. ಬೇರೆ ಬೇರೆ ವಲಯದ ಪದಗಳು ಕ್ರೈಂ ನ್ಯೂಸ್‌ಗೆ ಸೇರ್ಪಡೆಗೊಳ್ಳುತ್ತವೆ.

ಉದಾಹರಣೆ :

ಅಡ್ಡೆ	ಅಬ್ಬೆಪಾರಿ	ಹೇತ್ಲಾಂಡಿ ನನ್ನ ಮಗ
ಅಡ್ಡಕಸುಬಿ	ಅಮಲುದಾರ	ಹೈತ್‌ಲಗಾ
ಅಡ್ಡಕಸುಬು	ಅಸಲು ವ್ಯವಹಾರ	ತೋಲಾಂಡಿನಾಯ್ಕ
ಅಖಾಡ	ಅಲಿಯಾಸ್	ತಗ್ಗಳಪ್ಪಾ
ಅಗ್ನಿಕುಂಡ	ಸುಪಾರಿ	ಪಿಂಪು
ಮಟ್ಕಾಶ್	ಫಿಟ್ಟಿಂಗ್	ಸ್ಕೆಚ್ಚು
ಲಾಂಗ್	ನಿಖಾಲಿ	ರೈಫಲ್
ವಾರೆಂಟ್	ಇತ್ಯಾದಿ ಪದಗಳು ಇಲ್ಲಿ ರಚನೆಗೊಂಡಿವೆ.	

ವಿಶೇಷ ಪದಗಳ ರಚನೆ ಮತ್ತು ಬಳಕೆಯ ವಿವರಣೆ

ಕ್ರೈಂನ್ಯೂಸ್‌ನಲ್ಲಿ ಅನೇಕ ಹೊಸ ಬಗೆಯ ಪದಗಳು ರಚನೆಗೊಂಡು ಬಳಕೆಯಾಗುತ್ತವೆ. ಆ ಪದಗಳ ರಚನೆ ಮತ್ತು ಬಳಕೆ ವಿಶಿಷ್ಟವಾಗಿದೆ. ಅಂತಹ ಕೆಲವು ಪದಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

೧. **ಅಲಿಯಾಸ್ :** (ನಾ) ಈ ಪದ ಅನ್ಯಭಾಷಾ ಪದ. ಇದನ್ನು ಇಂದು ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ, ಕ್ರೈಂಗೆ ಸಂಬಂಧಿಸಿದ ವ್ಯಕ್ತಿಯ ಇನ್ನೊಂದು ಹೆಸರನ್ನು ಹೇಳುವಾಗ ಬಳಸುತ್ತಾರೆ. ಉದಾಹರಣೆಗೆ 'ಕೃಷ್ಣಪ್ಪ ಅಲಿಯಾಸ್ ಕಿಟ್ಟಿ' ಈ ರೀತಿ ಬಳಸುತ್ತಾರೆ. ಮೂಲತಃ ಈ ಪದ ರೆವಿನ್ಯೂ ಇಲಾಖೆಯಲ್ಲಿ ಕಡತಗಳನ್ನು ಬರೆಯುವಾಗ, ಕಂದಾಯಕ್ಕೆ ಸಂಬಂಧಿಸಿದ ದಾಖಲೆಯಲ್ಲಿ 'ಅಲಿಯಾಸ್' ಎಂಬ ಪದ ಬಳಸುತ್ತಾರೆ. ಆ ವಲಯದ ಪದವನ್ನು ಈ ಕ್ರೈಂ ಲೋಕದಲ್ಲಿ ವರದಿಗಾರರು ಅಪರಾಧಿಯ ಹೆಸರಿನ ಇನ್ನೊಂದು ಹೆಸರನ್ನು ಸೂಚಿಸುವಲ್ಲಿ 'ಅಲಿಯಾಸ್' ಎಂದು ಬಳಸುತ್ತಾರೆ.

ಉದಾಹರಣೆ : "ರಮೇಶಾ ಅಲಿಯಾಸ್ ರವಿ ಎಂಬಾತ ತನ್ನ ಹೆಂಡತಿಯಿಂದಲೇ ಕೊಲೆಯಾದ."

೨. **ಸುಪಾರಿ :** (ನಾ) ಈ ಪದ ಅನ್ಯಭಾಷಾ ಪದವಾಗಿದೆ. ಇದನ್ನು ಇಂದು ಮಾಧ್ಯಮಗಳಲ್ಲಿ, ಮತ್ತು ಪತ್ರಿಕೆಗಳಲ್ಲಿ ಕ್ರೈಂನ್ಯೂಸ್ ಪ್ರಸಾರ ಮಾಡುವಾಗ ಬಳಸುತ್ತಾರೆ. 'ಸುಪಾರಿ ಕೊಲೆಗಳು' ಮುಂತಾಗಿ ಬಳಸುತ್ತಾರೆ. ಅಂದರೆ ಇದರರ್ಥ ಪೂರ್ವನಿಯೋಜಿತ ಕೊಲೆಗಳು ಎಂದು ಕರೆಯುತ್ತಾರೆ. ಈ ಪದವನ್ನು ಮಾಧ್ಯಮಗಳಲ್ಲಿ ಹೆಚ್ಚು ಬಳಕೆ ಮಾಡುತ್ತಾರೆ. ಉದಾಹರಣೆಗೆ "ಉತ್ತರ ಕರ್ನಾಟಕದ ಸುಪಾರಿ ಕೊಲೆಗಳಿಗೆ ಮಿತಿಯೇ ಇಲ್ಲ." "ಸುಪಾರಿ ಪೊಲೀಸ್ ಉಮೇಶ್ ಮಷ್ಕಿರಿ" ಎಂದು ಬಳಸಿರುವುದನ್ನು ನೋಡಬಹುದು.

೩. **ಮಟ್ಯಾಶ್ :** (ಕ್ರಿ) ಇದು ಇಂಗ್ಲೀಶಿನ ಪದ. ಅಂದರೆ ಇದರರ್ಥ ಮುಗಿಸಿ ಹಾಕು, ಸಮಾಪ್ತಿ ಮಾಡು ಇದು ಕ್ರೈಂ ಜಗತ್ತಿನಲ್ಲಿ ಬಳಕೆಯಾಗುವ ಪದ. ಮಾಧ್ಯಮಗಳಲ್ಲಿ ಇದನ್ನು ಹೆಚ್ಚಾಗಿ ಬಳಸುತ್ತಾರೆ. ಮಟ್ಟಹಾಕು, ಮಟ್ಟಮಾಡು, ನೆಲಸಮಮಾಡು ಎನ್ನುವ ಅರ್ಥವೂ ಇದೆ. ಇದನ್ನು ಕ್ರೈಂನ್ಯೂಸ್‌ನಲ್ಲಿ ಬಳಸುತ್ತಾರೆ.

೪. **ಸ್ಕೆಚ್ಚು :** (ನಾ) ಇದು ಇಂಗ್ಲೀಶ್ ಪದ. Sketch ಅಂದರೆ ರೂಪರೇಖೆ ಎಂದರ್ಥ. ಇದನ್ನು ಕ್ರೈಂ ಜಗತ್ತಿನಲ್ಲಿ ಬಳಸುತ್ತಾರೆ. ಕೊಲೆ, ಸುಲಿಗೆ ಮತ್ತು ಕಳ್ಳತನಕ್ಕೆ ಹಾಕುವ ರೂಪರೇಖೆಯನ್ನು ಸ್ಕೆಚ್ ಎಂದು ಕರೆಯುತ್ತಾರೆ. ಕೊಲೆ ಮಾಡುವವರು ಹೂಡುವ ಉಪಾಯ. ರೂಪುರೇಷೆಯೇ ಸ್ಕೆಚ್ ಎಂದು ಕರೆಯುತ್ತಾರೆ. ಈ ಪದ ಮಾಧ್ಯಮಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಬಳಸುವುದನ್ನು ನೋಡುತ್ತೇವೆ. ಕ್ರೈಂ ನ್ಯೂಸ್‌ನಲ್ಲಿ ಈ ಪದ ಬಳಕೆ ಹೆಚ್ಚು ಕಂಡುಬರುತ್ತದೆ.

ಉದಾಹರಣೆ : "ಸುನಿಲ್ ಹತ್ಯೆಗೆ ಸ್ಕೆಚ್."

೫. **ಫಿನಿಷ್ :** (ನಾ) ಇದು ಸಹ ಇಂಗ್ಲೀಶ್ ಪದ. ಇದರರ್ಥ ಮುಕ್ತಾಯ, ಸಮಾಪ್ತಿ ಇತ್ಯಾದಿ. ಇದನ್ನು ಕ್ರೈಂ ನ್ಯೂಸ್‌ನಲ್ಲಿ ಬಳಸುತ್ತಾರೆ. ಕೊಲೆ ಮಾಡು ಎಂಬರ್ಥದಲ್ಲಿ ಬಳಸಲಾಗುತ್ತದೆ. ಮುಗಿಸು ಎನ್ನುವ ಅರ್ಥದಲ್ಲೂ ಬಳಕೆಯಿದೆ. ಫಿನಿಷ್ ಮಾಡು ಎಂದರೆ ಸಾಯಿಸು, ಮುಗಿಸಿ ಹಾಕು, ಕೊಂದು ಹಾಕು ಎನ್ನುವ ಅರ್ಥದಲ್ಲಿ ಇದು ಬಳಕೆಗೊಳ್ಳುತ್ತದೆ.

೬. **ನಿಖಾಲಿ :** (ನಾ) ಇದು ಉರ್ದುವಿನಿಂದ ಬಂದ ಪದ. ಕನ್ನಡದಲ್ಲಿ ಬಳಕೆ ಇದೆ. ನಿಖಾಲಿ ಎಂದರೆ ಸಂಪೂರ್ಣ ಖಾಲಿ ಎಂದು ಅರ್ಥ ನೀಡುತ್ತದೆ. ಇದನ್ನು ಕ್ರೈಂನ್ಯೂಸ್‌ನಲ್ಲಿ ಬಳಸುತ್ತಾರೆ.

ಉದಾಹರಣೆ : "ಸೆಕ್ಸ್‌ಖಯಾಲಿ ಜೇಬಲ್ಲಿದ್ದ ದುಡ್ಡೆಲ್ಲ ನಿಖಾಲಿ!"

೭. **ಪಿಂಪು :** (ನಾ) ಇದು ಇಂಗ್ಲೀಶ್‌ನ ಪಿಂಪ್ (Pimp) ಎಂಬ ಪದದಿಂದ ಕನ್ನಡಕ್ಕೆ ಬಂದಿದೆ. ಇದನ್ನು 'ಪಿಂಪು' ಎಂದು ಬಳಸುತ್ತಾರೆ. ಅಂದರೆ ಇದರರ್ಥ 'ತಲೆಹಿಡುಕ' ಎಂಬುದು. ಹೆಂಗಸರನ್ನು ಅಡ್ಡಹಾಕುವವನಿಗೆ ತಲೆಹಿಡುಕ ಎನ್ನುತ್ತಾರೆ. ಅದಕ್ಕೆ 'ಪಿಂಪು' ಎಂದೂ ಬಳಸುತ್ತಾರೆ. ಕ್ರೈಂನ್ಯೂಸ್ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಈ ಪದ ಬಳಕೆಯಾಗುತ್ತದೆ.

ಉದಾಹರಣೆ : "ಪಿಂಪು ಪ್ರಸಾದ ಸಿಕ್ಕಿ ಬಿದ್ದ."

೮. **ಫಿಟ್ಟಿಂಗ್ :** (ಕ್ರಿ) ಇದು ಇಂಗ್ಲೀಶ್ ಪದ. ಇದರರ್ಥ ಜೋಡಿಸು, ಭದ್ರಗೊಳಿಸು ಎಂದು ಅರ್ಥವಾದರೆ, ಕ್ರೈಂನ್ಯೂಸ್‌ನಲ್ಲಿ ವ್ಯಂಗ್ಯಾರ್ಥದಲ್ಲಿ ಬಳಕೆಯಿದೆ. ಜಗಳ ಹಚ್ಚು, ಕಿಡಿ ಹಚ್ಚು, ಕುತಂತ್ರ ಮಾಡು ಇತ್ಯಾದಿ ಅರ್ಥದಲ್ಲಿ ಬಳಸಲ್ಪಡುತ್ತದೆ.

ಉದಾಹರಣೆ : "ಚೆಲುವರಾಯನ ಫಿಟ್ಟಿಂಗ್‌ಗೆ ವಿರೋಧಿಗಳಿಬ್ಬರು ಫಿನಿಷ್."

೯. **ಲಾಂಗ್:** (ನಾ) (ಇಂ) ಉದ್ದನೆಯಾದ ಕತ್ತಿಯಂಥ ಆಯುಧ. ಇದು ಅನ್ಯಭಾಷಾ ಪದ. ಇದನ್ನು ಅಚ್ಚಕನ್ನಡದಲ್ಲಿ 'ಗಂಡುಗತ್ತಿ' ಎಂದು ಕರೆಯುತ್ತಾರೆ. ಇನ್ನೊಂದು 'ಮಚ್ಚು' ಎಂಬರ್ಥದಲ್ಲಿ ಬಳಕೆಯಿದೆ. ಇಂತಹ ಆಯುಧಗಳು ಕ್ರೈಂ ವಲಯದಲ್ಲಿ ಬಳಕೆಯಾಗುತ್ತವೆ. ಇಂದು ಮಾಧ್ಯಮಗಳಲ್ಲಿ ಪ್ರಸಾರಗೊಳ್ಳುವ ಕ್ರೈಂ ಸುದ್ದಿ ಪ್ರಸಾರದಲ್ಲಿ ಈ ಲಾಂಗ್, ಮಚ್ಚು, ರೈಫಲ್ ಎಂಬ ಪದ ಬಳಕೆ ಜಾಸ್ತಿಯಾಗಿದೆ. ಇಂದಿನ ಸಿನಿಮಾಗಳಲ್ಲಿ ಲಾಂಗ್, ಮಚ್ಚು, ರೈಫಲ್‌ಗಳದ್ದೇ ಅಬ್ಬರವಾಗಿರುತ್ತದೆ.

೧೦. **ರೈಫಲ್:** (ನಾ) (ಇಂ) ಗುಂಡು ಹಾರಿಸುವ ಸಾಧನ. ಬಂದೂಕು ಎಂಬರ್ಥವಿದೆ. ಇದು ಇಂಗ್ಲೀಶ್ ಪದ. ಕನ್ನಡದಲ್ಲಿ ಬಳಕೆಯಲ್ಲಿದೆ. ಕ್ರೈಂ ವಲಯದಲ್ಲಿ ಇದು ಬಳಕೆಯಾಗುತ್ತದೆ. **ರೈಫಲ್‌ಶೂಟಿಂಗ್, ರೈಫಲ್‌ವಾರ್** ಮುಂತಾಗಿ ಬಳಸುತ್ತಾರೆ. ಇದು ಸೈನಿಕರು, ಪೊಲೀಸ್ ವಲಯದಲ್ಲಿ ಬಳಕೆಯಾಗುವ ಪದ. ಇದನ್ನು ಕ್ರೈಂ ವಲಯದಲ್ಲೂ ಬಳಸಲಾಗುತ್ತದೆ.

೧೧. **ಆ್ಯರೆಸ್ಟ್ :** (ಇಂ) ಈ ಪದದ ಅರ್ಥ ಬಂಧಿಸು, ಹಿಡಿದು ಹಾಕು, ಕೋಳ ಹಾಕು ಇತ್ಯಾದಿ. ಇದು ಪೊಲೀಸ್ ವಲಯದಲ್ಲಿ ಬಳಕೆಯಾಗುವ ಪದ. ಅಪರಾಧಿಯನ್ನು ಬಂಧಿಸುವಲ್ಲಿ 'ಆ್ಯರೆಸ್ಟ್' ಎಂಬ ಪದ ಬಳಸಲ್ಪಡುತ್ತದೆ. ಇದು ಕ್ರೈಂ ವಲಯದಲ್ಲೂ ಬಳಸಲ್ಪಡುತ್ತದೆ. ಮಾಧ್ಯಮಗಳು ಅಪರಾಧ ಸುದ್ದಿಯನ್ನು ಬಿತ್ತರಿಸುವಾಗ 'ಅಪರಾಧಿಯನ್ನು ಆ್ಯರೆಸ್ಟ್ ಮಾಡಲಾಯಿತು' ಎಂದು ಬಳಸುತ್ತಾರೆ.

೧೨. **ವಾರೆಂಟ್ :** (ನಾ) (ಇಂ) ಇದು ಬಂಧನದ ಪತ್ರ. ಬಂಧಿಸಲು ಆದೇಶಿಸಿದ ಪತ್ರವನ್ನು 'ವಾರೆಂಟ್' ಎಂದು ಕರೆಯುತ್ತಾರೆ. ಇದು ಪೊಲೀಸ್ ವಲಯದ ಪದ. ಇದು 'ವಾರೆಂಟ್ ನೋಟಿಸು', 'ಆ್ಯರೆಸ್ಟ್ ವಾರೆಂಟ್' ಎಂಬಲ್ಲಿ ಬಳಕೆಗೊಳ್ಳುತ್ತದೆ. ಇಂದು ಈ ಪದ ಕ್ರೈಂನ್ಯೂಸ್ ಪ್ರಸಾರದಲ್ಲಿ ಬಳಸಲ್ಪಡುತ್ತದೆ. ಟಿ.ವಿ ೯ ಎಂಬ ವಾಹಿನಿಯಲ್ಲಿ ಕ್ರೈಂ ಸುದ್ದಿ ಪ್ರಸಾರಕ್ಕಾಗೀನೇ 'ವಾರೆಂಟ್' ಎಂಬ ಕಾರ್ಯಕ್ರಮ ರೂಪಿಸಿದ್ದಾರೆ.

೧೩. **ಪೊಲೀಸ್ ಸ್ಟೋರಿ :** (ನಾ) (ಇಂ) ಈ ಪದದ ಅರ್ಥ ಅಪರಾಧ ಸುದ್ದಿಯನ್ನು ಒಳಗೊಂಡ ಕಥೆ, ಪೊಲೀಸ್ ಇಲಾಖೆಯ ಸುದ್ದಿಗಳು ಎನ್ನುವ ಅರ್ಥವಿದೆ. ಇದು ಒಂದು ಪದವೂ ಹೌದು, ಇದು ಒಂದು ಪತ್ರಿಕೆಯೂ ಹೌದು. ಒಂದು ಪತ್ರಿಕೆಯ ಹೆಸರೇ 'ಪೊಲೀಸ್‌ಸ್ಟೋರಿ' ಎಂದಿದೆ. ಪೋಲಿಸ್ ಇಲಾಖೆಗೆ ಸಂಬಂಧಿಸಿದ ಅಪರಾಧ ಸುದ್ದಿಗಳನ್ನು ಬಿತ್ತರಿಸುವಂಥ ಪತ್ರಿಕೆಯೇ 'ಪೊಲೀಸ್ ಸ್ಟೋರಿ' ಎಂದು ಹೆಸರು ಪಡೆದಿದೆ.

೧೪. **ಕ್ರೈಂನ್ಯೂಸ್ :** (ನಾ) (ಇಂ) ಇದೂ ಇಂಗ್ಲೀಶ್ ಪದ. ಕನ್ನಡದಲ್ಲೂ ಹೆಚ್ಚಾಗಿ ಬಳಕೆಯಾಗುತ್ತಿದೆ. ಇದೂ ಸಹ ಅಪರಾಧ ಸುದ್ದಿಗಳು ಎಂಬರ್ಥ ನೀಡುತ್ತದೆ. ಇದು ಒಂದು ಪದವೂ ಹೌದು, ಒಂದು ಪತ್ರಿಕೆಯ ಹೆಸರೂ ಹೌದು. ಅಪರಾಧ ಸುದ್ದಿಗಳನ್ನು ಒಳಗೊಂಡಿರುವಂತಹ ಒಂದು ಪಾಕ್ಷಿಕ ಪತ್ರಿಕೆಯೂ ಹೌದು.

೧೫. ಕ್ರೈಂಸ್ಟೋರಿ : (ನಾ) (ಇಂ) ಈ ಪದದ ಅರ್ಥ ಅಪರಾಧ ಸುದ್ದಿಗಳನ್ನೊಳಗೊಂಡ ಕಥೆ. ಇದೂ ಸಹ ಇಂಗ್ಲೀಶ್‌ನಿಂದ ಬಂದ ಪದ. ಇದನ್ನು ಮಾಧ್ಯಮಗಳಲ್ಲಿ ಬಳಸಲಾಗುತ್ತದೆ. ಇದು ಒಂದು ಪದವೂ ಹೌದು. ಇದು ಒಂದು ಟಿ.ವಿ ವಾಹಿನಿಯಲ್ಲಿ ಪ್ರಸಾರಗೊಳ್ಳುವ ಕಾರ್ಯಕ್ರಮವೂ ಹೌದು. ಅಪರಾಧ ಸುದ್ದಿಗಳು Episodeನಲ್ಲಿ ದಿನನಿತ್ಯ ಉದಯ ಟಿ.ವಿ ಯಲ್ಲಿ ಪ್ರಸಾರವಾಗುತ್ತವೆ. ರಾತ್ರಿ ೧೦ ಗಂಟೆಗೆ ಈ ಕಾರ್ಯಕ್ರಮ ಪ್ರಸಾರವಾಗುತ್ತದೆ.

೧೬. ಕ್ರೈಂಡೈರಿ : (ನಾ) (ಇಂ) ಈ ಪದವೂ ಇಂಗ್ಲೀಶ್ ಪದ. ಕನ್ನಡದಲ್ಲಿ ಬಳಕೆಯಲ್ಲಿದೆ. ದಿನನಿತ್ಯದಲ್ಲಿ ನಡೆಯುವ ಅಪರಾಧಗಳನ್ನು 'ಕ್ರೈಂಡೈರಿ' ಎನ್ನಲಾಗುತ್ತದೆ. ಇದು ಒಂದು ಪದವೂ ಹೌದು, ಒಂದು ಟಿ.ವಿ ವಾಹಿನಿಯ ಸುದ್ದಿ ಕಾರ್ಯಕ್ರಮವೂ ಹೌದು. ಈ ಟಿ.ವಿ ಕನ್ನಡ ವಾಹಿನಿಯಲ್ಲಿ ಅಪರಾಧ ಸುದ್ದಿಯನ್ನು ಬಿತ್ತರಿಸುವಂಥ ಕಾರ್ಯಕ್ರಮವೇ 'ಕ್ರೈಂಡೈರಿ' ಆಗಿದೆ.

೧೭. ಖಟ್ಲೆ : (ನಾ) (ಮ) ಈ ಪದದ ಸಾಮಾನ್ಯಾರ್ಥ ಜಗಳ, ನ್ಯಾಯ, ಗಲಾಟೆ. ಈ ಖಟ್ಲೆ ಎಂಬ ಪದವು ಮರಾಠಿಯಿಂದ ಕನ್ನಡಕ್ಕೆ ಸ್ವೀಕರಣಗೊಂಡಿದೆ. ಇದನ್ನು ಜನಸಾಮಾನ್ಯರೂ ವ್ಯಾವಹಾರಿಕವಾಗಿ ಬಳಸುತ್ತಾರೆ. ಆದರೆ ಕ್ರೈಂನ್ಯೂಸ್‌ನಲ್ಲಿ ವಿಶೇಷವಾಗಿ ಬಳಕೆಯಾಗುತ್ತದೆ. ಅಪರಾಧಕ್ಕೆ ಸಂಬಂಧಿಸಿದ ಯಾವುದೇ ಜಗಳ, ನ್ಯಾಯ, ಗಲಾಟೆಯನ್ನು ಖಟ್ಲೆ ಎಂದು ಕರೆಯುತ್ತಾರೆ. ಹಾಗೂ ಕೋರ್ಟ್‌ಗಳಲ್ಲಿ ದಾವೆ ಎಂಬುದರ ಸಂವಾದಿಯಾಗಿ ಈ ಖಟ್ಲೆ ಎಂಬ ಪದವೂ ಬಳಕೆಯಾಗುತ್ತದೆ.

೧೮. ಖತಂ : (ನಾ) (ಹಿಂ) ಇದು ಹಿಂದಿಯಿಂದ ಬಂದ ಪದ. ಇದರ ಸಾಮಾನ್ಯಾರ್ಥ ಮುಗಿಸಿಹಾಕು. ಕತ್ತರಿಸು, ಮುಕ್ತಾಯ, ಸಮಾಪ್ತಿ ಎಂದು. ಇದು ಕ್ರೈಂನ್ಯೂಸ್‌ನಲ್ಲಿ ಬಳಕೆಯಾಗುತ್ತದೆ. ಅಲ್ಲಿ ಇದರ ವಿಶೇಷಾರ್ಥವೇನೆಂದರೆ ಕೊಲ್ಲುವುದು, ಕೊಂದು ಹಾಕಿಬಿಡುವುದು. ಕತ್ತರಿಸಿಹಾಕು, ತುಂಡರಿಸಿಹಾಕು, ಸಮಾಪ್ತಿ ಮಾಡು ಎಂಬರ್ಥವಿದೆ. ಇಂತಹ ಪದಗಳು ಕ್ರೈಂನ್ಯೂಸ್‌ಗಳಲ್ಲಿ ಸಹಜವಾಗಿ ಬಳಕೆಗೊಳ್ಳುತ್ತವೆ. ಈ ರೀತಿಯ ಪದಗಳು ಕ್ರೈಂನ್ಯೂಸ್ ವಿಶೇಷವಾಗಿ ಕಾಣಲು ಕಾರಣವಾಗಿದೆ.

೧೯. ಖಬರು : (ನಾ) (ಹಿಂ) ಇದು ಹಿಂದಿಯಿಂದ ಕನ್ನಡಕ್ಕೆ ಬಂದ ಪದ. ಇದನ್ನು ಜನಸಾಮಾನ್ಯರು ಅರಿವು, ಪ್ರಜ್ಞೆ ಎಂಬರ್ಥದಲ್ಲಿ ಬಳಸುತ್ತಾರೆ. ಆದರೆ ಕ್ರೈಂ ವಲಯದಲ್ಲಿ ಎಚ್ಚರಿಕೆ, ಜಾಗೃತಿ, ಜವಾಬ್ದಾರಿ ಎಂಬರ್ಥದಲ್ಲಿ ಬಳಸಲಾಗುತ್ತದೆ. ಈ ಪದವನ್ನು ಮಾಧ್ಯಮಗಳಲ್ಲಿ ಕ್ರೈಂನ್ಯೂಸ್ ಪ್ರಸಾರದಲ್ಲಿ ಬಳಸುತ್ತಾರೆ.

೨೦. ಖದೀಮ : (ನಾ) (ಹಿಂ) ಈ ಪದದ ಅರ್ಥ ಕಳ್ಳ. ಕಳವು ಮಾಡುವವನು, ಕದಿಯುವವನು. ಜನಸಾಮಾನ್ಯರಲ್ಲಿ ಈ ಪದವನ್ನು ಯಥೇಚ್ಛವಾಗಿ ಬಳಸುತ್ತಾರೆ. ವ್ಯಾವಹಾರಿಕವಾಗಿಯೇ 'ಇವನು ದೊಡ್ಡ ಖದೀಮ ಇದ್ದಾನೆ' ಎಂದು ಬಳಸುವುದನ್ನು ನೋಡುತ್ತೇವೆ. ಇದು ರಾಜಕೀಯ ವಲಯದಲ್ಲಿ ಬಳಕೆಗೊಳ್ಳುತ್ತದೆ. ಇದನ್ನು ಕ್ರೈಂನ್ಯೂಸ್‌ನಲ್ಲಿ ವಿಶೇಷವಾಗಿ ಬಳಸುತ್ತಾರೆ.

೨೧. ಖರಾಬ್ : (ನಾ) (ಹಿಂ) ಕೆಟ್ಟದಾದ, ಕ್ರೂರಿಯಾದ ಎಂಬರ್ಥವಿದೆ. ಇದನ್ನು ರಾಜಕೀಯ ವಲಯದಲ್ಲಿ ಬಳಸುವುದನ್ನು ಕಾಣುತ್ತೇವೆ. ಇದು ಕ್ರೈಂ ಲೋಕದಲ್ಲಿ ಬಳಕೆಯಾಗುತ್ತದೆ. ಖರಾಬ್ ನನ್ನಮಗ, ಖರಾಬ್ ಕಿಲ್ಲರ್ ಎಂಬಿತ್ಯಾದಿ ಬಳಕೆಯಲ್ಲಿದೆ. ಇಂಥ ಪದಗಳೇ ವಿಶಿಷ್ಟವಾಗಿ ಬಳಸಲ್ಪಡುತ್ತವೆ.

ಈ ರೀತಿಯ ಅನ್ಯಭಾಷಾ ಪದಗಳು ಕನ್ನಡ ಭಾಷೆಯ ಪದಗಳೊಂದಿಗೆ ಹೆಚ್ಚಾಗಿ ಕ್ರೈಂ ವಲಯದಲ್ಲಿ ಬಳಕೆಯಾಗುತ್ತವೆ. ಕ್ರೈಂ ಲೋಕದಲ್ಲಿ ಬಳಕೆಯಾಗುವ ಅನೇಕ ಪದಗಳು ಹಿಂದಿ, ಇಂಗ್ಲೀಶ್, ಉರ್ದು, ಮರಾಠಿ ಮೂಲದಿಂದ ಬಂದವಾಗಿರುತ್ತವೆ. ಅನ್ಯ ಭಾಷೆಯ ಪದಗಳನ್ನು ಸ್ವೀಕರಿಸಿಕೊಂಡು ಕನ್ನಡದ ಜಾಯಮಾನಕ್ಕೆ ಒಗ್ಗಿಸಿಕೊಂಡಿರುವುದು ಕಂಡುಬರುತ್ತದೆ. ಪದರಚನೆ ಮತ್ತು ಪದಬಳಕೆಯನ್ನು ಗಮನಿಸಿದಾಗ ಪ್ರಮುಖವಾಗಿ ಈ ಅಂಶ ಕಂಡುಬರುತ್ತದೆ. ವೀಕ್ಷಕರ ಅಥವಾ ಕೇಳುಗರ ಅಥವಾ ಓದುಗರನ್ನು ಗಮನ ಸೆಳೆಯಲಿಕ್ಕೆ ಸುಲಭ ಸಂವಹನಕ್ಕೆ ಈ ರೀತಿ ಭಾಷಾ ಬಳಕೆಯಾಗುತ್ತಿದೆ ಎಂಬುದು ತಿಳಿದು ಬರುತ್ತದೆ.

೪.೩ ವಾಕ್ಯರಚನೆ

ಹಲವು ಪದಗಳು ಕ್ರಮಬದ್ಧವಾಗಿ ಸೇರಿಕೊಂಡು ಒಂದು ವಾಕ್ಯ ರಚನೆಯಾಗುತ್ತದೆ. ಇಂತಹ ವಾಕ್ಯ ರಚನೆಯಾಗುವಲ್ಲಿ ಆಯಾ ಭಾಷೆಯಲ್ಲಿ ಅದರದೇ ಆದ ನಿಯಮವಿರುತ್ತದೆ. ಕನ್ನಡದಲ್ಲಿ **ಕರ್ತೃಪದ + ಕರ್ಮಪದ + ಕ್ರಿಯಾಪದಗಳು** ಸೇರಿ ಒಂದು ವಾಕ್ಯ ರಚನೆಗೊಳ್ಳುತ್ತದೆ. ಹೀಗೆ ರಚನೆಗೊಂಡ ವಾಕ್ಯಗಳನ್ನು ಮೂರು ಪ್ರಕಾರದಲ್ಲಿ ಗುರುತಿಸಲಾಗುತ್ತದೆ. ೧. ಸರಳವಾಕ್ಯ ೨. ಸಂಕೀರ್ಣವಾಕ್ಯ ೩. ಮಿಶ್ರವಾಕ್ಯ ಇಂತಹ ವಾಕ್ಯಗಳು ಕ್ರೈಂನ್ಯೂಸ್‌ನಲ್ಲಿ ಹೇಗೆ ರಚನೆಗೊಳ್ಳುತ್ತವೆ ಎಂಬುದನ್ನು ಇಲ್ಲಿ ಉದಾಹರಣೆಗಳ ಮೂಲಕ ನೋಡಬಹುದು. (ಕರ್ತೃಪದ + ಕರ್ಮಪದ + ಕ್ರಿಯಾಪದ = ವಾಕ್ಯ).

ಉದಾಹರಣೆ : 'ಎಲ್ಲಿ ಕತ್ತಲಿದೆಯೋ ಅಲ್ಲಿ ಎಚ್ಚರದ ಕಣ್ಣು!'

ಈ ವಾಕ್ಯ ಕನ್ನಡದ ವಾಕ್ಯರಚನಾ ನಿಯಮದಂತೆ ರಚನೆಯಾಗಿಲ್ಲ. ಕರ್ತೃ - ಕರ್ಮ - ಕ್ರಿಯಾ ಪದಗಳು ಕ್ರಮವಾಗಿ ಸೇರಿಕೊಂಡಿಲ್ಲ. ಇದು ಒಂದು ರೀತಿ ಕಾವ್ಯಾತ್ಮಕ ಭಾಷೆಯಂತೆ ವಾಕ್ಯ ರಚನೆಗೊಂಡಿದೆ. ಈ ವಾಕ್ಯದ ಮುಂದುವರಿದ ವಾಕ್ಯ ನೋಡುವುದಾದರೆ ಅಲ್ಲಿಯೂ ಸಹ ಅಷ್ಟೇ.

'ಎಲ್ಲಿ ಕ್ರಿಮಿನಲ್ಸ್ ಇದ್ದಾರೋ ಅಲ್ಲೇ ನಮ್ಮ ಕ್ಯಾಮರಾ!'

ಈ ವಾಕ್ಯದಲ್ಲೂ ಕರ್ತೃ-ಕರ್ಮ-ಕ್ರಿಯಾಪದಗಳ ಸಂಪೂರ್ಣ ವಾಕ್ಯರಚನೆ ಇಲ್ಲ. ಕಾವ್ಯ ಭಾಷೆ ಇದೆ. ವಾಕ್ಯರಚನಾ ನಿಯಮ ಬಿಟ್ಟಿದೆ. ಹಿಂದು-ಮುಂದಾಗಿ ವಾಕ್ಯ ರಚನೆಯಾಗಿದೆ.

"ಬಳ್ಳಾರಿಯ ದುರಾದೃಷ್ಟ ಹೇಗಿದೆಯೋ ನೋಡ್ರಿ!' ಅಲ್ಲೊಂದ್ಕಡೆ ತಡೀಲಕ್ಕೆ ಸಾಧ್ಯನೇ ಇಲ್ಲಾ ಅನ್ನೋವಷ್ಟು ಬಿಸಿಲು, ಮತ್ತೊಂದ್ಕಡೆ ಮ್ಯಾಂಗ್‌ನೀಸ್ ಗಣಿಯ ಗೋಳು. ಜನರನ್ನು ಹೈರಾಣಾಗಿಸೋಕೆ

ಈ ಎರಡೂ ಸಾಕಾಗಲಿಲ್ಲ ಅಂತಾ, ಒಂದರ ಮೇಲೊಂದರಂತೆ ನಡೆಯುತ್ತಿರೋ ಕೊಲೆಗಳು. ಅದಕ್ಕೆ ರಾಜಕೀಯದ ಬಣ್ಣ. ಈ ಜನಾ ಅದನ್ನೆಲ್ಲ ಹೇಗೆ ಸಹಿಸಿಕೊಂಡಿದ್ದಾರೋ ಏನೋ ಕಣ್ರೀ". ಈ ಪ್ಯಾರಾದಲ್ಲಿ ಸರಳ, ಸಂಕೀರ್ಣ ಮತ್ತು ಮಿಶ್ರ ವಾಕ್ಯಗಳನ್ನು ಕಾಣುತ್ತೇವೆ.

ಕ್ರೈಂನ್ಯೂಸ್‌ನಲ್ಲಿ ವಾಕ್ಯ ರಚನೆ ಕೆಲವೊಮ್ಮೆ ಅಪೂರ್ಣ ವಾಕ್ಯಗಳಾಗಿರುತ್ತವೆ. ಆದರೂ ಅರ್ಥಪೂರ್ಣವಾಗಿರುತ್ತವೆ. ಕೆಲವೊಮ್ಮೆ ಪ್ರಶ್ನಾರ್ಥಕ ವಾಕ್ಯಗಳು, ಆಶ್ಚರ್ಯಸೂಚಕ ವಾಕ್ಯಗಳು ಬಳಕೆಯಾಗುತ್ತವೆ. ಇದು ವರದಿಗಾರರು ಅಥವಾ ನಿರೂಪಕರು ರಚಿಸುವ ವಾಕ್ಯರಚನೆಯಾಗಿರುತ್ತದೆ. ಉದಾಹರಣೆಯಾಗಿ ಕೆಲವೊಂದು ವಾಕ್ಯಗಳನ್ನು ನೋಡಬಹುದು.

ಉದಾಹರಣೆ : "ಎಲ್ಲಿಯ ದಾವೂದ್ ಇಬ್ರಾಹಿಂ? ಎಲ್ಲಿಯ ಶೈಲಜಾ? ಎಲ್ಲಿಯ ಛೋಟಾ ರಾಜನ್? ಎಲ್ಲಿಯ ರವಿ? ಅವರಿಗೆ ಸಮೀವುಲ್ಲಾ! ಸಂಪರ್ಕದಲ್ಲಿದ್ದಾನೆ ಅನ್ನೋ ಕಾರಣಕ್ಕೆ ರವಿಪೂಜಾರಿ ತನ್ನವರಿಂದ ಇವರ್‍ಯಾರ್‌ಗೋ ಗುಂಡು ಹಾರಸ್ತಾನೆ, ಕೊಂದು ಬಿಡ್ತಾನೆ. ಅವರ ಜಗತ್ತಿನಲ್ಲಿ ದಯೆ ದಾಕ್ಷಿಣ್ಯಗಳಿಗೆ ಜಾಗಾನೇ ಇಲ್ಲ. ಆ ವ್ಯಕ್ತಿ ಹೇಳಿದಾ 'ನಾನು ಆಸ್ಟ್ರೇಲಿಯಾದಿಂದ ಮಾತಾಡ್ತಾ ಅದೀನಿ. ರವಿ ಪೂಜಾರಿ."

ಈ ಮೇಲಿನ ವಾಕ್ಯರಚನೆ ನೋಡಿದರೆ ಕೆಲವು ವಾಕ್ಯಗಳು ಅಪೂರ್ಣವಾಗಿವೆ. ಆದರೆ ಪ್ರಶ್ನಾರ್ಥಕ ಮತ್ತು ಆಶ್ಚರ್ಯಸೂಚಕವಾಗಿ ಬಳಕೆಯಾಗಿದೆ. ಇದು ಕ್ರೈಂನ್ಯೂಸ್‌ನ ವಿಶಿಷ್ಟ ಅಂಶವಾಗಿದೆ. ಇಲ್ಲಿನ ವಾಕ್ಯರಚನೆ ವಿಶಿಷ್ಟವಾಗಿದೆ. ಹಾಗೆಯೇ **ನುಡಿಬೆರಕೆ** ಮತ್ತು **ನುಡಿಪಲ್ಲಟ**ವಾದ ವಾಕ್ಯರಚನೆಯಾಗಿರುತ್ತದೆ.

ಉದಾಹರಣೆ : "ಆದ್ರೆ **Its most unfortunate** ಆಗಬಾರದಾಗಿತ್ತು."

"ಸ್ವರ್ಗದಲ್ಲಿ ಮದುವೆ ನಡೆದ ಮೇಲೆ ಅಲ್ಲಿ ಯಾರೋ **go to hell** ಅಂಥಾ ಶಾಪ ಕೊಡ್ತಾರೆ ಅನ್ನಿಸುತ್ತೆ."

"ಅವರಿಬ್ರನ್ನ ಸುಟ್ಟು ಹಾಕಿದ್ರು. ಕೊಂದು ಹಾಕಿದ್ರು.

ಗೋಲಿಮಾರ್‌ದಿಯಾ ಉನ್‌ಕೋ ಅಂತಾ ಹೇಳಿದ್ರು."

ಈ ವಾಕ್ಯಗಳಲ್ಲಿ ಪದ ಬಳಕೆಯಾಗಿರುವುದು ಹಾಗೂ ವಾಕ್ಯಾಂಶ ಬಳಕೆಯಾಗಿರುವುದು ಕಂಡುಬರುತ್ತದೆ. ಇದೇ ವಾಕ್ಯರಚನೆಯ ವಿಶಿಷ್ಟ ರೀತಿಯಾಗಿದೆ. ಈ ರೀತಿಯ ಬಳಕೆಯಿಂದ ಕ್ರೈಂನ್ಯೂಸ್ ವಿಶೇಷವಾಗಿರುತ್ತವೆ.

* ‘ಕ್ರೈಂನ್ಯೂಸ್’ ತಲೆಬರಹಗಳಲ್ಲಿ ವಾಕ್ಯರಚನೆ

‘ಪ್ರೀತಿಗಾಗಿ ಪ್ರೇಯಸಿಯನ್ನೇ ಕೊಂದ ತೇಜ ಟಿ.ವಿ ಮೇಕಪ್ ಮ್ಯಾನ್’

‘ಹೋಟೆಲ್ ರೂಮಿನಲ್ಲಿ ಸಿಕ್ಕಿ ಬಿದ್ದ ನಯನಾತಾರಾ’

‘ಸೆಕ್ಸ್ ಖಯಾಲಿ; ಜೇಬಲ್ಲಿದ್ದ ದುಡ್ಡೆಲ್ಲ ನಿಖಾಲಿ’

‘ಮಿಂಡನೊಂದಿಗೆ ಚಕ್ಕಂದವಾಡುತ್ತಿದ್ದ ಮಿಟುಕಲಾಡಿಯ ಮರ್ಡರ್’

‘ಸೆಕ್ಸ್ ಪ್ರಾಬ್ಲಮ್ ಇದಕ್ಕಿಲ್ಲವೆ ಸೆಲ್ಯೂಷನ್’

‘ಹಸ್ಮಾತಾಜ್ ಹತ್ಯೆಯ ರೂವಾರಿ ಇಮ್ರಾನ್’

‘ಅಸಲು ಮಾರ್ಕೆಟ್ ಮಾಫಿಯಾ ಏನು?

‘ನಾಯಕನೆಂಬ ಪೊಲೀಸ್ ಪುಂಡ!

ಪ್ರೇಮಿಗಳ ಬದುಕು ಅಗ್ನಿಕುಂಡ!’

‘ಚೆಲುವರಾಯನ ಫಿಟ್ಟಿಂಗ್‌ಗೆ ವಿರೋಧಿಗಳಿಬ್ಬರು ಫಿನಿಷ್’

‘ಡಾ|| ಗುರುಪ್ರಸಾದರ ಸಾರಥ್ಯದಲ್ಲಿ ಹಳ್ಳ ಹಿಡಿದಿರುವ ಪೊಲೀಸ್ ಪರೀಕ್ಷೆ’

‘ಪಿಂಪು ಪ್ರಸಾದ ಸಿಕ್ಕಿಬಿದ್ದ!’

‘ಅವನ ಅಡ್ಡೆಯಲ್ಲಿ ಸಾವಿರಾರು ಚಿತ್ರನಟಿಯರಿದ್ದರು.’

‘ಬೆಂಗಳೂರು ಭೂಗತಲೋಕ ಕಂಪನ ... ರವಿಬಾಯ್ ... ಲೋಗ್’

‘ಭೀಮಾ ತೀರದಲ್ಲಿ ಮತ್ತೆ ರಿವೇಂಜ್ ಕಿಲ್ಲಿಂಗ್’

‘ಟಿ.ವಿ. ನೈನ್ ಕರಾಮತ್ತು! ತೋಳ ಹಳ್ಳಕ್ಕೆ ಬಿತ್ತು’ ಇತ್ಯಾದಿ.

* ನುಡಿಗಟ್ಟುಗಳು

ಕ್ರೈಂನ್ಯೂಸ್‌ಗಳಲ್ಲಿ ನುಡಿಗಟ್ಟುಗಳೂ ಸಹ ಬಳಕೆಯಾಗುತ್ತವೆ. ವರದಿಗಾರರು, ಸುದ್ದಿವಾಚಕರು ಮತ್ತು ನಿರೂಪಕರು ಕ್ರೈಂ ನ್ಯೂಸನ್ನು ಪ್ರಸಾರ ಮಾಡುವಾಗ ಅಲಂಕೃತವಾದ ಭಾಷೆ ಬಳಸುತ್ತಾರೆ. ಅದರಲ್ಲಿ ನುಡಿಗಟ್ಟುಗಳನ್ನು ಬಳಸುವುದು ಒಂದು. ಅಂತಹ ಕೆಲವು ನುಡಿಗಟ್ಟುಗಳನ್ನು ಈ ಕೆಳಗಿನ ಉದಾಹರಣೆಗಳಲ್ಲಿ ಗಮನಿಸಬಹುದು.

ಉದಾಹರಣೆಗೆ :

೧. ಕತ್ತೆ ಬಾಲ ಕುದುರೆ ಜುಟ್ಟು.

೨. ಹೆತ್ಲಾಂಡಿ ನನ್ನ ಮಗ.

೩. ತೋಲಾಂಡಿನಾಯ್ಕ

೪. ಹೈಟ್‌ಲಗಾ

೫. ಎತ್ತಂಗಡಿ

೬. ಗಂಡಾಗುಂಡಿ

೭. ಚಳ್ಳೆಹಣ್ಣು ತಿನ್ನಿಸು

೮. ಝುಂಗಿ ಕುಸ್ತಿ

೯. ರಂಪುರಾಡಿ

೧೦. ತಲೆಮಾಸಿದ

೧೧. ಮನೆಮುರುಕ ಮುಂತಾದ ನುಡಿಗಟ್ಟುಗಳು ಬಳಸಲ್ಪಡುತ್ತವೆ.

ಒಟ್ಟಾರೆಯಾಗಿ ಕ್ರೈಂನ್ಯೂಸ್‌ನಲ್ಲಿ ಭಾಷಾ ಬಳಕೆಯನ್ನು ಧ್ವನಿರಚನೆ, ಪದರಚನೆ ಮತ್ತು ವಾಕ್ಯರಚನೆ ಎನ್ನುವ ಮೂರೂ ಅಂಶಗಳನ್ನು ಇಟ್ಟುಕೊಂಡು ಚರ್ಚೆ ಮಾಡಿದರೆ, ಇಲ್ಲಿ ಮೂರೂ ನಿಟ್ಟಿನಲ್ಲಿ ಹಲವು ವೈಶಿಷ್ಟ್ಯಗಳು ಕಂಡುಬರುತ್ತವೆ. ಹೊಸಧ್ವನಿಗಳ - ವಿಶಿಷ್ಟ ಧ್ವನಿಗಳ ಬಳಕೆ, ಹೊಸ ಬಗೆಯ ಪದರಚನೆ ಇಲ್ಲಿದೆ. ವಿವಿಧ ವಲಯಗಳ ಪದಗಳ ಬಳಕೆ ಹಾಗೂ ವಾಕ್ಯಗಳ ರಚನೆ ಕಂಡುಬರುತ್ತದೆ. ಈ ಎಲ್ಲಾ ಅಂಶಗಳಿಂದ ಹೊಸ ಬಗೆಯ ವಿಧಾನವನ್ನು, ಹೊಸ ಬಗೆಯ ಶೈಲಿಯನ್ನು, ಹೊಸ ಬಗೆಯ ರಚನೆಯನ್ನು ಕಾಣುತ್ತೇವೆ. ಆದ್ದರಿಂದ ಕ್ರೈಂನ್ಯೂಸ್ ಭಾಷೆಯು ಆಕರ್ಷಣೀಯವಾಗಿರುತ್ತದೆ. ಇದಕ್ಕೆ ಕಾರಣ ಭಾಷಾ ರಚನೆ, ಭಾಷಾ ಬಳಕೆ ಮತ್ತು ಭಾಷಾ ಶೈಲಿ. ಇವು ಮೂರೂ ಪ್ರಮುಖ ಕಾರಣಗಳಾಗಿ ವೈಶಿಷ್ಟ್ಯಪೂರ್ಣವಾಗಿವೆ ಎಂಬುದು ಅಧ್ಯಯನದ ಮೂಲಕ ಕಂಡುಬರುತ್ತದೆ.

□□

ಅಧ್ಯಾಯ ೫

ನುಡಿಮಿಶ್ರಣ ಮತ್ತು ನುಡಿಪಲ್ಲಟ

ಅಧ್ಯಾಯ ೫

ನುಡಿಮಿಶ್ರಣ ಮತ್ತು ನುಡಿಪಲ್ಲಟ

ಭಾಷೆಯ ಸಂಪರ್ಕ ಹೆಚ್ಚಾದಂತೆಲ್ಲಾ ಭಾಷಾ ಮಿಶ್ರಣವಾಗುವುದು ಸಹಜ. ಒಂದಕ್ಕಿಂತ ಹೆಚ್ಚು ಭಾಷೆಯ ಸಂಪರ್ಕದಲ್ಲಿರುವ ವ್ಯಕ್ತಿ ಈ ರೀತಿ ಭಾಷೆಗಳನ್ನು ಮಿಶ್ರಗೊಳಿಸುವುದು ಅವನಿಗೂ ಸಹಜವೇ. ಏನನ್ನೋ ಒತ್ತಿ ಹೇಳಬೇಕೆಂದು ಹೊರಟಾಗ ಅನ್ಯಭಾಷೆ ಹೆಚ್ಚು ಪರಿಣಾಮ ಬೀರುತ್ತದೆ ಎಂದವನು ಭಾವಿಸುವುದೂ ಅಥವಾ ತಾನು ನೆಲೆಸಿರುವ ಭಾಷಾ ಸಂದರ್ಭದಲ್ಲಿ ತನ್ನ ಮೂಲ ಭಾಷೆಗಿಂತ ಈ ಅನ್ಯಭಾಷೆಯೇ ಸುಗಮ ಹಾಗೂ ಸರಾಗ ಎಂದುಕೊಳ್ಳುವುದೂ ಅಥವಾ ತನ್ನ ಮೂಲಭಾಷೆಗಿಂತ ಅನ್ಯಭಾಷೆಯೇ ಕೇಳುವವನಿಗೆ ಹೆಚ್ಚು ಅರ್ಥವಾಗುತ್ತದೆಂದು ತಿಳಿಯುವುದೂ ಅಥವಾ ಅನ್ಯಭಾಷಾ ವ್ಯಾಮೋಹ ಹಾಗೂ ಕನ್ನಡ ಬಳಸುವುದರಲ್ಲಿ ಇರುವ ವೈಯಕ್ತಿಕ ಸಂಕೀರ್ಣ ಪ್ರೇರಣೆಯೂ ಈ ರೀತಿಯ ಭಾಷಾ ಮಿಶ್ರಣಕ್ಕೆ ಕಾರಣವಾಗಬಹುದು. ಬಹುಭಾಷಿಕ ಸಂದರ್ಭವೂ ಅವನ ಅರಿವಿಲ್ಲದೆಯೇ ಅವನು ನುಡಿಬೆರೆಸುವಂತೆ ಮಾಡುತ್ತದೆ.

ಭಾಷಾ ಮಿಶ್ರಣ ಮೇಲು ನೋಟಕ್ಕೆ ಅನ್ಯಭಾಷಾ ಸ್ವೀಕರಣದ ಒಂದು ಪ್ರಭೇದದಂತೆ ಕಾಣುತ್ತದೆ. ಆದರೆ ಅವೆರಡಕ್ಕೂ ಮೌಖಿಕವಾದ ವ್ಯತ್ಯಾಸಗಳುಂಟು. ಸ್ವೀಕರಣ ಸಂದರ್ಭದಲ್ಲಿ ಕನ್ನಡದಲ್ಲಿ ತತ್ಸಮಾನ ಪದಪಲ್ಲಟ ಅನಿವಾರ್ಯವಾಗಿ ಅನ್ಯ ಭಾಷೆಯಿಂದ ಪದವನ್ನು ಸ್ವೀಕರಿಸಲಾಗುತ್ತದೆಯಾದರೂ ನುಡಿ ಬೆರಕೆಯ ಸಂದರ್ಭದಲ್ಲಿ ಕನ್ನಡದಲ್ಲೇ ಸೂಕ್ತ ಪದವಿದ್ದೂ ಅನ್ಯಭಾಷಾ ಪದವನ್ನು ಬಳಸುವ ಮೋಹವಿರುತ್ತದೆ. ಭಾಷಾ ಮಿಶ್ರಣದಿಂದ ಬಳಕೆಯಾಗುವ ಅನ್ಯಭಾಷಾ ಪದಗಳು ಕನ್ನಡದ ಪಾಲಿಗೆ ಸ್ವೀಕೃತಿ ಪದಗಳಲ್ಲ. ಅವು ತಾತ್ಕಾಲಿಕವಾಗಿ ಬೆರಕೆಯಾದ ಪದಗಳು ಮಾತ್ರ.

ಗ್ರಾಂಥಿಕ ಮಾಧ್ಯಮಗಳಿಗಿಂತಲೂ ಮೌಖಿಕ ಮಾಧ್ಯಮಗಳಿಗೆ ನುಡಿಬೆರಕೆಯ ಅಗತ್ಯ ಕಾಣಬರುತ್ತದೆ. ಏಕೆಂದರೆ ಇಲ್ಲಿ ಹೇಳುವುದಕ್ಕೆ ಹೆಚ್ಚು ಒತ್ತು ನೀಡಿ ಹೇಳಬೇಕಾಗುತ್ತದೆ. ಮೌಖಿಕ ಮಾಧ್ಯಮಗಳು ನುಡಿಬೆರಕೆಯ ಕಾರಣದಿಂದ ಹೆಚ್ಚು ಸಂವಹನಶೀಲವೂ ಆಗುತ್ತಿದೆ. ಉದಾಹರಣೆಗೆ ಖಾಸಗೀ ಟಿ.ವಿ

ಚಾನೆಲ್‌ಗಳಲ್ಲಿ ಕನ್ನಡಕ್ಕೆ ಹಿಂದಿ-ಇಂಗ್ಲೀಶ್ ಭಾಷೆಗಳನ್ನು ಲೀಲಾಜಾಲವಾಗಿ ಬೆರೆಸಬಲ್ಲರು. ಟಾಕೀಸುಗಳಲ್ಲಿ, ಸಂದರ್ಶನಗಳಲ್ಲಿ ಈ ರೀತಿ ಭಾಷೆ ಬೆರೆಸಿ ನಿರರ್ಗಳವಾಗಿ ಮಾತನಾಡುತ್ತಿರುತ್ತಾರೆ. ಅಂತೆಯೇ ಕ್ರೈಂ ನ್ಯೂಸ್‌ನ ಪ್ರಸಾರದಲ್ಲಿ ನಿರೂಪಕ ಅಥವಾ ಸುದ್ದಿಯನ್ನು ಓದುವವರು ಭಾಷೆ ಬೆರೆಸಿ ಓದುತ್ತಾರೆ. ಅಲ್ಲಿ ನುಡಿಮಿಶ್ರಣ ಮತ್ತು ನುಡಿಬೆರಕೆಯಾಗುವುದು ಕಂಡು ಬರುತ್ತದೆ.

ಉದಾ : ೧. "ಆತ್ಮೀಯ ವೀಕ್ಷಕ, ಮಿತ್ರರಿಗೆಲ್ಲ ನಿಮ್ಮ ಕಾಕತ್ಕರ್ ಮಾಡುವ **ಸಲಾಮ್**. ಜೊತೆಗೆ ಇವತ್ತಿನ ವಿಶೇಷ ಸಂಚಿಕೆಗೆ **ವೆಲ್‌ಕಮ್**. ಇವತ್ತಿನ **ಕ್ರೈಂಸ್ಟೋರಿಗೆ** ಸಿಕ್ಕಿದ ಈ ಘಟನೆ ನಡೆದದ್ದು ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ. ಮೊದ್ಲಿಗೇ ಒಂದು **ಶ್ಯಾಂಪಲ್ ಬಿಟ್** ನೋಡಿ! ....

ನಮ್ಮ ತಂಡ ಈ ಹುಡುಗನನ್ನು ಮಾತಾಡಿಸಿದ್ದು **ರಿಮ್ಯಾಂಡ್ ಹೋಮ್**‌ನಲ್ಲಿ. ಈ ಹನ್ನೊಂದು ವರ್ಷದ ಹುಡುಗ ರಿಮ್ಯಾಂಡ್ ಹೋಮ್‌ಗೆ ಯಾಕ್ ಬಂದಾ ಅಂತೀರಾ? ಈತನ ಮೇಲಿದೆ ಕೊಲೆ ಆರೋಪ! ಅದು ಅಪ್ಪನ ಕೊಲೆಯಲ್ಲಿ ಭಾಗಿಯಾದ ಆರೋಪ!.... **ಹೈಟ್‌ಲಗಾ**'..... ಇವನ ಅಪ್ಪ ರಮೇಶನನ್ನು ಕೊಂದವರು ಯಾರು ಅಂತೀರಾ ವಿಜಯಲಕ್ಷ್ಮಿ! ಅವನ ಹೆಂಡತಿ ವಿಜಯಲಕ್ಷ್ಮಿಯೇ ರಮೇಶನನ್ನು ಕೊಂದು ಹಾಕಿದ್ದಾಳೆ".

೨. "ಅವರು ಒಳಗೆ ಹೋದಾಗ **ರೆಸಿಸ್ಟ್** ಮಾಡಿದ್ರು. ಆ ಹುಡುಗ್ರನ್ನ ಕೆಟ್ಟ ಪದಗಳಿಂದ ನಿಂದಿಸಿದ್ರೂ. ಆ ಸಿಟ್ಟಿನ ಭರದಲ್ಲಿ ಅವರಿಬ್ರೂನೂ ನಮ್ಮುಡುಗ್ರು ಕೊಂದು ಹಾಕಿದ್ರು. ಆದ್ರೆ **Its Most Unfortunate** ಆಗಬಾರದಾಗಿತ್ತು".

೩. "**ಸರೆಂಡರ್** ಅನ್ನೋ ಮಾತೇ ಇಲ್ಲಾ. **ಅರೆಸ್ಟಾದ್ರೆ** ತೊಂದರೇ ಇಲ್ಲಾ. ಅದಕ್ಕೆ ಮೊದ್ಲು ದಾವೂದ್ ಹಾಗೂ ಶಕೀಲ್‌ನ ಕೊಲ್ಲಬೇಕಲ್ಲಾ ಅನ್ನೋದು ರವಿಪೂಜಾರಿ ಹೇಳೋ ಮಾತು. ದಾವೂದ್ ಇಬ್ರಾಹಿಂ ಪಾಕಿಸ್ತಾನದಲ್ಲಿ **ಸೆಟ್ಲಾಗಿ** ಮಿಯಾಂಡರ್ ಜೊತೆ ಇದ್ದು ಸಂಬಂಧ ಬೆಳಸ್ಕೊಂಡು **ಕ್ರಿಕೆಟ್** ಆಡ್ತಾ ಇದ್ದಾನೆ. ಶಕೀಲ್ ಮತ್ಯಾವುದೋ ದೇಶದಲ್ಲಿದ್ದಾನೆ. ರವಿಪೂಜಾರಿ ಆಸ್ಟ್ರೇಲಿಯಾ ಅಂತಾನೆ. ಹೀಗೆ ಇವರುಗಳು ಎಲ್ಲೆಲ್ಲೋ ಇದುಕೊಂಡು **ಕಂಟ್ರೋಲ್** ಮಾಡ್ತಾ ಇರೋದು ಭಾರತದ ಭೂಗತ ಜಗತ್ತನ್ನು. ಅದು ಈಗ ಬೆಂಗಳೂರಿನ ತನಕಾ ಬಂದಿದೇ. ಮುಂದೆ ಇನ್ನೆಲ್ಲೀ ತನಕ ಹೋಗುತ್ತೋ ಕಾದು ನೋಡಬೇಕು ಅಷ್ಟೇ".

೪. "ಇತ್ತೀಚೆಗೆ ಏನಾಗಿದೆ ಅಂದ್ರೇ, ಇಡೀ ಇಂಡಿಯಾಗೆ ಅಲ್ಲಾ ಇಡೀ ಏಷಿಯಾಗೆ **ಕಂಪೇರ್** ಮಾಡಿದ್ರೆ, ನಮ್ಮ ಬನ್ನೇರುಘಟ್ಟಾ **ರೋಡ್ ಎಲೆಕ್ಟ್ರಾನಿಕ್ ಸಿಟಿ ಬ್ಯಾಕ್‌ಸೈಡ್** ಇರೋವಂಥ **ಸಾಫ್ಟ್‌ವೇರ್ ಕಂಪನೀಸ್** ಇಡೀ ಇಂಡಿಯಾದಲ್ಲೇ ಅಲ್ಲಾ ಏಷಿಯಾದಲ್ಲೇ ಇಲ್ಲಾ!

ಈ ಮೇಲಿನ ಉದಾಹರಣೆಗಳನ್ನು ನೋಡಿದಾಗ ಇಲ್ಲಿ ಅನೇಕ ಇಂಗ್ಲೀಶ್ ಪದಗಳು ಸಹಜವಾಗಿ ಬೆರಕೆಯಾಗಿಗುವುದನ್ನು ನಾವು ಕಾಣುತ್ತೇವೆ. ಇದನ್ನೇ ಭಾಷಾ ಮಿಶ್ರಣ ಅಥವಾ ನುಡಿಮಿಶ್ರಣ ಎಂದು ಕರೆಯುತ್ತಾರೆ.

"ನುಡಿಬೆರಕೆಯಲ್ಲಿ ನೀಡುವ ಮತ್ತು ಪಡೆಯುವ ಭಾಷೆಗಳು ಪರಸ್ಪರ ಅಂತರಾಟಕ್ಕೊಳಗಾಗುತ್ತವೆ. ನುಡಿಪಲ್ಲಟದಲ್ಲಾದರೋ ಈ ಭಾಷೆಗಳು ಒಂದರ ಪಕ್ಕದಲ್ಲೊಂದು ಕೆಲಸ ಮಾಡುತ್ತವೆ. ನುಡಿಬೆರಕೆ ಒಂದು ವಾಕ್ಯದೊಳಗೇ ನಡೆಯುತ್ತದೆ. ನುಡಿಪಲ್ಲಟ ವಾಕ್ಯ ವಾಕ್ಯಗಳ ನಡುವೆ ನಡೆಯುತ್ತದೆ. ನುಡಿಪಲ್ಲಟ ಸಾಮಾನ್ಯವಾಗಿ ಭಾಷಾ ಸಂದರ್ಭದಲ್ಲಿ ಉಂಟಾದ ಬದಲಾವಣೆಗೆ ಸಂವಾದಿಯಾಗಿ ನಡೆಯುತ್ತದೆ. ನುಡಿಬೆರಕೆಯಾದರೋ ಸಂದರ್ಭ ಬದಲಾಗದಿದ್ದರೂ ನಡೆಯುತ್ತವೆ"[1] ಎಂದು ಡಾ. ಎಸ್.ಎನ್. ಶ್ರೀಧರ್ ಅಭಿಪ್ರಾಯಪಟ್ಟಿದ್ದಾರೆ.

"ದ್ವಿಭಾಷಿಕ ಸನ್ನಿವೇಶಗಳಲ್ಲಿ ಭಾಷಿಕರ ವ್ಯವಹಾರದಲ್ಲಿ ಕಂಡು ಬರುವ ಮುಖ್ಯ ಭಾಷಿಕ ಪ್ರಕ್ರಿಯೆಗಳಾಗಿ ನುಡಿಬೆರಕೆ ಮತ್ತು ನುಡಿ ಜಿಗಿತಗಳನ್ನು ಗುರುತಿಸುತ್ತಾರೆ. ಒಂದು ಭಾಷೆಯ ವಾಕ್ಯವನ್ನು ಆಡುವಾಗ/ಬರೆಯುವಾಗ ಇನ್ನೊಂದು ಭಾಷೆಯ ಭಾಷಾಂಶಗಳನ್ನು ಬೆರೆಸುವುದು ನುಡಿಬೆರಕೆ. ಒಂದು ವಾಕ್ಯವನ್ನು ಒಂದು ಭಾಷೆಯ ನಿಯಮಾನುಸಾರ ರಚಿಸಿ, ಮುಗಿಸಿ ಅನಂತರ ಹೊಸ ವಾಕ್ಯವನ್ನು ಇಡಿಯಾಗಿ ಇನ್ನೊಂದು ಭಾಷೆಯಲ್ಲಿ ರಚಿಸಿ ಬಳಸಲಾಗುತ್ತದೆ. ವಾಕ್ಯದ ಆಚೆಗಿನ ಹಂತದಲ್ಲಿ ಈ ಬೆರಕೆ ನಡೆಯುತ್ತದೆ. ವಾಕ್ಯದ ರಚನೆಯಲ್ಲಿ ನಡೆಯುತ್ತದೆ. ಇದನ್ನೇ ನುಡಿ ಜಿಗಿತ"[2] ಎನ್ನುತ್ತಾರೆ ಡಾ. ಕೆ.ವಿ. ನಾರಾಯಣ.

· ನುಡಿಜಿಗಿತ ಅಥವಾ ನುಡಿಪಲ್ಲಟಕ್ಕೆ ಉದಾಹರಣೆಯನ್ನು ಈ ಕೆಳಗೆ ನೋಡಬಹುದು.

".....ರವಿಪೂಜಾರಿ ಹೇಳಿದ್ದು D. Groupನ ಜೊತೆ ಅವರು Shameel ಆಗಿದ್ದಾರೆ. ಅಂದರೆ **'D' Group ಕೆ ವಹಸೇ ವಹಲೋಗ್ ಕಾಮ್‌ಕರ್ ರಹೇ ಹೈ.** ಅದಕ್ಕಾಗಿ ನಾನು ಅವರನ್ನು ಉಳಿಸೋದಿಲ್ಲ. ಅವರನ್ನು ಬೆಂಬಲಿಸೋರ್‍ನ್ನು ನಾನು ಉಳಿಸೋದಿಲ್ಲ. ಅಂತಾ ರವಿಪೂಜಾರಿ ಹೇಳಿದ್ದಾರೆ".

"ರವಿಪೂಜಾರಿ ಅನ್ನೋ ವ್ಯಕ್ತಿ ಆ ಕಡೆಯಿಂದ ಮಾತಾಡಿದ್ರು. ಅದೂ ಅದಾಗಿದ್ದು ಹಾಗಲ್ಲ. ಅದು **ಇಂಟೆನ್‌ಷನಲ್** ಅಲ್ಲ. ನಮ್ಮ ಹುಡುಗ್ರನ್ನ ನಿಂದಿಸಿದ್ರು. ತೀರಾ ಕೋಪೋದ್ರಿಕ್ತರಾದ ನಮ್ಮ ಹುಡುಗ್ರು ಅವರಿಬ್ರುನ್ನ ಸುಟ್ಟು ಹಾಕಿದ್ರು. **"ಗೋಲಿಮಾರ್ ದೀಯಾ ಉನ್‌ಕೋ"** ಅಂತ ಹೇಳಿದ್ರು".

ಕ್ರೈಂನ್ಯೂಸ್‌ನಲ್ಲಿ ಸಾಕಷ್ಟು ಇಂಗ್ಲೀಶ್ ಪದಗಳು ನುಡಿಬೆರಕೆಯಾಗುತ್ತವೆ. ಹಾಗೆಯೇ ಹಿಂದಿ, ಉರ್ದು ಪದಗಳು ಬಳಕೆಯಾಗುತ್ತವೆ. ನುಡಿಬೆರಕೆಯ ಜೊತೆಗೆ ಕೆಲವೊಮ್ಮೆ ಕ್ರೈಂನ್ಯೂಸ್‌ನಲ್ಲಿ ನುಡಿಪಲ್ಲಟವೂ ಕಂಡು ಬರುತ್ತದೆ. ಈ ಕೆಳಗಿನ ಉದಾಹರಣೆಗಳ ಮುಖಾಂತರ ವಿವರಿಸಲಾಗಿದೆ.

ನುಡಿಮಿಶ್ರಿತ ಪದಗಳ ರಚನೆ

೧. ಫ್ಲಾಶ್ ಆಯ್ತು

ಈ ಪದವು ಇಂಗ್ಲೀಶ್‌ನ "ಫ್ಲಾಶ್" ಎಂಬ ಪದ ಮತ್ತು ಕನ್ನಡದ "ಆಯ್ತು" ಎಂಬ ಪದ ಸೇರಿ ಒಂದು ಪದವಾಗಿದೆ. ಇದು ಒಂದು ಪದವೂ ಹೌದು. ಹಾಗೇನೇ ಒಂದು ಚಿಕ್ಕ ವಾಕ್ಯವೂ ಹೌದು. 'ಫ್ಲಾಶ್ ಆಯ್ತು' ಅಂದರೆ ಥಟ್ಟನೆ ಹೊಳೆಯಿತು ಎಂಬ ಅರ್ಥವನ್ನು ನೀಡುತ್ತದೆ. ಇದು ಕ್ರೈಂ ನ್ಯೂಸ್‌ನಲ್ಲಿ ಬಳಕೆಯಾಗುತ್ತದೆ. ಈ ಪದ ಬಳಕೆಯ ವಾಕ್ಯ ಇಲ್ಲಿದೆ.

ಉದಾ : "ಆ ವ್ಯಕ್ತಿ ಹೇಳಿದ ನಾನು ಆಸ್ಟ್ರೇಲಿಯಾದಿಂದ ಮಾತಾಡ್ತಾ ಇದೀನಿ. ರವಿಪೂಜಾರಿ ಅಂತಾ, ಸಡನ್ನಾಗಿ ನನಗೆ **ಫ್ಲಾಶ್ ಆಯ್ತು**. ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದಿರುವಂಥ ಶಬ್‌ನಾಂ ಡೆವಲಪರ್ಸ್ ಸಮೀಯುಲ್ಲಾ ಅವರ **ಆಫೀಸ್**ನಲ್ಲಿ ನಡೆದಿರುವಂಥ ಒಂದು ಜೋಡಿ ಕೊಲೆ".

೨. ಫೈರ್ ಮಾಡಿ

ಈ ಪದವು ಇಂಗ್ಲೀಶ್‌ನ 'ಫೈರ್' ಎಂಬ ಪದ ಮತ್ತು ಕನ್ನಡದ 'ಮಾಡಿ' ಎಂಬ ಕ್ರಿಯಾಪದ ಸೇರಿ ಒಂದು ಪದರಚನೆಯಾಗಿದೆ. ಇಲ್ಲಿ Fire = ಸುಡು ಎಂಬರ್ಥ. 'ಗುಂಡು ಹಾರಿಸು' ಎನ್ನುವ ಅರ್ಥದಲ್ಲಿ ಬಳಸಲ್ಪಟ್ಟಿದೆ. ಅಂದರೆ 'ಫೈರ್‌ಮಾಡಿ' ಅಂದರೆ 'ಗುಂಡು ಹಾರಿಸಿ' ಎನ್ನುವ ಅರ್ಥವನ್ನು ನೀಡುತ್ತದೆ.

ಉದಾ : "…..**ಫೈರ್ ಮಾಡಿ** ಇಬ್ರುನಾ ಸಾಯಿಸಿರುವ ಪ್ರಕರಣಕ್ಕೆ ಸಂಬಂಧಿಸಿದ ಹಾಗೆ ಈ ವ್ಯಕ್ತಿ ಮಾತಾಡ್ತಾ ಇದ್ದಾರೆ. ಅಂತಾ ಗೊತ್ತಾಯ್ತು". ಈ ವಾಕ್ಯದಲ್ಲಿ 'ಫೈರ್ ಮಾಡಿ' ಎನ್ನುವ ಪದ, ಗುಂಡು ಹಾರಿಸಿ ಸಾಯಿಸಿದ್ದನ್ನು ಸೂಚಿಸುತ್ತದೆ. ಈ ವಲಯದಲ್ಲಿ ಇಂಥ ಪದಗಳು ಸಹಜವಾಗಿ ಬಳಕೆಗೊಂಡು ನುಡಿಬೆರಕೆಯಾಗುತ್ತದೆ.

೩. ಶ್ಯಾಮಿಲಾಗಿದ್ದಾರೆ

ಇಲ್ಲಿ 'ಶ್ಯಾಮಿಲ್' ಎಂಬ ಪದ ಹಿಂದಿಯಿಂದ ಬಂದದ್ದು. ಈ ಹಿಂದಿಯ ಪದ ಕನ್ನಡದ 'ಆಗಿದ್ದಾರೆ' ಎಂಬ ಪದವನ್ನು ಸೇರಿಕೊಂಡು. **'ಶ್ಯಾಮಿಲಾಗಿದ್ದಾರೆ'** ಎಂದು ರಚನೆಗೊಂಡಿದೆ. ಇದರರ್ಥ 'ಇತರರೂ ಇದರಲ್ಲಿ ಭಾಗಿಯಾಗಿದ್ದಾರೆ' ಎಂಬುದನ್ನು ಸೂಚಿಸುತ್ತದೆ. ಕ್ರೈಂನ್ಯೂಸ್‌ನ ಉದಾಹರಣೆ ನೋಡುವುದಾದರೆ ಈ ಕೆಳಗಿನ ವಾಕ್ಯ ಗಮನಿಸಬಹುದು.

"ಆಗ ರವಿಪೂಜಾರಿ ಹೇಳಿದ್ದು 'ಡಿ' ಗ್ರೂಪ್‌ನ ಜೊತೆ ಅವರು **ಶ್ಯಾಮಿಲಾಗಿದ್ದಾರೆ**". ಇಲ್ಲಿ ಶ್ಯಾಮಿಲ್ ಎಂಬ ಪದ ನುಡಿಬೆರಕೆಯಾಗಿದೆ.

೪. ಷೆಟ್ಲ್ ಆಗಿ > ಷೆಟ್ಲಾಗಿ

ಇಲ್ಲಿ 'ಷೆಟ್ಲ್' ಎಂಬುದು ಇಂಗ್ಲೀಶ್ ಪದ. ಇದಕ್ಕೆ ಕನ್ನಡದ 'ಆಗಿ' ಎಂಬ ಪ್ರತ್ಯಯ ಸೇರಿ 'ಷೆಟ್ಲಾಗಿ' ಎಂಬ ಪದ ರಚನೆಯಾಗಿದೆ. 'ಷೆಟ್ಲ್' ಎಂದರೆ 'ನೆಲೆಯೂರು' ಎಂಬರ್ಥ ಹೊಂದಿದೆ. **ನೆಲೆಸಿದ್ದು, ನೆಲಸಿ** ಎನ್ನುವ ಅರ್ಥವನ್ನು **'ಷೆಟ್ಲಾಗಿ'** ಎಂಬ ಪದವು ನೀಡುತ್ತದೆ. ಇಲ್ಲಿನ ಉದಾಹರಣೆಯಲ್ಲಿ ನುಡಿಬೆರಕೆಯಾಗಿದೆ.

ಉದಾ : "ದಾವೂದ್ ಇಬ್ರಾಹಿಂ ಪಾಕಿಸ್ತಾನದಲ್ಲಿ **'ಷೆಟ್ಲಾಗಿ'** ಮಿಯಾಂಡರ್ ಜೊತೆ ಸಂಬಂಧ ಬೆಳಸ್ಕೊಂಡು ಕ್ರಿಕೆಟ್ ಆಡ್ತಾ ಇದ್ದಾನೆ".

೫. ನೋಟೀಸ್ ಹಾಕಿಸಿ > ನೋಟೀಸ್ಹಾಕ್ಸಿ

ಇಲ್ಲಿ **ನೋಟೀಸ್** ಎನ್ನುವ ಪದ ಇಂಗ್ಲೀಶ್ ಪದವಾಗಿದೆ. ಇದು ಕನ್ನಡದ **'ಹಾಕಿಸಿ'** ಎಂಬ ಕ್ರಿಯಾಪದದೊಡನೆ ಸೇರಿ 'ನೋಟೀಸ್ಹಾಕ್ಸಿ' ಎಂಬ ಪದರಚನೆಗೊಂಡಿದೆ. ಇದನ್ನು ಸರ್ವೇಸಾಮಾನ್ಯರೂ ಬಳಸುತ್ತಾರೆ. ಅದೇ ಪದವು ಕ್ರೈಂನ್ಯೂಸ್‌ನಲ್ಲಿ ಬಳಕೆಯಾಗಿದೆ. ನೋಟೀಸ್ ಎಂದರೆ ಸೂಚನೆ ಎಂಬರ್ಥವಿದೆ. ಇದಕ್ಕೆ 'ಹಾಕಿಸಿ' ಎಂಬ ಕ್ರಿಯಾಪದ ಸೇರಿದಾಗ 'ಸೂಚನೆ ಹಾಕಿಸಿ' ಎಂಬರ್ಥವನ್ನು ನೀಡುತ್ತದೆ.

ಉದಾ : "ಪೇಪರ್‌ನಲ್ಲಿ ಒಂದು **ನೋಟೀಸ್ಹಾಕ್ಸಿ** ಮೂರನೇ ದಿನಾನೇ ಆರಾಧನಾ ಲೇಔಟ್‌ಗೆ ಗೂಂಡಾಗಳನ್ನು ಬಿಟ್ಟಿದ್ದಾನೆ". ಈ ವಾಕ್ಯದಲ್ಲಿ **ನೋಟೀಸ್** ಎಂಬ ಪದ ನುಡಿಬೆರಕೆಯಾಗಿದೆ.

೬. ಲೇಔಟ್‌ಮಾಡಿ > ಲೇಯೌಟ್ಮಾಡಿ

ಇಲ್ಲಿ 'ಲೇಔಟ್' ಎಂಬುದು ಇಂಗ್ಲೀಶ್‌ನಿಂದ ಬಂದ ಪದ. ಇದು ಕನ್ನಡದ 'ಮಾಡಿ' ಎಂಬ ಕ್ರಿಯಾಪದದೊಡನೆ ಸೇರಿ 'ಲೇಔಟ್‌ಮಾಡಿ' ಎಂಬ ಪದ ರಚನೆಗೊಂಡಿದೆ. ಇದು ಭೂಮಿ ವ್ಯವಹಾರಕ್ಕೆ ಸಂಬಂಧಿಸಿದ ಪದ. ಮಾರಾಟಕ್ಕಾಗಿ ತೆಗೆದ ಭೂಮಿಯನ್ನು ಲೇಔಟ್ ಎಂದು ಕರೆಯುತ್ತಾರೆ. ಭೂ ಮಾಫಿಯಾಕ್ಕೆ ಸಂಬಂಧಿಸಿದ ಕೇಸ್‌ಗಳಲ್ಲಿ ಕ್ರೈಂನ್ಯೂಸ್‌ಗಳಲ್ಲಿ ಈ ಪದ ಬಳಕೆಯಾಗಿದೆ.

ಉದಾ : "..... ಅದು ಅವರ ಪ್ರಕಾರ ಇದೆಲ್ಲಾ ಕೆಲವು ವ್ಯಕ್ತಿಗಳು ಇದನ್ನೆಲ್ಲಾ **'ಲೇಔಟ್ ಮಾಡಿ'** ಆ ಒಂದು ಬೇರೆ ಬೇರೆ ವ್ಯಕ್ತಿಗಳಿಗೆ ಮಾರಿದಾರೆ". ಈ ವಾಕ್ಯದಲ್ಲಿ ನುಡಿಬೆರಕೆಯಾಗಿದೆ.

೭. ಅರೆಸ್ಟ್ ಮಾಡಿ > ಅರೆಸ್ಟ್ ಮಾಡಿ

ಈ **'ಅರೆಸ್ಟ್'** ಎಂಬ ಪದ ಇಂಗ್ಲೀಶ್‌ನ ಪದ. ಇದರರ್ಥ **'ಬಂಧಿಸು'** ಎಂದು. ಇದು ಪೊಲೀಸ್ ವಲಯದಲ್ಲಿ ಬಳಸುವ ಪದ. ಪೊಲೀಸ್ ವಿಭಾಗದಲ್ಲಿ ಇದು ಬಳಕೆಯಾಗುತ್ತದೆ. ಈ **'ಅರೆಸ್ಟ್'** ಪದಕ್ಕೆ

ಕನ್ನಡದ 'ಮಾಡಿ' ಎಂಬ ಪದ ಸೇರಿ 'ಅರೆಸ್ಟ್ ಮಾಡಿ' ಎಂದು ಪದರಚನೆಯಾಗಿದೆ. ಇದನ್ನು ಕನ್ನಡ ವಾಕ್ಯದಲ್ಲಿ ಸಲೀಸಾಗಿ ಬಳಸಲಾಗುತ್ತದೆ. ಅದಕ್ಕೆ ಬೇರೆ ಪದವನ್ನು ಬಳಸಿದರೆ ಅಷ್ಟು ಸಮಂಜಸವಾಗುವುದಿಲ್ಲ ಎಂದು ಈ ರೀತಿಯ ಪದಗಳನ್ನು, ಬೇಗನೆ ಸಂವಹನಗೊಳ್ಳುವುದಕ್ಕಾಗಿ ಬಳಸುತ್ತಾರೆ. ಹಾಗಾಗಿ ನುಡಿಬೆರಕೆಯಾಗುತ್ತವೆ.

೮. ಶ್ಯಾಂಪಲ್ ಬಿಟ್ನೋಡಿ

ಇಲ್ಲಿ 'ಶ್ಯಾಂಪಲ್' ಎಂಬುದು ಇಂಗ್ಲೀಶ್ ಪದ. ಇದು ಇಲ್ಲಿನ ವಾಕ್ಯದಲ್ಲಿ ಬಳಕೆಗೊಂಡಿದೆ. 'ಬಿಟ್ನೋಡಿ' ಎಂಬ ಕ್ರಿಯಾಪದದೊಡನೆ ಸೇರಿದೆ. ಕ್ರೈಂಸ್ಟೋರಿ ಪ್ರಸಾರದಲ್ಲಿ ವಿಶೇಷ ಸಂಗತಿಯೊಂದರ ಸುದ್ದಿ ತೋರಿಸುವಾಗ 'ಶ್ಯಾಂಪಲ್ ಬಿಟ್ನೋಡಿ' ಎಂದು ನಿರೂಪಕರು ಬಳಸುತ್ತಾರೆ. ಸಹಜವಾಗಿ ಕನ್ನಡ ವಾಕ್ಯದಲ್ಲಿ ಇಂಗ್ಲೀಶ್ ಪದಗಳು ಬೆರಕೆಯಾಗುತ್ತವೆ. ಇದನ್ನೇ ನುಡಿಬೆರಕೆ ಎನ್ನುತ್ತಾರೆ ವಿದ್ವಾಂಸರು.

• ಕ್ರೈಂನ್ಯೂಸ್‌ನಲ್ಲಿ ನುಡಿಬೆರಕೆಯಾದ ಪದಗಳು

ಬರಹದ ರೂಪ		ಆಡುಮಾತಿನ ರೂಪ
ಫ್ಲ್ಯಾಶ್ ಆಯಿತು	>	ಫ್ಲ್ಯಾಶಾಯ್ತು
ಫೈರ್ ಮಾಡಿ	>	ಫೈರ್ಮಾಡಿ, ಫೈರ್ಮಾಡಿ
ಶ್ಯಾಮಿಲ್ ಆಗಿದ್ದಾರೆ	>	ಶ್ಯಾಮಿಲಾಗಿದ್ದಾರೆ
ಷೆಟ್ಲ್ ಆಗಿದ್ದಾರೆ	>	ಷೆಟ್ಲಾಗಿದ್ದಾರೆ
ನೋಟೀಸ್ ಹಾಕಿಸಿ	>	ನೋಟೀಸ್ಹಾಕ್ಸಿ
ಲೇಔಟ್ ಮಾಡಿ	>	ಲೇಯೌಟ್ಮಾಡಿ
ಅ್ಯರೆಸ್ಟ್ ಮಾಡಿ	>	ಅ್ಯರೆಸ್ಮಾಡಿ
ಶ್ಯಾಂಪಲ್ ನೋಡಿ	>	ಶ್ಯಾಂಪಲ್ನೋಡಿ
ರಿಮ್ಯಾಂಡ್ ಹೋಮ್‌ನಲ್ಲಿ	>	ರಿಮ್ಯಾಂಡ್ಹೋಮ್ನಲ್ಲಿ
ಡಿಸೈಡ್ ಮಾಡುತ್ತಾರೆ	>	ಡಿಸೈಡ್ ಮಾಡ್ತಾರೆ
ಲವ್ ಸ್ಟಾರ್ಟ್ ಆಗಿದೆ	>	ಲವ್ ಸ್ಟಾರ್ಟಾಗಿದೆ
ಲವ್ ಮಾಡಿ	>	ಲವ್ ಮಾಡಿ

ಕ್ಲೀನ್ ಆಗಿ	>	ಕ್ಲೀನಾಗಿ
ಡೌಟ್ ಬರುತ್ತಾ ಇಲ್ಲ	>	ಡೌಟ್ ಬರ್ತಾಯಿಲ್ಲ
ಮರ್ಡರ್ ಮಾಡಿ	>	ಮರ್ಡರ್ಮಾಡಿ
ಡೈಹೊಡೆದು	>	ಡೈಹೊಡ್ದು
ಡೌಟ್ ಬಂದು	>	ಡೌಟ್ಬಂದು
ಬೈಕ್ ತೆಗೆದುಕೊಂಡು	>	ಬೈಕ್ತಗೊಂಡು
ರೈಟ್‌ಸೈಡಿಗೆ ಬಿದ್ದಿತ್ತು	>	ರೈಟ್ಸೈಡಿಗ್ಬಿದ್ದಿತ್ತು
ಲೆಫ್ಟ್‌ಸೈಡಿಗಿ ಬಿದ್ದಿತ್ತು	>	ಲೆಫ್ಟ್‌ಸೈಡಿಗ್ಬಿದ್ದಿತ್ತು
ಆಫ್ ಮಾಡು	>	ಆಫ್ ಮಾಡು
ಆನ್ ಮಾಡು	>	ಆನ್ ಮಾಡು
ಸ್ಟಾರ್ಟ್ ಮಾಡು	>	ಸ್ಟಾರ್ಟ್ಮಾಡು
ಸ್ಕ್ರ್ಯಾಚ್ ಇಲ್ಲ	>	ಸ್ಕ್ರ್ಯಾಚಿಲ್ಲ
ಪೊಲೀಸ್‌ನವರು	>	ಪೊಲೀಸ್ನೋರು
ಗೂರ್ಖಾರೆಜಿಮೆಂಟ್‌ನಿಂದ	>	ಗೂರ್ಖಾರೆಜಿಮೆಂಟ್ನಿಂದ
ಪಬ್ಲಿಕ್ಕಿಗೆ	>	ಪಬ್ಲಿಕ್ಕಿಗೆ
ಪ್ಯಾಸೆಂಜರ್‌ಗೆ	>	ಪ್ಯಾಸೆಂಜರ್ಗೆ
ರೇಲ್ವೇ ನಿಲ್ದಾಣ	>	ರೇಲ್ವೇ ನಿಲ್ದಾಣ
ಪ್ಲ್ಯಾನ್ ಆಗಿತ್ತು	>	ಪ್ಲಾನಾಗಿತ್ತು
ಆ ಟೀಮಿನ	>	ಆಟೀಮಿನ
ಎನ್‌ಕ್ವಾಯರ್ ಮಾಡು	>	ಎನ್‌ಕ್ವಾಯರ್ಮಾಡು
ಪ್ರಿಂಟ್ ಮಾಡು	>	ಪ್ರಿಂಟ್ಮಾಡು
ಕ್ಲೀಯರ್ ಆಗಿ ಹೋಯಿತು	>	ಕ್ಲೀಯರ್ರಾಗಿ ಹೋಯ್ತು

ಹೀರೋಗಿರಿ	>	ಹೀರೋಗಿರಿ
ದಾದಾಗಿರಿ	>	ದಾದಾಗಿರಿ
ಗೂಂಡಾಗಿರಿ	>	ಗೊಂಡಾಗಿರಿ
ಪಬ್ಲಿಕ್ ಮಾಡಿಲ್ಲ	>	ಪಬ್ಲಿಕ್ ಮಾಡಿಲ್ಲ
ಸ್ಪೋಟ್ ಆದರೆ	>	ಸ್ಪೋಟಾದ್ರೆ
ಟೂಮಚ್ ಆಯಿತು	>	ಟೂಮಚ್ಚಾಯಿತು
ಮಿಲ್ಟ್ರಿಯವರೆಂದರೆ	>	ಮಿಲ್ಟ್ರಿಯವರೆಂದ್ರೆ
ಸ್ಪೆಷಲ್ ಆಗಿ	>	ಸ್ಪೆಷಲ್ಲಾಗಿ
ಐಡೆಂಟಿಟಿಯನ್ನು	>	ಐಡೆಂಟಿಟಿಯನ್ನು
ರೈಫಲ್‌ಗಳು	>	ರೈಫಲ್ಲುಗಳು
ಫೋನ್‌ಮಾಡಿ	>	ಫೋನ್‌ಮಾಡಿ
ಕ್ಲೂಕೊಡು	>	ಕ್ಲೂಕೊಡು
ಪೋಸ್ಟ್‌ಮಾಡು	>	ಪೋಸ್ಟ್‌ಮಾಡು
ರೋಡ್‌ನಲ್ಲಿ	>	ರೋಡ್‌ನಲ್ಲಿ
ಟೋಕನ್ ದಂಧೆ	>	ಟೋಕನ್‌ದಂಧೆ
ಷೂಟ್‌ಮಾಡು	>	ಷೂಟ್‌ಮಾಡು
ಷಾಕ್ ಆಯಿತು	>	ಷಾಕಾಯ್ತು
ಟೆಲಿಫೋನ್ ಕರೆ	>	ಟೆಲಿಫೋನ್ ಕರೆ
ಎಂಟರ್ ಮಾಡು	>	ಎಂಟ್ರಿಮಾಡು
ಸಸ್ಪೆಂಡ್‌ಮಾಡು	>	ಸಸ್ಪೆಂಡ್ಮಾಡು
ಫೈರ್ ಮಾಡು	>	ಫೈರ್‌ಮಾಡು
ಗಾಂಚಾಲಿ ಮಾಡು	>	ಗಾಂಚಾಲಿ ಮಾಡು

ಗೂರ್ಖಾಜನ	>	ಗೂರ್ಖಾಜನ
ಏಕ್‌ಧಮ್ಮಾಗಿ	>	ಏಕ್‌ಧಮ್ಮಾಗಿ
ಲುಕ್ಷಾನಾಯಿತು	>	ಲುಕ್ಷಾನಾಯ್ತು
ತಲಾಷ್ ಮಾಡು	>	ತಲಾಷ್‌ಮಾಡು
ಖತಂ ಮಾಡು	>	ಖತಂಮಾಡು

ಅಡಿಟಿಪ್ಪಣಿ

೧. ಡಾ. ಎಸ್.ಎನ್. ಶ್ರೀಧರ, ೧೯೯೫, ಇಂದಿನ ಕನ್ನಡ ರಚನೆ ಮತ್ತು ಬಳಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೨. ಡಾ. ಕೆ.ವಿ. ನಾರಾಯಣ, ೧೯೯೮, ದ್ವಿಭಾಷಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

□□

ಅಧ್ಯಾಯ ೬

ಸಮಾರೋಪ

ಅಧ್ಯಾಯ ೬

ಸಮಾರೋಪ

ಭಾಷಾ ಕ್ಷೇತ್ರದಲ್ಲಿ ಅಧ್ಯಯನಗಳು ಹಲವಾರು ರೀತಿಯಲ್ಲಿ ನಡೆದಿವೆ. ಅಂತಹ ಅಧ್ಯಯನಗಳಲ್ಲಿ ಮಾಧ್ಯಮಗಳ ಭಾಷೆಯ ಅಧ್ಯಯನವೂ ಒಂದು. ಪತ್ರಿಕಾ ಭಾಷೆ, ರೇಡಿಯೋ ಭಾಷೆ ಮತ್ತು ಟೆಲಿವಿಷನ್ ಭಾಷೆ ಕುರಿತಾಗಿ ಅಧ್ಯಯನ ಮಾಡುವುದು ಭಾಷಾಧ್ಯಯನಕಾರರ ಕರ್ತವ್ಯವಾಗಿದೆ. ಆ ನಿಟ್ಟಿನಲ್ಲಿ ಅನೇಕ ಅಧ್ಯಯನಗಳು ನಡೆದಿವೆ. ಕಾಲದಿಂದ ಕಾಲಕ್ಕೆ ಅಧ್ಯಯನಗಳು ನಡೆಯುತ್ತಲೇ ಇವೆ. ಆದರೂ ಭಾಷಾ ಕ್ಷೇತ್ರ ಚಲನಶೀಲವಾದುದರಿಂದ ಅಧ್ಯಯನ ನಡೆಯಲೇಬೇಕಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಮಾಧ್ಯಮಗಳಲ್ಲೊಂದಾದ ದೂರದರ್ಶನದಲ್ಲಿನ ಭಾಷೆಯ ಕುರಿತಾಗಿ ಅದರಲ್ಲೂ ವಿಶೇಷವಾಗಿ ಕ್ರೈಂ ನ್ಯೂಸ್‌ನ ಭಾಷೆ ಕುರಿತಾಗಿ ಚರ್ಚೆ ಮಾಡಲಾಗಿದೆ.

ದೂರದರ್ಶನದ ಕನ್ನಡ ವಾಹಿನಿಗಳಲ್ಲಿ ಪ್ರಸಾರವಾಗುವ ಕ್ರೈಂನ್ಯೂಸ್‌ಗಳನ್ನಷ್ಟೇ ಗಮನಿಸಲಾಗಿದೆ. ಭಾಷಾಧ್ಯಯನಕ್ಕೆ ಆಯ್ಕೆ ಮಾದರಿಯಲ್ಲಿ ಕೆಲವೊಂದು ಕ್ರೈಂನ್ಯೂಸ್‌ಗಳನ್ನು ಇಟ್ಟುಕೊಂಡು ವಿಶ್ಲೇಷಿಸಲಾಗಿದೆ. ಕನ್ನಡ-ಇಂಗ್ಲೀಶ್ ದ್ವಿಭಾಷಿಕ ಸಂದರ್ಭದಲ್ಲಿ ಮಾಧ್ಯಮದ ಭಾಷೆ, "ಭಾಷಾ ಮಿಶ್ರಣ"ವಾಗುವುದನ್ನು ನೋಡುತ್ತೇವೆ. ಅದರಲ್ಲೂ ಟಿ.ವಿ.ಯಲ್ಲಿ ನಿರೂಪಕರು ಮತ್ತು ಸುದ್ದಿ ವಾಚಕರು, ವರದಿಗಾರರು ಬಳಸುವ ಭಾಷೆ ವಿಶಿಷ್ಟವಾದುದು. ಸಮಾಜದ ಸಂವಹನಕ್ಕೋಸ್ಕರ ಹೊಸ ಬಗೆಯ ಭಾಷೆಯನ್ನು ಬಳಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವನ್ನು ಪ್ರಮುಖವಾಗಿ ಐದು ಅಧ್ಯಾಯಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಆರನೆಯದಾಗಿ ಸಮಾರೋಪ ಮಾಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ಲಕ್ಷಣವನ್ನು ವಿವರಿಸಲಾಗಿದೆ ಹಾಗೂ ಅಧ್ಯಯನಕ್ಕೆ ಬಳಸಿದ ವಿಧಾನವನ್ನು ಮತ್ತು ವ್ಯಾಪ್ತಿಯನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ (ಮಾಧ್ಯಮಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ವಿವರಿಸಲಾಗಿದೆ.) ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಮಾಧ್ಯಮಗಳ ಪರಿಚಯ ಮತ್ತು ಪ್ರಯೋಜನದ

P.T.O

ಕುರಿತು ಔಚಿತ್ಯವಾಗಿ ಇಲ್ಲಿ ಗಮನಹರಿಸಲಾಗಿದೆ. ಮಾಧ್ಯಮಗಳು ಮತ್ತು ಸಮಾಜದ ನಡುವಿನ ಸಂಬಂಧವನ್ನು ಹುಟ್ಟು ಮತ್ತು ಬೆಳವಣಿಗೆಯ ಚರ್ಚೆಯ ಮೂಲಕ ಕಂಡುಕೊಳ್ಳಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಸಮೂಹ ಮಾಧ್ಯಮಗಳ ಅಧ್ಯಯನ ಕನ್ನಡದಲ್ಲಿ ಆಗಿರುವ ಬಗ್ಗೆ ಸಮೀಕ್ಷೆ ಮಾಡಲಾಗಿದೆ. ಮಾಧ್ಯಮಗಳು ಕುರಿತು ಅನೇಕ ಜನ ವಿದ್ವಾಂಸರು ಹಲವು ಕೃತಿಗಳನ್ನು ರಚಿಸಿದ್ದಾರೆ. ಆ ಕೃತಿಗಳನ್ನು ಸಮೀಕ್ಷಿಸಿದ ಸಂಕ್ಷಿಪ್ತ ವಿವರವನ್ನು ನೀಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ದೂರದರ್ಶನದ ಕನ್ನಡ ವಾಹಿನಿಗಳಲ್ಲಿ ಪ್ರಸಾರವಾಗುವ ಕ್ರೈಂನ್ಯೂಸ್ ಭಾಷಾ ಬಳಕೆಯನ್ನು ಕುರಿತು ಚರ್ಚಿಸಲಾಗಿದೆ. ಧ್ವನಿರಚನೆ, ಪದರಚನೆ ಮತ್ತು ವಾಕ್ಯರಚನೆಯನ್ನು ಗಮನಿಸಲಾಗಿದೆ. ಭಾಷಾ ವೈಶಿಷ್ಟ್ಯವನ್ನು ಗುರುತಿಸಲಾಗಿದೆ. ಇಲ್ಲಿ ಕೇವಲ ಭಾಷೆ ಅಷ್ಟೇ ಅಲ್ಲದೆ ಶೈಲಿಯ ಸ್ವರೂಪ, ವಾಚನ ವಿಧಾನ ಗಮನಾರ್ಹವಾಗಿದೆ. ರಚನೆ ಮತ್ತು ಬಳಕೆಯ ದೃಷ್ಟಿಯಿಂದ ವಿಶಿಷ್ಟವಾಗಿದೆ. ಅದರಿಂದಲೇ ಕ್ರೈಂ ನ್ಯೂಸ್ ಭಾಷೆ ವೀಕ್ಷಕನಿಗೆ ಸಂವಹನಗೊಳ್ಳುವಲ್ಲಿ ಯಶಸ್ವಿಯಾಗಿ ಅಧ್ಯಯನದಲ್ಲಿ ಕಂಡುಬರುತ್ತದೆ ಎನ್ನುವುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಭಾಷಾ ಮಿಶ್ರಣದಿಂದ ಮಾಧ್ಯಮಗಳ ಭಾಷೆ ನುಡಿಬೆರಕೆ ಮತ್ತು ನುಡಿ ಪಲ್ಲಟ ಕ್ರಿಯೆಗಳಿಗೆ ಒಳಗಾಗಿರುವುದನ್ನು ಇಲ್ಲಿ ಗುರುತಿಸಲಾಗಿದೆ. ಕೆಲವು ವಾಕ್ಯಗಳನ್ನಿಟ್ಟುಕೊಂಡು ಕ್ರೈಂ ನ್ಯೂಸ್‌ನ ಭಾಗಗಳನ್ನು ಇಟ್ಟುಕೊಂಡು ಚರ್ಚಿಸಲಾಗಿದೆ. ದೃಷ್ಟಾಂತಕ್ಕೆ ಕ್ರೈಂನ್ಯೂಸ್ ಮಾದರಿಯನ್ನು ಉದಾಹರಿಸಲಾಗಿದೆ. ನುಡಿಬೆರಕೆಯಾದ ಪದಗಳನ್ನು ಮತ್ತು ನುಡಿ ಪಲ್ಲಟವಾದ ವಾಕ್ಯಗಳನ್ನು ನೀಡಲಾಗಿದೆ.

ಒಟ್ಟಿನಲ್ಲಿ ಕ್ರೈಂನ್ಯೂಸ್ ಭಾಷೆ ಟಿ.ವಿ. ಮಾಧ್ಯಮದಲ್ಲಿ ವಿಶಿಷ್ಟವಾಗಿದೆ. ಇದಕ್ಕೆ ಕಾರಣಗಳು ಹಲವು. ಅಲ್ಲಿ ವಿಶಿಷ್ಟವಾದ ಧ್ವನಿಗಳು ರಚನೆಯಾಗುತ್ತವೆ. ಆ ಧ್ವನಿಗಳು ಕೇಳುಗರನ್ನು ಆಕರ್ಷಿಸಲು ಕಾರಣವಾಗಿವೆ ಹಾಗೂ ಅನ್ಯಭಾಷಾ ಪದಗಳು ಮತ್ತು ವಾಕ್ಯಗಳು ಬೆರಕೆಯಾಗುವುದರಿಂದ ಭಾಷೆ ವಿಭಿನ್ನವಾಗಿ ವಿಶಿಷ್ಟವಾಗಿ ಬಳಕೆಯಾಗುತ್ತದೆ. ಅದು ಸಂವಹನಗೊಳಿಸುವಲ್ಲಿ ಪ್ರೇರಕವಾಗಿದೆ. ಧ್ವನಿ ನಿಯಮ, ಪದ ರಚನಾ ನಿಯಮ ಹಾಗೂ ವಾಕ್ಯ ರಚನಾ ನಿಯಮ ಹೊಸ ಬಗೆಯಾಗಿ ಕಂಡು ಬರುತ್ತದೆ. ಈ ಅಂಶಗಳೇ ಭಾಷೆಯ ಬದಲಾವಣೆಯನ್ನು ಸೂಚಿಸುತ್ತವೆ. ಇದು ಭಾಷಾ ಬೆಳವಣಿಗೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಟಿ.ವಿ.ಯಲ್ಲಿ ಪ್ರಸಾರವಾಗುವ ಕ್ರೈಂನ್ಯೂಸ್‌ನ ಭಾಷೆ ಒಂದು ಪ್ರಭೇದವಾಗಿದೆ ಎಂಬುದು ಪ್ರಸ್ತುತ ಅಧ್ಯಯನದ ಮೂಲಕ ತಿಳಿಯುತ್ತದೆ.

ಈ ಅಧ್ಯಯನದಿಂದ ಕಂಡು ಬಂದಂಥ ಪ್ರಮುಖ ಅಂಶವೇನೆಂದರೆ ಇಲ್ಲಿ ಭಾಷಾ ರಚನೆ, ಭಾಷಾ ಬಳಕೆ ವಿಶಿಷ್ಟವಾಗಿದ್ದು, ಇಡೀ ಕ್ರೈಂನ್ಯೂಸ್ ಭಾಷಾ ಸ್ವರೂಪ ಹಲವಾರು ಅಂಶಗಳನ್ನು ಒಳಗೊಂಡಿದೆ. ಆ ಅಂಶಗಳನ್ನು ಉದಾಹರಣೆ ಸಹಿತ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಕ್ರೈಂನ್ಯೂಸ್ ವಾಚಕರು ಓದುವ

ರೀತಿ ಅವರ ಭಾಷೆ, ದೃಶ್ಯ ಮತ್ತು ಶ್ರವ್ಯ ಇವೆಲ್ಲವೂ ಸಂವಹನಕ್ಕೆ ಪರಿಣಾಮ ಬೀರಿವೆ. ಪದರಚನೆ, ಪದಬಳಕೆ ಮತ್ತು ವಾಕ್ಯರಚನೆ ಮುಂತಾದ ಪ್ರಮುಖ ಅಂಶಗಳಿಂದ ಈ ಕಾರ್ಯಕ್ರಮ ದೂರದರ್ಶನದಲ್ಲಿ ಯಶಸ್ವಿಯಾಗಿ ಮೂಡಿ ಬರುವುದಕ್ಕೆ ಕಾರಣವಾಗಿದೆ. ಮುಖ್ಯವಾಗಿ ಪ್ರೇಕ್ಷಕನನ್ನು ಇಲ್ಲಿ ಕುತೂಹಲ ಗೊಳಿಸುವುದು ಭಾಷೆ. ಅಂತೆಯೇ ಘಟನೆಗಳೂ ಸಹ ಕೌತುಕ ಮೂಡಿಸುತ್ತವೆ. ಒಟ್ಟಾರೆ ಕ್ರೈಂ ಜಗತ್ತಿನದೇ ಒಂದು ರೀತಿ ಭಾಷೆ ಮತ್ತು ಪರಿಭಾಷೆ ಇರುವುದು ಕಂಡು ಬರುತ್ತದೆ. ಸಮಾಜದಲ್ಲಿ ಹಲವಾರು ವಲಯಗಳಿರುವಂತೆ ಕ್ರೈಂ ಲೋಕವೂ ತನ್ನ ವಲಯವನ್ನು ಗುರುತಿಸಿಕೊಂಡಿದೆ. ಭಾಷಾ ಪ್ರಭೇದವೊಂದನ್ನು ಸೃಷ್ಟಿಸಿಕೊಡಿದೆ. ಉತ್ತಮ ಸಮಾಜಕ್ಕಾಗಿ ಸಮಾಜ ಸುಧಾರಣೆಗಾಗಿ ಮಾಧ್ಯಮಗಳು ಮತ್ತು ಸರ್ಕಾರ ಶ್ರಮಿಸಿ ಕ್ರೈಂ ಲೋಕದ ಹತೋಟಿ ಮಾಡುವುದು ಅಗತ್ಯವಾಗಿದೆ. ಅಂತೆಯೇ ಪ್ರತಿಯೊಬ್ಬ ಪ್ರಜೆಯೂ ಪ್ರಜ್ಞಾವಂತಿಕೆಯನ್ನು ಕಾಯ್ದುಕೊಳ್ಳಬೇಕಾಗಿದೆ.

ಅನುಬಂಧ ಭಾಗದಲ್ಲಿ ಕ್ರೈಂನ್ಯೂಸ್‌ನಲ್ಲಿ ಬಳಕೆಯಾದ ಇಂಗ್ಲೀಶ್ ಪದಗಳು ಮತ್ತು ಕನ್ನಡ ಪದಗಳ ಪರಿಭಾಷೆಗಳನ್ನು ಅಕಾರಾದಿಯಾಗಿ ಇಲ್ಲಿ ದಾಖಲಿಸಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಕ್ರೈಂನ್ಯೂಸ್‌ನಲ್ಲಿ ಬಳಕೆಯಾದ ಪದಗಳಿಗೆ ನಿಘಂಟಿನ ಅರ್ಥವನ್ನು ನೀಡದೆ ಸಾಂದರ್ಭಿಕ ಅರ್ಥವನ್ನು ನೀಡಲಾಗಿದೆ. ಇದರಿಂದ ಒಂದು ನಿರ್ದಿಷ್ಟ ವಲಯದ ಪದಗಳು ಮತ್ತೊಂದು ವಲಯದಲ್ಲಿ ಬಳಕೆಯನ್ನು ಗುರುತಿಸಬಹುದಾಗಿದೆ. ಅಧ್ಯಯನಕ್ಕೆ ಪೂರಕವಾಗುವಂತೆ ಕ್ರೈಂಸ್ಟೋರಿ, ಕ್ರೈಂಡೈರಿ ಮತ್ತು ವಾರೆಂಟ್‌ಗಳಲ್ಲಿ ಬಳಕೆಯಾಗಿರುವ ಭಾಷೆ ಬರಹದ ಕನ್ನಡಕ್ಕಿಂತ ಹೇಗೆ ಭಿನ್ನವೆಂಬುದನ್ನು ತಿಳಿಯಲು ಮಾದರಿಗಳನ್ನು ದಾಖಲಿಸಲಾಗಿದೆ. ಇದರಿಂದ ಕನ್ನಡದಲ್ಲಿ ಕ್ರೈಂ ಭಾಷೆ ಒಂದು ಪ್ರತ್ಯೇಕವಾದ ಪ್ರಭೇದ ಎಂಬುದಕ್ಕೆ ನಿದರ್ಶನವಾಗಿದೆ.

ಅನುಬಂಧಗಳು

೧. ಇಂಗ್ಲೀಶ್ ಪದಗಳು

೨. ಕ್ರೈಂನ್ಯೂಸ್ ಪದಕೋಶ

೩. ಕ್ರೈಂಸ್ಟೋರಿ ಮಾದರಿಗಳು

೪. ಗ್ರಂಥಋಣ

ಅನುಬಂಧ-೧

ಇಂಗ್ಲೀಶ್ ಪದಗಳು

೧. ಅರೆಸ್ಟ್ (ಕ್ರಿ) (ಇಂ)	-	ಬಂಧಿಸು
೨. ಅರೆಸ್ಟ್‌ವಾರೆಂಟ್ (ನಾ) (ಇಂ)	-	ಬಂಧನ ಪತ್ರ
೩. ಆ್ಯಕ್ಟ (ನಾ) (ಇಂ)	-	ಕಾಯಿದೆ, ಕಾನೂನು
೪. ಆ್ಯಕ್ಸಿಡೆಂಟ್ (ನಾ) (ಇಂ)	-	ಅಪಘಾತ, ದುರ್ಘಟನೆ
೫. ಎನ್‌ಕೌಂಟರ್ (ನಾ) (ಇಂ)	-	ಕಂಡಲ್ಲಿ ಗುಂಡಿನ ದಾಳಿ ಎಸಗುವುದು
೬. ಎಸ್ಕೇಪ್ (ನಾ) (ಇಂ)	-	ಪರಾರಿಯಾಗು
೭. ಎಸ್ಟೇಟ್ (ನಾ) (ಇಂ)	-	ಸೀಮಿತ ಪ್ರದೇಶ, ವಲಯ
೮. ಎಸ್ಟೇಟ್ ದಂಧೆ (ನಾ)	-	ಸೀಮಿತ ಪ್ರದೇಶದ ವ್ಯವಹಾರ
೯. ಓನ್ ಬಿಜಿನೆಸ್ (ನಾ) (ಇಂ)	-	ಸ್ವಂತ ವ್ಯವಹಾರ
೧೦. ಓಪನ್ ಸೆಕ್ಸ್ (ನಾ) (ಇಂ)	-	ನಗ್ನವಾದ ಲೈಂಗಿಕತೆ
೧೧. ಓವರ್ ಆ್ಯಕ್ಟಿಂಗ್ (ನಾ) (ಇಂ)	-	ಅತಿಯಾದ ನಟನೆ
೧೨. ಓವರ್ ಟೇಕ್ (ನಾ) (ಇಂ)	-	ಅಕ್ರಮವಾಗಿ ಮುಂದೆ ಸಾಗುವುದು.
೧೩. ಔಟ್ ಡೋರ್ (ನಾ) (ಇಂ)	-	ಹೊರಗಡೆಯಲ್ಲಿ
೧೪. ಔಟ್ ಗೋಯಿಂಗ್ (ನಾ) (ಇಂ)	-	ಹೊರಗಡೆ ಹೋಗುವಂಥದ್ದು.
೧೫. ಕಾಮಿಕ್ಸ್ (ನಾ) (ಇಂ)	-	ಲೈಂಗಿಕಾಂಶಗಳು
೧೬. ಕಿಲ್ಲರ್ (ನಾ) (ಇಂ)	-	ಕೊಲೆಗಡುಕ
೧೭. ಕಿಲ್ಲಿಂಗ್ (ನಾ) (ಇಂ)	-	ಕೊಲ್ಲುವುದು

೧೮. ಕ್ರಿಮಿನಲ್ (ನಾ) (ಇಂ)	-	ಅಪರಾಧಿ
೧೯. ಕೇಸ್ (ನಾ) (ಇಂ)	-	ಪ್ರಕರಣ
೨೦. ಕ್ರೈಮ್ (ನಾ) (ಇಂ)	-	ಅಪರಾಧ
೨೧. ಕ್ರೈಮ್ ನ್ಯೂಸ್ (ನಾ) (ಇಂ)	-	ಅಪರಾಧ ಸುದ್ದಿ
೨೨. ಕೋರ್ಟ್ (ನಾ) (ಇಂ)	-	ನ್ಯಾಯಾಲಯ, ನ್ಯಾಯಸ್ಥಾನ
೨೩. ಗನ್ (ನಾ) (ಇಂ)	-	ಬಂದೂಕು
೨೪. ಗನ್ ಮ್ಯಾನ್ (ನಾ) (ಇಂ)	-	ಬಂದೂಕು ಧರಿಸಿದವ, ಬಂದೂಕುಧಾರಿ
೨೫. ಗನ್ ಶ್ಯಾಟ್ (ನಾ) (ಇಂ)	-	ಬಂದೂಕಿನಿಂದ ಹೊಡೆದದ್ದು
೨೬. ಗ್ಯಾಂಗ್ (ನಾ) (ಇಂ)	-	ಗುಂಪು
೨೭. ಗ್ಯಾಂಗ್‌ವಾರ್ (ನಾ) (ಇಂ)	-	ಗುಂಪು ಕದನ
೨೮. ಛಾಲೆಂಜ್ (ನಾ) (ಇಂ)	-	ಹಠ, ಪಣ ತೊಡುವುದು
೨೯. ಡ್ರಗ್ (ನಾ) (ಇಂ)	-	ಮಾದಕ ವಸ್ತು
೩೦. ಡರ್ಟಿಫೆಲೊ (ನಾ) (ಇಂ)	-	ಒರಟು ಮನುಷ್ಯ, ಹೊಲಸು ಸ್ವಭಾವದವ
೩೧. ಡೀಲ್ (ನಾ) (ಇಂ)	-	ವ್ಯವಹಾರ
೩೨. ಡೀಲಿಂಗ್ (ನಾ) (ಇಂ)	-	ವ್ಯವಹಾರ ಮಾಡುವುದು.
೩೩. ಡೈರಿ (ನಾ) (ಇಂ)	-	ದಿನಚರಿ
೩೪. ಡೈಲಿ (ನಾ) (ಇಂ)	-	ದಿನಾಲು
೩೫. ನಕ್ಸಲ್, ನಕ್ಸಲೆಟ್ (ನಾ) (ಇಂ)	-	ಉಗ್ರಗಾಮಿ
೩೬. ನೆಟ್‌ವರ್ಕ್ (ನಾ) (ಇಂ)	-	ಸಂಪರ್ಕ ಜಾಲ
೩೭. ಪಬ್ (ನಾ) (ಇಂ)	-	ಬಾರ್ ಮತ್ತು ರೆಸ್ಟೋರೆಂಟ್, ಡಾಬಾಗಳು, ವೇಶ್ಯೆಯರ ಸಪ್ಲೈ ಇರುವ ಸ್ಥಳ.
೩೮. ಪಾಲಿಟಿಕ್ಸ್ (ನಾ) (ಇಂ)	-	ರಾಜಕಾರಣ, ರಾಜಕೀಯ
೩೯. ಪಿಂಪು (ನಾ) (ಇಂ)	-	ತಲೆಹಿಡುಕ, ವೇಶ್ಯವಾಟಿಕೆಯ ಮಧ್ಯವರ್ತಿ
೪೦. ಪೊಲೀಸ್ ಸ್ಟೋರಿ (ನಾ) (ಇಂ)	-	ಅಪರಾಧದ ಸುದ್ದಿಯನ್ನೊಳಗೊಂಡ ಕಥೆಗಳು

೪೧. ಪೋಸ್ಟ್ ಮಾರ್ಟಂ (ನಾ) (ಇಂ) - ಮರಣೋತ್ತರ ಪರೀಕ್ಷೆ

೪೨. ಫಿಗರ್ (ನಾ) (ಇಂ) - ಚಿತ್ರ, ಚಿತ್ರದ ಗೊಂಬೆಯಂತ ಹುಡುಗಿ, ಚೆಂದಾದ ಬೆಡಗಿ

೪೩. ಫಿನಿಷ್ (ನಾ) (ಇಂ) - ಮುಗಿಸು, ಮುಕ್ತಾಯ

೪೪. ಫಿಟ್ಟಿಂಗ್ (ನಾ) (ಇಂ) - ಪರಸ್ಪರ ಜಗಳ ಹಚ್ಚುವುದು

೪೫. ಫೈರ್ (ನಾ) (ಇಂ) - ಸುಡುವುದು, ಗುಂಡು ಹಾರಿಸುವುದು

೪೬. ಫೋಟೋಕಾಮಿಕ್ಸ್ (ನಾ) (ಇಂ) - ನಗ್ನ ಛಾಯಚಿತ್ರಗಳು

೪೭. ಬಾಂಬ್ (ನಾ) (ಇಂ) - ಸ್ಫೋಟಿಸುವ ವಸ್ತು, ಸ್ಫೋಟವಾಗುವ ಸಾಧನ

೪೮. ಬಾರ್ ಅಂಡ್ ಬಿಯರ್ - ಮದ್ಯಪಾನ ಮಾಡುವ ಸ್ಥಳ

೪೯. ಬೇಜಾನ್ (ನಾ) - ಸಾಕಷ್ಟು, ಬಹಳವಾದ

೫೦. ಬ್ರೋಕರ್ (ನಾ) - ದಲ್ಲಾಳಿ

೫೧. ಮಟ್ಯಾಷ್ (ಕ್ರಿ) - ಸಮಾಪ್ತಿ ಮಾಡು, ಮುಗಿಸು ಹಾಕು

೫೨. ಮರ್ಡರ್ (ನಾ) - ಕೊಲೆ, ಕೊಚ್ಚಿ ಹಾಕುವುದು, ಕೊಂದು ಬಿಡುವುದು

೫೩. ಮಾರ್ಕೆಟ್ - ಸಂತೆ

೫೪. ಮಾರ್ಕೆಟ್ ರೌಡಿ (ನಾ) - ಸಂತೆ ವ್ಯವಹಾರ ಮಾಡುವವರು

೫೫. ಮಾರ್ಕೆಟ್ ಮಾಫಿಯ (ನಾ) - ಸಂತೆ ವ್ಯಾಪಾರ

೫೬. ರಾಬರ್ (ನಾ) (ಇಂ) - ದರೋಡೆಕೋರ

೫೭. ರಾಬರಿಂಗ್ (ನಾ) (ಇಂ) - ದರೋಡೆ, ಲೂಟಿ

೫೮. ರಿಮ್ಯಾಂಡ್ ಹೋಮ್ (ನಾ) (ಇಂ) - ಸೆರೆಮನೆ

೫೯. ರಿವೇಂಜ್, ರಿವಾಲ್ವಾರ್ (ನಾ) - ಗುಂಡು ಹಾರಿಸುವ ಸಾಧನ

೬೦. ರೈಡ್ (ನಾ) - ದಾಳಿ

೬೧. ರೇಪ್ (ನಾ) - ಬಲವಂತವಾದ ಲೈಂಗಿಕ ಕ್ರಿಯೆ

೬೨. ರೇಪ್‌ಕೇಸ್ (ನಾ) - ಬಲವಂತವಾದ ಲೈಂಗಿಕ ಕ್ರಿಯೆಗೆ ಸಂಬಂಧಿಸಿದ ಪ್ರಕರಣ

೬೩. ರೋಲ್‌ಕಾಲ್ (ನಾ) (ಇಂ) - ಹಣ ವಸೂಲಿ ಮಾಡುವುದು

೬೪. ರೌಡಿ (ನಾ) (ಇಂ) - ದರ್ಪ, ದೌರ್ಜನ್ಯದಿಂದ ಮೆರೆಯುವವರು.

೬೫. ರೌಡಿಸಂ (ನಾ) (ಇಂ) - ದರ್ಪ, ದೌರ್ಜನ್ಯದ ವೃತ್ತಿ

೬೬. ರೈಫಲ್ (ನಾ) (ಇಂ) - ಬಂದೂಕಿನಂಥ ಸಾಧನ

೬೭. ರೈಫಲ್‌ವಾರ್ (ನಾ) (ಇಂ) - ಪಿಸ್ತೂಲು ಮತ್ತು ಬಂದೂಕುಗಳಿಂದ ಹೊಡೆದಾಡುವುದು ಗುಂಡಿನ ಕಾಳಗ

೬೮. ಲಫಂಗ (ನಾ) - ದುಷ್ಟ, ಚಾಳಿಯವ, ಅಸಭ್ಯ ಮನುಷ್ಯ

೬೯. ಲವ್‌ಕೇಸ್ (ನಾ) (ಇಂ) - ಪ್ರೇಮ ಪ್ರಕರಣ

೭೦. ಲೈವ್‌ಬ್ಯಾಂಡ್ (ನಾ) (ಇಂ) - ನೃತ್ಯಕೂಟಗಳು

೭೧. ಲಾಯರ್ (ನಾ) (ಇಂ) - ವಕೀಲ, ನ್ಯಾಯವಾದಿ

೭೨. ಲಾಂಗ್ (ನಾ) - ಕಡಿದು ಹಾಕುವ, ಕೊಚ್ಚಿ ಹಾಕುವ ಸಾಧನ

೭೩. ಲೋಡ್ - ತುಂಬು, ಭರ್ತಿ ಮಾಡು

೭೪. ವಾರೆಂಟ್ (ನಾ) - ಬಂಧನ ಪತ್ರ

೭೫. ಶೂಟ್ (ಕ್ರಿ) - ಹಾರಿಸು, ಗುಂಡು ಹಾರಿಸು

೭೬. ಶೂಟಿಂಗ್ (ನಾ) - ಚಿತ್ರೀಕರಣ

೭೭. ಸರೆಂಡರ್ (ನಾ) - ಶರಣಾಗುವುದು

೭೮. ಸೆಕ್ಸ್ ಮಾರ್ಕೆಟ್ (ನಾ) - ವ್ಯಭಿಚಾರದ ವ್ಯಾಪಾರ, ಹುಡುಗಿಯರ ಮಾರಾಟದ ಸಂತೆ

೭೯. ಸೆಕ್ಸ್ ಗರ್ಲ್ (ನಾ) - ವ್ಯಭಿಚಾರ ಮಾಡುವ ಹುಡುಗಿ

೮೦. ಸೆಕ್ಸಿ (ನಾ) - ಕಾಮುಕಿ

೮೧. ಸ್ಟೆಪ್ನಿ (ನಾ) - ಉಪಪತ್ನಿ-ಸೂಳೆ

೮೨. ಸಿಂಗಲ್ ಸ್ಟೋರಿ (ನಾ) - ಒಂದೇ ಒಂದು ಕಥೆ

೮೩. ಹೈಟೆಕ್ (ನಾ) - ಹೆಚ್ಚಿನ ತಂತ್ರಜ್ಞಾನ, ನವೀನ ತಂತ್ರಜ್ಞಾನ

೮೪. ಹೈಟೆಕ್ ಮಾಡೆಲ್ (ನಾ) - ನವೀನ ತಂತ್ರಜ್ಞಾನದ ಮಾದರಿ

ಅನುಬಂಧ-೨

ಕ್ರೈಂನ್ಯೂಸ್ ಪದಕೋಶ

ಕ್ರೈಂನ್ಯೂಸ್‌ನಲ್ಲಿ ಬಳಕೆಯಾದ ಪದಗಳು		ಅರ್ಥ
ಅಕ್ರಮ = (ವಿ) (ಸಂ)	-	ಕ್ರಮವಲ್ಲದ, ಕ್ರಮರಹಿತ, ತಪ್ಪುದಾರಿ
ಅಖಾಡ = (ನಾ) (ಹಿಂ)	-	ಕುಸ್ತಿಕಣ, ವ್ಯಾಯಾಮಶಾಲೆ, ಗರಡಿಮನೆ
ಅಗ್ನಿಕುಂಡ = (ನಾ) (ಸಂ)	-	ಯಜ್ಞ ಮಾಡುವ ಸ್ಥಳದಲ್ಲಿ ತೋಡಿದ ಗುಂಡಿ, ತಗ್ಗು
ಅಟ್ಟಹಾಸ = (ನಾ) (ಸಂ)	-	ಜಂಭ, ದೊಡ್ಡ ನಗು, ಬಡಿವಾರದ ನಗು
ಅಡ್ಡ ಕಸುಬಿ = (ನಾ)	-	ನಡವಳಿಕೆ ತಪ್ಪಿ ಮಾಡುವ ಉದ್ಯೋಗಿ
ಅಡ್ಡಕಸುಬು = (ನಾ)	-	ನಡವಳಿಕೆ ತಪ್ಪಿ ಮಾಡುವ ಉದ್ಯೋಗ
ಅಡ್ಡೆ = (ನಾ)	-	ಅಡ್ಡೆ ಹಾಕುವುದು, ವ್ಯಭಿಚಾರಿಣಿಯರ ಸ್ಥಳ
ಅತ್ಯಾಚಾರ = (ನಾ) (ಸಂ)	-	ಹಿಂಸೆ, ಅನೀತಿ, ದುರಾಚಾರ
ಅನಾಚಾರ = (ವಿ) (ಸಂ)	-	ಕೆಟ್ಟ, ನಡತೆ, ದುರಾಚಾರ
ಅನಾಮಿಕ = (ನಾ) (ಸಂ)	-	ಅಪ್ರಸಿದ್ಧ, ಪಾಪಿಷ್ಟ, ಹೆಸರಿಲ್ಲದ ಚಂಡಾಲ
ಅನ್ಯಾಯ = (ನಾ) (ಸಂ)	-	ನ್ಯಾಯರಹಿತವಾದುದು, ನೀತಿಯಲ್ಲದುದು
ಅನೈತಿಕ = (ವಿ) (ಸಂ)	-	ನೀತಿಯಿಲ್ಲದ, ಸರಿಯಲ್ಲದುದು
ಅನೈತಿಕತೆ = (ವಿ)	-	ನೀತಿಯಿಲ್ಲದ್ದು
ಅಪರಾಧ = (ನಾ) (ಸಂ)	-	ತಪ್ಪು, ದೋಷ
ಅಪಘಾತ = (ವಿ) (ಸಂ)	-	ಹಿಂಸೆ, ದುರ್ಘಟನೆ

ಅಪರಾಧಿ = (ನಾ)	-	ತಪ್ಪು ಮಾಡಿದವ
ಅಪಹರಣ = (ನಾ) (ಸಂ)	-	ಕಸಿದುಕೊಳ್ಳುವಿಕೆ, ಅಪಹರಿಸುವುದು.
ಅಪಾಯ = (ನಾ) (ಸಂ)	-	ಹಾನಿ, ಕೇಡು, ತೊಂದರೆ
ಅಬ್ಬೆಪಾರಿ = (ನಾ)	-	ವೃಥಾ ತಿರುಗಾಡುವವ
ಅಮಲು = (ನಾ) (ಹಿಂ)	-	ಮದ, ನಿಶೆ, ನಿಶಾ, ಮಬ್ಬು, ಮದ್ಯ
ಅಮಲುದಾರ = (ನಾ) (ಹಿಂ)	-	ಮದ್ಯಪಾನವನ್ನು ಮಾಡಿದವ
ಅರೆಸ್ಟ್ = (ಕ್ರಿ) (ಇಂ)	-	ಬಂಧಿಸುವುದು, ಬಂಧನ
ಅರೆಸ್ಟ್ ವಾರೆಂಟ್ = (ನಾ) (ಇಂ)	-	ಬಂಧನದ ಪತ್ರ
ಅಲಿಯಾಸ್ = (ವಿ)	-	ಪರ್ಯಾಯ ಹೆಸರು ಸೂಚಿಸುವ ಸಂಬಂಧವಾಚಿ
ಅವ್ಯವಹಾರ = (ವಿ)	-	ಶ್ರಮವಲ್ಲದ ವ್ಯಾಪಾರ, ಸರಿಯಲ್ಲದ ರೀತಿಯ ವ್ಯವಹಾರ
ಅಸಲಿ = (ನಾ)	-	ನಕಲಿಯಲ್ಲದ, ನಿಜವಾದದ್ದು, ಸಿದ್ಧಮೂಲ
ಅಸಲು = (ನಾ) (ಹಿಂ)	-	ವಾಸ್ತವದ, ನಿಜವಾದ
ಅಸಲು ವ್ಯವಹಾರ = (ವಿ)	-	ಸರಿಯಾದ, ನಿಜವಾದ ವ್ಯವಹಾರ
ಆಕಸ್ಮಿಕ = (ನಾ) (ಸಂ)	-	ಅಕಸ್ಮಾತ್ತಾಗಿ ಜರುಗಿದ
ಆಕ್ರಮಣ = (ನಾ) (ಸಂ)	-	ದಾಳಿ, ಅಕ್ರಮವಾಗಿ ಏರಿ ಹೋಗುವಿಕೆ, ಮುತ್ತಿಗೆ
ಆಕ್ರಂದನ = (ನಾ) (ಸಂ)	-	ಅತೀ ದುಃಖ ತುಂಬಿದ, ಗಟ್ಟಿಯಾಗಿ ಅಳುವಿಕೆ
ಆಕ್ರೋಶ = (ನಾ) (ಸಂ)	-	ಉಗ್ರವಾದ ಕೋಪ, ಕಟು ಮಾತಾಡುವಿಕೆ, ಬೈಯುವಿಕೆ
ಆ್ಯಕ್ಟ್ = (ಇಂ)	-	ಕಾಯಿದೆ, ಕಾನೂನು
ಆ್ಯಕ್ಸಿಡೆಂಟ್ = (ಇಂ)	-	ಅಪಘಾತ, ದುರ್ಘಟನೆ
ಆಘಾತ = (ನಾ) (ಸಂ)	-	ಹೃದಯವಿದ್ರಾವಕ ಪೆಟ್ಟು, ಹೊಡೆತ, ವಧೆ

ಆತಂಕ = (ನಾ) (ಸಂ)	- ಅನುಮಾನಕ್ಕೊಳಪಟ್ಟು ತವಕಿಸುವುದು, ಭಯ
ಆಗುಂತಕ = (ನಾ)	- ಅಕಸ್ಮಾತ್ತಾಗಿ ಮೈಮೇಲೇರಿ ಬಂದ
ಆತ್ಮಹತ್ಯೆ = (ನಾ) (ಸಂ)	- ತಮ್ಮನ್ನು ತಾವೇ ಕೊಂದುಕೊಳ್ಳುವುದು.
ಆಪಾದನೆ = (ನಾ) (ಸಂ)	- ಆರೋಪ ಹೊರಿಸುವುದು, ಆರೋಪ ಹೊಂದು
ಆರ್ಭಟ = (ವಿ)	- ಭಯಂಕರವಾಗಿ ಕಿರುಚುವುದು.
ಆರೋಪ = (ನಾ)	- ಅಪರಾಧ ಎಸಗಿದ ಬಗ್ಗೆ ದೂರುವುದು, ದೋಷ ಹೊರಿಸುವುದು
ಆಸಾಮಿ = (ನಾ) (ಸಂ)	- ಕೇಸಿಗೆ ಸಂಬಂಧಿಸಿದ ವ್ಯಕ್ತಿ
ಆಶ್ಚರ್ಯ = (ನಾ) (ಸಂ)	- ಅಚ್ಚರಿಯಾದದ್ದು, ವಿಸ್ಮಯವಾದದ್ದು ಅದ್ಭುತ
ಆಹುತಿ = (ನಾ) (ಸಂ)	- ಬಲಿ, ಬಲಿಯಾಗುವುದು, ಬಲಿಯಾದದ್ದು, ತುತ್ತು.
ಇರಾದೆ = (ನಾ) (ಹಿಂ)	- ಪ್ರಕರಣ, ಕೇಸ್, ವಿಚಾರ, ಸಂಕಲ್ಪ
ಈರ್ಷೆ = (ನಾ) (ಸಂ)	- ಹೊಟ್ಟೆಕಿಚ್ಚು, ಮಾತ್ಸರ್ಯ
ಉಗ್ರತೆ = (ವಿ) (ಸಂ)	- ಸಿಟ್ಟಿನ ಸ್ವಭಾವ, ತೀಕ್ಷ್ಣವ
ಉಗ್ರಗಾಮಿ = (ನಾ) (ಹಿಂ)	- ಬಂಡಾಯ ಎದ್ದವನು
ಉಪಟಳ = (ನಾ)	- ಕಿರುಕುಳ, ತೊಂದರೆ, ಕಷ್ಟ, ಕ್ಲೇಶ, ಪೀಡೆ
ಉರವಣಿಗೆ = (ನಾ)	- ದರ್ಪ, ದೌರ್ಜನ್ಯ ಎಸಗುವುದು, ದಿಟ್ಟತನ
ಎತ್ತಂಗಡಿ = (ನು)	- ದಿವಾಳಿ, ಮುಗಿಸಿ ಹಾಕುವುದು, ಕೊಲ್ಲುವುದು
ಎನ್‌ಕೌಂಟರ್ = (ಇಂ) (ನಾ)	- ಕಂಡಲ್ಲಿ ಗುಂಡಿನ ದಾಳಿ ಎಸಗುವುದು.
ಎರ್ರಾಬಿರ್ರಿ = (ನಾ)	- ಕ್ರಮವಲ್ಲದ ರೀತಿಯಲ್ಲಿ ಯದ್ವಾತದ್ವಾ
ಎಸ್ಕೇಪ್ = (ನಾ) (ಇಂ)	- ಪರಾರಿಯಾಗು
ಎಸ್ಟೇಟ್ = (ನಾ) (ಇಂ)	- ಸೀಮಿತ ಪ್ರದೇಶ, ವಲಯ

ಏಸ್ಟೇಟ್ ದಂಧೆ = (ನಾ)	-	ಸೀಮಿತ ಪ್ರದೇಶದ ವ್ಯವಹಾರ
ಏಕಧಮ್ = (ಹಿಂ) (ನಾ)	-	ಒಂದೇ ಸಾರಿಯಾಗಿ ಅಥವಾ ಒಂದೇ ಸಲ
ಏರುಪೇರು = (ನಾ)	-	ಬದಲಿಯಾಗು, ಮೇಲೆ ಕೆಳಗಾಗು, ಹೆಚ್ಚು ಕಡಿಮೆ.
ಐಷಾರಾಮಿ = (ನಾ) (ಹಿಂ)	-	ಸುಖವಾದ, ಭೋಗ ವಿಲಾಸ
ಐಟಲಗಾ = (ನಾ)	-	ಜಿಗಿಯುವುದು, ನೆಗೆಯುವುದು
ಐತ್‌ಲಗಾ = (ನಾ)	-	ಜಿಗಿಯುವುದು, ನೆಗೆಯುವುದು
ಓನ್ ಬಿಜಿನೆಸ್ = (ನಾ) (ಇಂ)	-	ಸ್ವಂತ ವ್ಯವಹಾರ
ಓಪನ್ ಸೆಕ್ಸ್ = (ನಾ) (ಇಂ)	-	ನಗ್ನವಾದ ಲೈಂಗಿಕತೆ
ಓವರ್ ಆ್ಯಕ್ಟಿಂಗ್ = (ನಾ) (ಇಂ)	-	ಹೆಚ್ಚಾದ ನಟನೆ
ಓವರ್ ಟೇಕ್ = (ನಾ) (ಇಂ)	-	ಅಕ್ರಮವಾಗಿ ಮುಂದೆ ಸಾಗುವುದು.
ಔಟ್‌ಡೋರ್ = (ನಾ) (ಇಂ)	-	ಹೊರಗಡೆಯಲ್ಲಿ
ಔಟ್‌ಗೋಯಿಂಗ್ = (ನಾ) (ಇಂ)	-	ಹೊರಗಡೆ ಹೋಗುವಂಥದ್ದು
ಕಚ್ಚಾಟ = (ನಾ)	-	ಜಗಳ, ಕಲಹ, ಬೈದಾಡುವುದು, ಕಿರಿಚಾಡುವುದು
ಕಚ್ಚೆ ಹರುಕ = (ನಾ)	-	ನೈತಿಕತೆ ಇಲ್ಲದವ, ವ್ಯಭಿಚಾರಿ ಕಚ್ಚೆ ಬಿಟ್ಟವ
ಕಟುಕ = (ನಾ)	-	ನಿರ್ದಯಿ, ಹಿಂಸೆ ನೀಡುವವ
ಕದನ = (ನಾ)	-	ಹೊಡೆದಾಟ
ಕರ್ಮಕಾಂಡ = (ನು)	-	ಹೇಯವಾದ ವಿಚಾರ
ಕರಾಮತ್ತು = (ನಾ)	-	ಮಸಲತ್ತು, ಚಮತ್ಕಾರಿಕೆ
ಕರಾಳ ದಿನ = (ನಾ)	-	ದುಸ್ತರವಾದ ದಿನ, ಭಯಂಕರ
ಕರಾಳ ರಾತ್ರಿ = (ನಾ)	-	ಕೆಟ್ಟದಾದ ಇರುಳು, ಭಯಂಕರ
ಕಳ್ಳ = (ನಾ)	-	ಕದಿಯುವವ, ಕಳವು ಮಾಡುವವ
ಕಳ್ಳತನ = (ನಾ)	-	ಕದಿಯುವುದು, ಪರವಸ್ತುವನ್ನು ಕದಿಯುವುದು.

ಕಾನೂನು = (ನಾ) (ಹಿಂ) - ನ್ಯಾಯಬದ್ಧವಾದ ನಿಯಮಾವಳಿ

ಕಾಮ = (ನಾ) (ಸಂ) - ಆಸೆ, ಅತಿಯಾಸೆ, ಹೆಣ್ಣಿನ ಸಾಂಗತ್ಯ, ಲೈಂಗಿಕಾಸಕ್ತಿ, ಸಂಭೋಗೇಚ್ಛೆ

ಕಾಮುಕ = (ನಾ) (ಸಂ) - ಕಾಮದ ದುರಾಸೆ ಉಳ್ಳವ

ಕಾಮದಾಟ = (ನಾ) - ಲೈಂಗಿಕ ಕ್ರೀಡೆ

ಕಾಮಾಂಚನ = (ವಿ) - ಲೈಂಗಿಕಾಸಕ್ತಿ

ಕಿರುಕುಳ = (ನಾ) - ತೊಂದರೆ ಕೊಡುವುದು

ಕಿಲ್ಲರ್ = (ನಾ) (ಇಂ) - ಕೊಲೆಗಡುಕ

ಕಿಲ್ಲಿಂಗ್ = (ನಾ) (ಇಂ) - ಕೊಲ್ಲುವುದು

ಕ್ರಿಮಿನಲ್ = (ನಾ) (ಇಂ) - ಅಪರಾಧಿ

ಕ್ರಿಮಿನಲ್ ಮೊಕದ್ದಮೆ = (ನಾ) - ಅಪರಾಧ ಪ್ರಕರಣ

ಕುಖ್ಯಾತ = (ನಾ) (ಸಂ) - ಕೆಟ್ಟದ್ದರಲ್ಲಿ ಪ್ರಸಿದ್ಧಿಯಾದ

ಕುಡಿತ = (ನಾ) - ಮದ್ಯಪಾನ ಮಾಡುವುದು, ಕುಡಿಯುವಿಕೆ

ಕುಡುಕ = (ನಾ) - ಮದ್ಯಪಾನ ಮಾಡುವವನು, ಕುಡಿಯುವವನು

ಕೆಡುಕ = (ನಾ) - ಕೆಟ್ಟ ಕೃತ್ಯ ಮಾಡುವವ, ಕೆಡಿಸುವವನು, ಹಾಳು ಮಾಡುವವ

ಕೇಸ್ = (ನಾ) (ಇಂ) - ಪ್ರಕರಣ

ಕ್ರೈಮ್ = (ನಾ) (ಇಂ) - ಅಪರಾಧ

ಕ್ರೈಮ್ ನ್ಯೂಸ್ = (ನಾ) - ಅಪರಾಧ ಸುದ್ದಿ

ಕೊಲೆ = (ನಾ) - ಪ್ರಾಣ ತೆಗೆಯುವುದು

ಕೊಲೆಗಡುಕ = (ನಾ) - ಪ್ರಾಣ ತೆಗೆಯುವವ

ಕೊಲೆಗಾರ = (ನಾ) - ಪ್ರಾಣ ತೆಗೆಯುವವ

ಕೋರ್ಟ್ = (ಇಂ) (ನಾ) - ನ್ಯಾಯಾಲಯ, ನ್ಯಾಯಸ್ಥಾನ

ಖಟ್ಲೆ = (ನಾ) (ಮ) - ಜಗಳ, ಪ್ರಕರಣ, ದಾವೆ, ನ್ಯಾಯ

ಖತಂ = (ನಾ) (ಹಿಂ)	-	ಮುಗಿಸಿಹಾಕು, ಕತ್ತರಿಸು, ಮುಕ್ತಾಯ, ಸಮಾಪ್ತಿ
ಖತ್ಮ = (ನಾ) (ಹಿಂ)	-	ಕತ್ತರಿಸಿ ಹಾಕುವುದು
ಖತರ್ನಾಕ್ = (ನಾ) (ಇಂ)	-	ಅಪಾಯಕಾರಿ
ಖದರ್ರು = (ನಾ) (ಹಿಂ)	-	ಅರಿವು, ಪ್ರಜ್ಞೆ
ಖದೀಮ = (ನಾ) (ಹಿಂ)	-	ಕಳ್ಳ
ಖಯಾಲಿ = (ನಾ) (ಹಿಂ)	-	ಗೀಳು, ಹವ್ಯಾಸ
ಖರಾಬ್ = (ನಾ)	-	ಕೆಟ್ಟದಾದ, ಕ್ರೂರ
ಖರಾಬ್ ಕಿಲ್ಲರ್ = (ನಾ)	-	ಕ್ರೂರಿಯಾದ ಕೊಲೆಗಾರ
ಗನ್ = (ನಾ) (ಇಂ)	-	ಬಂದೂಕು
ಗನ್‌ಮ್ಯಾನ್ = (ನಾ)	-	ಬಂದೂಕು ಧರಿಸಿದವ
ಗನ್‌ಶ್ಯಾಟ್ = (ನಾ)	-	ಬಂದೂಕಿನಿಂದ ಹೊಡೆದದ್ದು
ಗರಡಿ = (ನಾ)	-	ಕುಸ್ತಿ ಕಲಿಯುವ ಮನೆ, ಅಂಗಸಾಧನೆ, ಕುಸ್ತಿ
ಗರಮಾಗರಂ = (ನಾ) (ಹಿಂ)	-	ಬಿಸಿ ಬಿಸಿ, ತಾಜಾ
ಗಲ್ಲು = (ನಾ)	-	ನೇಣುಗಂಬ, ಶಿಲುಬೆ
ಗಲ್ಲುಶಿಕ್ಷೆ = (ನಾ)	-	ನೇಣು ಶಿಕ್ಷೆ, ನೇಣಿಗೇರಿಸುವುದು.
ಗಾವುಗುಂಡಿಗೆ = (ನಾ)	-	ಕೆಚ್ಚೆದೆಯ, ದಿಟ್ಟವಾದ
ಗಾಳ = (ನಾ)	-	ಗಂಟಲಿಗೆ ಹಾಕುವ ಸಾಧನ, ಮೀನ ಹಿಡಿಯುವ ಕೊಕ್ಕೆ
ಗಾಂಚಾಲಿ = (ನಾ)	-	ಧಿಮಾಕಿನ
ಗಾಂಜಾ = (ನಾ)	-	ನಿಶಾ ತಂಬಾಕು, ಒಂದು ಮಾದಕ ಸೊಪ್ಪು
ಗಾಂಜಾ ಅಡ್ಡೆಗಳು = (ನಾ)	-	ನಿಶಾ ತಂಬಾಕು ದೊರೆಯುವ ಸ್ಥಳಗಳು
ಗೂಂಡಾ = (ನಾ)	-	ದಾದಾ
ಗೂಂಡಾಗಿರಿ = (ನಾ)	-	ದಾದಾಗಿರಿ

ಗೋಲಿಬಾರ್ = (ನಾ)	-	ಗುಂಡಿನ ಸುರಿಮಳೆ
ಗ್ಯಾಂಗ್ = (ನಾ) (ಇಂ)	-	ಗುಂಪು
ಗ್ಯಾಂಗ್‌ವಾರ್ = (ನಾ) (ಇಂ)	-	ಗುಂಪು ಕದನ
ಘಟನೆ = (ನಾ) (ಸಂ)	-	ಆದ ಸಂಗತಿ, ಆಕಸ್ಮಿಕ ಆದ ಸಂಗತಿ
ಘಟಾಘಟಿ = (ನಾ)	-	ಸಮರ್ಥವಾದ, ಗಟ್ಟಿಯಾದ
ಘಟಾನುಘಟಿ = (ನಾ)	-	ಅತೀ ಸಮರ್ಥವಾದ, ಬಹಳ ಗಟ್ಟಿಗ
ಘರ್‌ವಾಲಿ = (ನಾ)	-	ಮನೆಯವಳು
ಚಟ = (ನಾ)	-	ಹವ್ಯಾಸ, ರೂಢಿ, ಅಭ್ಯಾಸ, ಕೆಟ್ಟ ಅಭ್ಯಾಸ
ಚಟ ಚಕ್ರವರ್ತಿ = (ನಾ)	-	ಹವ್ಯಾಸಿಯಾದವ, ಕೆಟ್ಟ ಅಭ್ಯಾಸಗಳಲ್ಲಿ ನಿರತನಾದವ
ಚಟ್ಟ = (ನಾ)	-	ಸಿದಿಗೆ
ಚಡ್ಡಿಗಳು = (ನಾ)	-	ಮೂಲಭೂತವಾದಿಗಳು
ಚಮಚಾಗಳು = (ನಾ)	-	ಸೇವಕರು, ಗುಲಾಮರು
ಚಳ್ಳೆ ಹಣ್ಣು ತಿನ್ನಿಸು = (ನು)	-	ಮೋಸ ಮಾಡುವುದು
ಚರ್ಮೋದ್ಯಮ = (ನಾ)	-	ವೇಶ್ಯಾವಾಟಿಕೆ
ಛಲ = (ನಾ)	-	ಹಠ, ಹಟ, ಧೂರ್ತತೆ
ಛಲಗಾರ = (ನಾ)	-	ಹಠವಾದಿ, ಪರಾಕ್ರಮಿ
ಛಾಲೆಂಜ್ = (ನಾ) (ಇಂ)	-	ಹಠ, ಪಣ ತೊಡುವುದು
ಜಟಾಪಟಿ = (ನಾ) (ಹಿಂ)	-	ಸರಸರ, ಬೇಗನೆ, ಹಳಿಯುವಿಕೆ
ಜಬರ್ದಸ್ತ್ = (ನಾ) (ಹಿಂ)	-	ದೌರ್ಜನ್ಯ ನಡೆಸುವುದು, ಒತ್ತಾಯ, ಬಲವಂತ ಹಿಂಸೆ
ಜಾಮೀನು = (ನಾ) (ಹಿಂ)	-	ಜವಾಬ್ದಾರಿ ನೀಡುವುದು, ಹೊಣೆ, ಒತ್ತೆ
ಜಮೀನ್ದಾರ = (ನಾ) (ಹಿಂ)	-	ಭೂ ಒಡೆಯ, ಆಸ್ತಿವಂತ, ಒಕ್ಕಲಿಗ
ಜೀವಾವಧಿ ಶಿಕ್ಷೆ = (ನಾ)	-	ಜೀವನಾವಧಿ ಸೆರೆವಾಸ

ಜಿಂದಗಿ ದುಶ್ಮನ್ = (ನಾ) (ಹಿಂ)	-	ಆಜನ್ಮ ವೈರಿ
ಜೇಬುಗಳ್ಳತನ = (ನಾ)	-	ಕಿಸೆಯಲ್ಲಿನ ಹಣ ಕದಿಯುವುದು
ಜೇಬುಗಳ್ಳರು = (ನಾ)	-	ಕಿಸೆಯಲ್ಲಿನ ಹಣ ಕದಿಯುವವರು
ಜೈಲುಶಿಕ್ಷೆ = (ನಾ)	-	ಸೆರೆಮನೆ ವಾಸ
ಝರ್ಜರಿತ = (ನಾ)	-	ನಜ್ಜುಗುಜ್ಜಾದ
ಝಂಗಿಕುಸ್ತಿ = (ನಾ)	-	ಪಟ್ಟಾದ ಹಿಡಿತ, ಬಿಗಿ ಹಿಡಿತ
ಝಟಾಪಟಿ = (ಕ್ರಿ)	-	ಜಗಳ ಮಾಡುವುದು, ಕೈ ಕೈ ಹತ್ತುವುದು
ಡ್ರಗ್ = (ನಾ)	-	ಮಾದಕ ವಸ್ತು
ಡ್ರಗ್ಸ್ ಮಾಫಿಯಾ = (ನಾ)	-	ಮಾದಕ ವಸ್ತು ವ್ಯವಹಾರ
ಡರ್ಟಿಫೆಲೋ = (ನಾ)	-	ಒರಟು ಮನುಷ್ಯ, ಹೊಲಸು ಸ್ವಭಾದವ
ಡಾನ್‌ಗಳು = (ನಾ)	-	ನಾಯಕರುಗಳು, ಲೀಡರುಗಳು
ಡೀಲ್ = (ನಾ) (ಇಂ)	-	ವ್ಯವಹಾರ
ಡೀಲಿಂಗ್ = (ಕ್ರಿ) (ಇಂ)	-	ವ್ಯವಹಾರ ಮಾಡುವುದು
ಡೈರಿ = (ನಾ) (ಇಂ)	-	ದಿನಚರಿ
ಡೈಲಿ = (ನಾ) (ಇಂ)	-	ದಿನಾಲು
ತಂಟೆ = (ನಾ) (ಹಿಂ)	-	ಸಹವಾಸ, ಜಗಳ ಕಾಯುವುದು, ಉಪದ್ರವ
ತಗಲಾಕು = (ಕ್ರಿ)	-	ತೊಂದರೆಗೆ ಈಡು ಮಾಡು
ತಗಾದೆ = (ನಾ)	-	ಕಾಲು ಕೆದರಿ ಜಗಳ ಕಾಯುವುದು ಬರತಕ್ಕದ್ದನ್ನು ಆಗಾಗ್ಗೆ ಕೇಳುವಿಕೆ
ತಲಾಖ್ = (ನಾ) (ಹಿಂ)	-	ವಿಚ್ಛೇದನ
ತಲಾಷ್ = (ಕ್ರಿ) (ಹಿಂ)	-	ಹುಡುಕಾಟ
ತಲೆಹಿಡುಕ = (ನಾ)	-	ವೇಶ್ಯೆವಾಟಿಕೆ ನಡೆಸುವವ
ತರಾತುರಿ = (ಅ)	-	ಬೇಗ ಬೇಗನೆ, ಅವಸರವಸರ, ಬೇಗನೆ
ದರ್ಪ = (ನಾ) (ಸಂ)	-	ಅಧಿಕಾರ ಚಲಾಯಿಸುವುದು, ಗರ್ವ, ಅಬ್ಬರ

ದರೋಡೆ = (ನಾ)	-	ನಾಲ್ವರು ಸೇರಿ ಮಾಡುವ ಕಳ್ಳತನ
ದಂಧೆ = (ನಾ)	-	ವ್ಯವಹಾರ
ದಂಡ = (ನಾ)	-	ಶುಲ್ಕ
ದಂಡನೆ = (ನಾ)	-	ಶಿಕ್ಷಿಸುವುದು, ಶಿಕ್ಷೆ ನೀಡುವುದು
ದಂಡಾಧಿಕಾರಿ = (ನಾ)	-	ಶಿಕ್ಷೆ ವಿಧಿಸುವವರು
ದಾಂಧಲೆ = (ನಾ)	-	ಗಲಾಟೆ ಎಬ್ಬಿಸುವುದು
ದಾದಾಗಿರಿ = (ನಾ)	-	ಗೂಂಡಾಗಿರಿ
ದುರಂತ = (ನಾ) (ಸಂ)	-	ಅತೀ ದುಃಖಕರವಾದ ಸಂಗತಿ, ಪರಿಣಾಮ ಕೆಟ್ಟದ್ದಾಗುವ, ಕೊನೆಗೆ ದುಃಖ ಕೊಡುವ
ದುರ್ಮರಣ = (ನಾ) (ಸಂ)	-	ವಿಚಿತ್ರವಾದ ಸಾವು, ಕೆಟ್ಟ ಸಾವು, ಅನೈಸರ್ಗಿಕ ಮರಣ, ಕೆಟ್ಟ ಸ್ಥಿತಿಯಿಂದ ಸಾಯುವಿಕೆ
ದುಶ್ಮಾನ್ = (ನಾ) (ಹಿಂ)	-	ಶತ್ರು, ವೈರಿ
ದುಶ್ಮನಿ = (ವಿ) (ಹಿಂ)	-	ಶತ್ರುತ್ವ, ವೈರತ್ವ
ದೇಶದ್ರೋಹ = (ನಾ)	-	ದೇಶಕ್ಕೆ ಕೆಟ್ಟದ್ದನ್ನು ಬಗೆಯುವುದು
ದೇಶದ್ರೋಹಿ = (ನಾ)	-	ದೇಶಕ್ಕೆ ಕೆಟ್ಟದ್ದನ್ನು ಬಗೆಯುವವನು
ದ್ವೇಷಿ = (ನಾ)	-	ಹೊಟ್ಟೆಕಿಚ್ಚು, ಹಗೆ, ವೈರ
ದೌರ್ಜನ್ಯ = (ನಾ) (ಸಂ)	-	ದುಷ್ಟತನ, ಕೆಟ್ಟ ಶೀಲ, ದುರ್ಜನತೆ
ದೌಲತ್ತು = (ನಾ) (ಸಂ)	-	ಸಂಪತ್ತಿನ ಹಮ್ಮು, ಸಿರಿ, ಸಂಪತ್ತು
ಧಗೆ = (ನಾ)	-	ಬೆಂಕಿ, ಬೇಗೆ, ಉರಿ
ಧಗಾಕಾರ = (ನಾ)	-	ಬೆಂಕಿ ಹಚ್ಚುವವ
ಧಗಧಗಿಸು = (ಕ್ರಿ)	-	ಉರಿಯುವ ಬೆಂಕಿ
ಧಮಕಿ = (ನಾ)	-	ಎಚ್ಚರಿಕೆ ನೀಡುವುದು
ನಕ್ಸಲ್, ನಕ್ಸಲೈಟ್ = (ನಾ)	-	ಉಗ್ರಗಾಮಿತನ, ಉಗ್ರಗಾಮಿ
ನರಕ = (ನಾ) (ಸಂ)	-	ಕೆಟ್ಟದಾದ, ಹೇಯವಾದ, ಹೀನಾಯವಾದ, ಬಹು ಹೊಲಸಾದ

ನರಭಕ್ಷಕ = (ನಾ)	-	ಮನುಷ್ಯರನ್ನು ತಿನ್ನುವಂಥ
ನರರೂಪ ರಾಕ್ಷಸ = (ನಾ)	-	ಮನುಷ್ಯರನ್ನು ತಿನ್ನುವಂಥ
ನಾಮರ್ಧ = (ನಾ)	-	ಗಂಡಸುತನ ಇಲ್ಲದವ
ನೆಟ್‌ವರ್ಕ್ = (ನಾ)	-	ಸಂಪರ್ಕ ಜಾಲ
ನ್ಯಾಯಾಲಯ = (ನಾ)	-	ನ್ಯಾಯ ನೀಡುವ ಸ್ಥಾನ, ನ್ಯಾಯ ಸ್ಥಾನ
ನ್ಯಾಯಾಧೀಶ = (ನಾ)	-	ನ್ಯಾಯ ನೀಡುವವ, ತೀರ್ಪು ನೀಡುವವರು
ನ್ಯಾಯಪೀಠ = (ನಾ)	-	ತೀರ್ಪು ನೀಡುವ ಸ್ಥಾನ
ಪಬ್ = (ನಾ)	-	ಬಾರ್ ಅಂಡ್ ರೆಸ್ಟೋರೆಂಟ್, ಡಾಬಾಗಳು, ವೇಶ್ಯೆಯರ ಸಪ್ಲೈ ಇರುವ ಸ್ಥಳ
ಪರಾಭಾರೆ = (ನಾ)	-	ಪರರ ಜವಾಬ್ದಾರಿಯನ್ನು ಹೋರುವುದು
ಪರದಾಟ = (ಕ್ರಿ)	-	ತಿರುಗಾಟ, ತಿರುಗಾಡುವುದು, ಅಲೆದಾಡುವುದು
ಪರದಾಡು = (ಕ್ರಿ)	-	ತಿರುಗಾಟ ತಿರುಗಾಡುವುದು ಅಲೆದಾಡುವುದು
ಪಾತಕ ಲೋಕ = (ನಾ)	-	ಹಿಂಸಾ ಕೃತ್ಯಗಳನ್ನು ದಂಧೆಯಾಗಿಸಿಕೊಂಡ ಜನರ ಸಮೂಹ
ಪಾತಕಿ = (ನಾ)	-	ಹಿಂಸೆಯನ್ನೆಸಗುವವ
ಪಾಲಿಟಿಕ್ಸ್ = (ನಾ) (ಇಂ)	-	ರಾಜಕಾರಣ, ರಾಜಕೀಯ
ಪಿಂಪು = (ನಾ) (ಇಂ)	-	ತಲೆಹಿಡುಕ, ವೇಶ್ಯಾವಾಟಿಕೆಯ ಮಧ್ಯವರ್ತಿ
ಪುಂಡ = (ನಾ)	-	ಉಡಾಳ, ತಂಟೆಕೋರ, ತುಂಟ, ಲೂಟಿಗಾರ
ಪುಡಾರಿ = (ನಾ)	-	ಉಡಾಳ, ತಂಟೆಕೋರ, ತುಂಟ, ಲೂಟಿಗಾರ
ಪ್ರೀತಿ, ಪ್ರೇಮ, ಪ್ರಣಯ = (ನಾ)	-	ಮೋಹ, ವ್ಯಾಮೋಹ
ಪೊಲೀಸ್ ಸ್ಟೋರಿ = (ನಾ) (ಇಂ)	-	ಅಪರಾಧದ ಸುದ್ದಿಯನ್ನೊಳಗೊಂಡ ಕಥೆಗಳು
ಪೋಸ್ಟ್ ಮಾರ್ಟಂ = (ಕ್ರಿ)	-	ಮರಣೋತ್ತರ ಪರೀಕ್ಷೆ
ಫಟಿಂಗ = (ನಾ)	-	ಅಸಭ್ಯ ಮನುಷ್ಯ, ಉದ್ಧಟ, ಲಫಂಗ

ಫಿಗರ್ = (ನಾ) (ಇಂ)	-	ಚಿತ್ರ, ಚಿತ್ರದ ಗೊಂಬೆಯಂತ ಹುಡುಗಿ, ಚೆಂದದ ಹುಡುಗಿ
ಫಿನಿಷ್ = (ನಾ) (ಇಂ)	-	ಮುಗಿಸು, ಮುಕ್ತಾಯ
ಫಿಟ್ಟಿಂಗ್ = (ನಾ) (ಇಂ)	-	ಪರಸ್ಪರ ಜಗಳ ಹಚ್ಚುವುದು
ಫೈರ್ = (ನಾ) (ಇಂ)	-	ಸುಡುವುದು, ಗುಂಡು ಹಾರಿಸುವುದು
ಫೋಟೋಕಾಮಿಕ್ಸ್ = (ನಾ) (ಇಂ)	-	ನಗ್ನ ಛಾಯಾಚಿತ್ರಗಳು
ಬರ್ಬರ ಹತ್ಯೆ = (ವಿ)	-	ಕ್ರೂರವಾಗಿ ಕೊಂದಿರುವುದು
ಬಲಿ = (ಕ್ರಿ)	-	ಗಟ್ಟಿಯಾಗು
ಬಲಿ = (ನಾ)	-	ಆಹುತಿ
ಬಲೆ = (ನಾ)	-	ಮೀನು ಮುಂತಾದ ಪ್ರಾಣಿಗಳನ್ನು ಸೆರೆಹಿಡಿಯುವ ಸಾಧನ ಮೃಗಪಕ್ಷಿಗಳನ್ನು ಹಿಡಿಯುವ ಜಾಳಿಗೆ
ಬಂಧನ = (ನಾ)	-	ಸೆರೆ
ಬಂದೂಕು = (ನಾ)	-	ಗುಂಡು ಹಾರಿಸುವ ಸಾಧನ
ಬಾಂಬ್ = (ನಾ) (ಇಂ)	-	ಸ್ಫೋಟಿಸುವ ವಸ್ತು, ಸ್ಫೋಟವಾಗುವ ಸಾಧನ
ಬಾರ್, ಬಿಯರ್, ಬ್ರಾಂಡಿ = (ನಾ)	-	ಮದ್ಯಪಾನ ಮಾಡುವ ಸ್ಥಳ, ಮದಿರಾಲಯ
ಬೇಜಾನ್ = (ನಾ)	-	ಸಾಕಷ್ಟು, ಬಹಳವಾದ
ಬೇಟೆ = (ನಾ)	-	ಬಲಿಯಾಗುವಂಥದ್ದು, ಆಹುತಿಯಾಗುವಂಥ ಶಿಕಾರಿ
ಬೇಹುಗಾರ = (ನಾ)	-	ಗುಪ್ತವಾದ ಮಾಹಿತಿದಾರ, ಪತ್ತೆದಾರ
ಬೇಹುಗಾರಿಕೆ = (ನಾ)	-	ಗೂಢಾಚಾರಿಕೆ, ಗುಪ್ತಚಾರಿಕೆ
ಬೇಹುಪಡೆ = (ನಾ)	-	ಗೂಢಾಚಾರ ಪಡೆ, ಗುಪ್ತಚಾರ ದಳ
ಬ್ರೋಕರ್ = (ನಾ)	-	ದಲ್ಲಾಳಿ
ಭಯೋತ್ಪಾದನೆ = (ನಾ)	-	ಭಯವನ್ನುಂಟು ಮಾಡುವ ಕ್ರಿಯೆ, ಹಿಂಸೆ ನೀಡುವುದು.

ಭಯೋತ್ಪಾದಕರು = (ನಾ)	-	ಭಯವನ್ನುಂಟು ಮಾಡುವವರು, ಹಿಂಸಿಸುವವರು
ಭೂಗತ ಲೋಕ = (ನಾ)	-	ಅಡಗಿಕೊಂಡು ಕೆಲಸ ಮಾಡುವಂಥ, ವ್ಯವಹರಿಸುವಂಥ ಜನಸಮೂಹ
ಭೂಗತ ಜಗತ್ತು = (ನಾ)	-	ಅಡಗಿಕೊಂಡು ಕೆಲಸ ಮಾಡುವಂಥ ಸಮೂಹ
ಭೂಮಾಫಿಯಾ = (ನಾ)	-	ಭೂ ಕಬಳಿಕೆಯ ವ್ಯವಹಾರ
ಭ್ರಷ್ಟತೆ = (ವಿ) (ಸಂ)	-	ಕೆಳಗೆ ಬಿದ್ದ, ಕೆಟ್ಟ, ದೂಷಿತ ಆಚಾರವುಳ್ಳ
ಭ್ರಷ್ಟಾಚಾರ = (ವಿ)	-	ಕೆಟ್ಟ, ಆಚಾರ, ದುಷ್ಟ ಆಚಾರ
ಭಯಾನಕ = (ವಿ)	-	ಭೀತಿ ಹುಟ್ಟಿಸುವಂಥ, ಭೀಕರವಾದ
ಭಯಂಕರ = (ವಿ) (ಸಂ)	-	ಅಂಜಿಕೆ ಬರುವ, ಭೀತಿ ಹುಟ್ಟಿಸುವ
ಭೀಭತ್ಸ್ಯ = (ವಿ)	-	ಭೀಕರವಾದ, ಭಯವನ್ನುಂಟು ಮಾಡುವ
ಮಚ್ಚು = (ನಾ)	-	ಕತ್ತಿ, ಇರಿಯುವ ಸಾಧನ
ಮಟಕಾ = (ನಾ)	-	ಒಂದು ಥರದ ಆಟ
ಮಟ್ಯಾಷ್ = (ಕ್ರಿ)	-	ಸಮಾಪ್ತಿ ಮಾಡು, ಮುಗಿಸಿ ಹಾಕು
ಮರ್ಡರ್ = (ನಾ)	-	ಕೊಲೆ, ಕೊಚ್ಚಿ ಹಾಕುವುದು, ಕೊಂದು ಬಿಡುವುದು
ಮತ್ಸರ = (ವಿ)	-	ಹೊಟ್ಟೆಕಿಚ್ಚು
ಮದ್ಯ = (ನಾ)	-	ಮತ್ತೇರಿಸುವ ಮಧುಪಾನ
ಮದ್ಯಪಾನ = (ನಾ)	-	ಮತ್ತೇರಿಸುವ ಮಧುಪಾನ, ಮದ್ಯ ಕುಡಿಯುವುದು
ಮದ್ದುಗುಂಡು = (ನಾ)	-	ಬಂದೂಕಿನಲ್ಲಿ ಉಪಯೋಗಿಸುವ ವಸ್ತುಗಳು
ಮರಣದಂಡನೆ = (ನಾ)	-	ಗಲ್ಲಿಗೇರಿಸುವುದು, ನೇಣುಗಂಬಕ್ಕೆ ಏರಿಸುವುದು, ಗಲ್ಲುಶಿಕ್ಷೆ
ಮಾದಕ = (ನಾ)	-	ಮದವೇರಿಸುವಂಥ ದ್ರವ್ಯ
ಮಾದಕ ದ್ರವ್ಯ = (ನಾ)	-	ಅಮಲೇರಿಸುವಂಥ ವಸ್ತುಗಳು

ಮಾರ್ಕೆಟ್ ದಂಧೆ = (ನಾ)	-	ಸಂತೆ ವ್ಯವಹಾರ
ಮಾರ್ಕೆಟ್ ರೌಡಿ = (ನಾ)	-	ಸಂತೆ ವ್ಯವಹಾರವನ್ನು ಮಾಡುವವರು, ಪುಡಾರಿಗಳು
ಮಾರ್ಕೆಟ್ ಮಾಫಿಯಾ = (ನಾ)	-	ಸಂತೆ ವ್ಯಾಪಾರ
ಮಾಫಿಯಾ = (ನಾ)	-	ದಂಧೆ, ವ್ಯಾಪಾರ, ವ್ಯವಹಾರ
ಮಾಂಸ ದಂಧೆ = (ನಾ)	-	ಸ್ತ್ರೀಯರ ವ್ಯಾಪಾರ, ಯುವತಿಯರ ಮಾರಾಟ
ಮಾಂಸದಡ್ಡೆ = (ನಾ)	-	ಅಕ್ರಮವಾಗಿ ವ್ಯಭಿಚಾರ ನಡೆಸುವಂಥ ಸ್ಥಳ
ಮಾರಣಾಂತಿಕ ಹಲ್ಲೆ = (ನಾ)	-	ಸಾಯುವಂತೆ ಹಿಂಸಿಸಿದ
ಮಿಂಡ = (ನಾ)	-	ಉಪಪತಿ, ಇಟ್ಟುಕೊಂಡವ
ಮಿಂಡಗಾರ = (ನಾ)	-	ಉಪಪತಿ
ಮಿಟುಕಲಾಡಿ = (ನಾ)	-	ಒಯ್ಯಾರಿ, ಹೆಚ್ಚು ಲಜ್ಜೆ ತೋರಿಸುವವಳು
ಯದ್ವಾತದ್ವಾ = (ನಾ) (ಸಂ)	-	ಸಿಕ್ಕಾಪಟ್ಟೆ ಕ್ರಮರಹಿತವಾಗಿ
ಯರ್‍ರಾಬಿರ್‍ರಿ = (ನಾ)	-	ಸಿಕ್ಕಾಪಟ್ಟೆ ಕ್ರಮರಹಿತವಾಗಿ
ಯುದ್ಧ = (ನಾ)	-	ಸಂಗ್ರಾಮ, ಕದನ, ಕಾಳಗ
ರಂಪಾಟ = (ನಾ)	-	ಕೋಲಾಹಲ, ಗಲಾಟೆ, ಗುಲ್ಲು
ರಾಜಿ = (ನಾ) (ಹಿಂ)	-	ಒಪ್ಪಂದ, ಸಂಧಾನ
ರಾಬರ್ = (ನಾ) (ಇಂ)	-	ದರೋಡೆಕೋರ
ರಾಬರಿಂಗ್ = (ನಾ) (ಇಂ)	-	ದರೋಡೆ, ಲೂಟಿ
ರಿಮ್ಯಾಂಡ್‌ಹೋಮ್ = (ನಾ) (ಇಂ)	-	ಸೆರೆಮನೆ
ರಿವೇಂಜ್, ರಿವಾಲ್ವರ್ = (ನಾ)	-	ಗುಂಡು ಹಾರಿಸುವ ಸಾಧನ
ರೇಡು = (ನಾ)	-	ದಾಳಿ
ರೈಡ್ = (ನಾ)	-	ದಾಳಿ
ರೇಪ್ = (ನಾ)	-	ಬಲವಂತವಾದ ಲೈಂಗಿಕ ಕ್ರಿಯೆ

ರೇಪ್‌ಕೇಸ್ = (ನಾ)	-	ಬಲವಂತವಾದ ಲೈಂಗಿಕ ಕ್ರಿಯೆಗೆ ಸಂಬಂಧಿಸಿದ ಪ್ರಕರಣ
ರೋಲ್‌ಕಾಲ್ = (ನಾ) (ಇಂ)	-	ಹಣ ವಸೂಲಿ ಮಾಡುವುದು, ಬೆದರಿಸಿ ಹಣ ಕಿತ್ತುಕೊಳ್ಳುವುದು.
ರೌಡಿ = (ನಾ) (ಇಂ)	-	ದರ್ಪ ದೌರ್ಜನ್ಯದಿಂದ ಮೆರೆಯುವವರು
ರೌಡಿಸಂ = (ನಾ) (ಇಂ)	-	ದರ್ಪ ದೌರ್ಜನ್ಯದ ವೃತ್ತಿ
ರೈಫಲ್ = (ನಾ) (ಇಂ)	-	ಬಂದೂಕಿನಂಥ ಸಾಧನ
ರೈಫಲ್‌ವಾರ್ = (ನಾ) (ಇಂ)	-	ಪಿಸ್ತೂಲು ಮತ್ತು ಬಂದೂಕುಗಳಿಂದ ಹೊಡೆದಾಡುವುದು, ಗುಂಡಿನ ಕಾಳಗ
ಲಂಚ = (ನಾ)	-	ಅಕ್ರಮವಾಗಿ ಸ್ವೀಕರಿಸಿದ ಕಪ್ಪು ಹಣ
ಲಂಚಕೋರ = (ನಾ)	-	ಅಕ್ರಮವಾಗಿ ಹಣವನ್ನು ಸ್ವೀಕರಿಸಿದವ
ಲಂಚಗುಳಿತನ = (ನಾ)	-	ಅಕ್ರಮವಾಗಿ ಹಣವನ್ನು ಸ್ವೀಕರಿಸುವಂಥದ್ದು.
ಲಂಪಟ = (ನಾ)	-	ವಿಷಯಾಸಕ್ತ, ಭೋಗಾಸಕ್ತ, ಆಸೆಯುಳ್ಳವ
ಲಫಂಗ = (ನಾ)	-	ದುಷ್ಟ ಚಾಳಿಯವ, ಅಸಭ್ಯ ಮನುಷ್ಯ
ಲವ್ ಕೇಸ್ = (ನಾ) (ಇಂ)	-	ಪ್ರೇಮ ಪ್ರಕರಣ
ಲೈವ್ ಬ್ಯಾಂಡ್ = (ನಾ) (ಇಂ)	-	ನೇರ ಪ್ರಸಾರವಾಗುವ ನೃತ್ಯಕೂಟಗಳು
ಲಾಭಿ = (ನಾ)	-	ಕುಟಿಲೋಪಾಯ
ಲಾಯರ್ = (ನಾ) (ಇಂ)	-	ವಕೀಲ, ನ್ಯಾಯವಾದಿ
ಲಾಂಗ್ = (ನಾ)	-	ಕಡಿದು ಹಾಕುವ, ಕೊಚ್ಚಿ ಹಾಕುವ ಸಾಧನ
ಲೋಡ್ = (ಕ್ರಿ)	-	ತುಂಬು, ಭರ್ತಿ ಮಾಡು
ವಂಚಕ = (ನಾ)	-	ಮೋಸಗಾರ
ವಂಚನೆ = (ನಾ)	-	ಮೋಸ, ಅನ್ಯಾಯ
ವರದಕ್ಷಿಣೆ = (ನಾ)	-	ವಧುವಿನ ಕಡೆಯಿಂದ ಪಡೆಯುವ ಹಣ ಮತ್ತು ಸಂಪತ್ತು

ವಾರೆಂಟ್ = (ನಾ)	-	ಬಂಧನ ಪತ್ರ
ಶೂಟ್ = (ಕ್ರಿ)	-	ಹಾರಿಸು, ಗುಂಡು ಹಾರಿಸು
ಶೂಟಿಂಗ್ = (ನಾ)	-	ಚಿತ್ರೀಕರಣ
ಷಂಡ = (ನಾ)	-	ನಪುಂಸಕ
ಷಂಡತನ = (ನಾ)	-	ನಪುಂಸಕತ್ವ
ಸಂಚು = (ನಾ)	-	ಮೋಸ, ಉಪಾಯ, ಯುಕ್ತಿ, ತಂತ್ರ
ಸಂಧಾನ = (ನಾ)	-	ಸೇರಿಸುವಿಕೆ, ಒಟ್ಟುಗೂಡಿಸುವಿಕೆ, ಒಪ್ಪಂದ
ಸರೆಂಡರ್ = (ನಾ)	-	ಶರಣಾಗುವುದು.
ಸಲಿಂಗರತಿ = (ನಾ)	-	ಸಮಾನ ಲಿಂಗಿಗಳಲ್ಲಿ ನಡೆಯುವ ಲೈಂಗಿಕ ಕ್ರಿಯೆ
ಸಲಿಂಗ ಕಾಮ = (ನಾ)	-	ಸಮಾನ ಲಿಂಗಿಗಳಲ್ಲಿ ನಡೆಯುವ ಲೈಂಗಿಕ ಕ್ರಿಯೆ
ಸಲಿಂಗಿಗಳು = (ನಾ)	-	ಸಮಾನಲಿಂಗಿಗಳು ಲೈಂಗಿಕ ಕ್ರಿಯೆಯಲ್ಲಿ ತೊಡಗುವವರು
ಸುಲಿಗೆ = (ನಾ)	-	ದರೋಡೆ, ಕೊಳ್ಳೆ
ಸೆಕ್ಸ್ ಮಾರ್ಕೆಟ್ = (ನಾ)	-	ವ್ಯಭಿಚಾರದ ವ್ಯಾಪಾರ, ಹುಡುಗಿಯರ ಮಾರಾಟದ ಸಂತೆ
ಸೆಕ್ಸ್ ಗರ್ಲ್ = (ನಾ)	-	ವ್ಯಭಿಚಾರ ಮಾಡುವ ಹುಡುಗಿ
ಸೆಕ್ಸ್ ಸುನಾಮಿ = (ನಾ)	-	ವ್ಯಭಿಚಾರದ ಭೀಕರ ಅಲೆ
ಸೆಕ್ಸಿ = (ನಾ)	-	ಕಾಮುಕಿ
ಸೆಕೆಂಡ್ಸ್ ದಂಧೆ = (ನಾ)	-	ಕಾಳಸಂತೆ ವ್ಯಾಪಾರ
ಸ್ಟೆಪ್ನಿ = (ನಾ)	-	ಉಪಪತ್ನಿ, ಸೂಳೆ
ಸಿಂಗಲ್ ಸ್ಟೋರಿ = (ನಾ)	-	ಒಂದೇ ಒಂದು ಕಥೆ
ಸೈಕಲ್ ಶಿಷ್ಯ = (ನಾ)	-	ಪಟ್ಟಾ ಶಿಷ್ಯ
ಸೂಪರ್ ಶಿಕಾರಿ, ಸುಪಾರಿ = (ನಾ)	-	ಶ್ರೇಷ್ಠವಾದ ಬೇಟೆ, ಪೂರ್ವನಿಯೋಜಿತ ಕೊಲೆ

ಸೇಡು = (ನಾ)	-	ಹಗೆ, ಮುಯ್ಯಿ
ಹಟ, ಹಠ = (ನಾ)	-	ಛಲ
ಹತ್ಯೆ, ಹತ್ಯಾಕಾಂಡ = (ನಾ)	-	ಕೊಲೆ
ಹಕೀಕತ್ತು = (ನಾ) (ಹಿಂ)	-	ವಾಸ್ತವಿಕ ಸ್ಥಿತಿ, ನಿಜತನ, ಸತ್ಯತೆ
ಹಡಬೆ ದಂಧೆ = (ನಾ)	-	ವೇಶ್ಯಾವಾಟಿಕೆ, ವ್ಯಭಿಚಾರ ನಡೆಸುವುದು
ಹಳ್ಳ ಹಿಡಿ = (ವಿ)	-	ದಾರಿ ತಪ್ಪು, ಸೆಳವಿಗೆ ಹೋಗು
ಹಾದರ, ಹಾದರಗಿತ್ತಿ = (ನಾ)	-	ವ್ಯಭಿಚಾರ, ವ್ಯಭಿಚಾರಿಣಿ
ಹಾಲಿಡಾನ್ = (ನಾ)	-	ಈಗಿನ ಮುತಾಲಿಕ, ಸದ್ಯದ ಲೀಡರ್
ಹುಕುಮತ್ = (ನಾ) (ಹಿಂ)	-	ನಿರ್ಣಯ, ಆಜ್ಞೆ, ಶಾಸನ
ಹೈಟೆಕ್ = (ನಾ) (ಇಂ)	-	ಹೆಚ್ಚಿನ ತಂತ್ರಜ್ಞಾನ, ನವೀನ ತಂತ್ರಜ್ಞಾನ
ಹೈಟೆಕ್ ಮಾಡೆಲ್ = (ನಾ) (ಇಂ)	-	ನವೀನ ತಂತ್ರಜ್ಞಾನದ ಮಾದರಿ

ಅನುಬಂಧ-೩

ಕ್ರೈಂ ಸ್ಟೋರಿ ಮಾದರಿಗಳು

"ಕ್ರೈಂಸ್ಟೋರಿ" ಉದಯ ಟಿ.ವಿ ೨೦.೦೨.೨೦೦೩ ಬುಧವಾರ (ರಾತ್ರಿ ೧೦.೦೦ ರಿಂದ ೧೦.೩೦)

("ಶಬ್‌ನಂ ಡೆವಲಪ್‌ಮೆಂಟ್ಸನ ಜೋಡಿ ಕೊಲೆಗೆ ಸಂಬಂಧಿಸಿದ ಕೇಸು")

ವರದಿಗಾರ : "ನಾನು ಆಸ್ಟ್ರೇಲಿಯಾದಿಂದ ಮಾತ್ನಾಡುತ್ತಾ ಇದೀನಿ. ರವಿಪೂಜಾರಿ ಅಂತಾ. ಈಗ ಬ್ಯಾಂಗಲೂರಿನಲ್ಲಿ ನಡೆದಂತಹ ಈ ಎರಡು ಮರ್ಡರ್‌ಗೆ ನಾನೇ ಹೊಣೆ. ಮರ್ಡರ್ ಮಾಡಿಸಿದ್ದು ನಾನೇ. ಮಾಡಿದ್ದು ನನ್ನ ಹುಡುಗರು." ಆಗ ನಾನು ಕೇಳಿದೆ; ಈ ಪಾಪ ಈ ಇನ್ನೋಸೆಂಟ್ಸ್ ಇಬ್ಬರು ಹುಡುಗುರ್ನ ನೀವ್ ಯಾಕ್ ಮರ್ಡರ್ ಮಾಡಿದ್ರಿ. ಅನ್ಯಾಯ ಅಲ್ವಾ ಇದು. ಏನೋ ಪಾಪ ಸಂಬಳಕ್ಕೆ ಕೆಲಸ ಮಾಡುವಂತ ಜನಾ ಇವರು. ಅಂತಾ ನಾ ಕೇಳಿದ್ದು ಹೌದು. ಅದಕ್ಕೆ ರವಿಪೂಜಾರಿ ಏನು ಹೇಳಿದ್ರೂ ಅಂದ್ರೆ; ನಮ್ಮ ಹುಡುಗರ್ನ ಅವರು ಅವಾಚ್ಯವಾಗಿ ಬೈದ್ರು. ಅವರು ರಿವಾಲ್ವಾರ್ ತಗಂದು ಒಳಗೆ ಹೋದಾಗ ಅವರು ರೆಸಿಸ್ಟ್ ಮಾಡಿದ್ರು. ಕೆಟ್ಟ ಪದಗಳಿಂದ ನಿಂದಿಸಿದ್ರು. ಸಿಟ್ಟಿನ ಭರದಲ್ಲಿ ಅವರಿಬ್ರೂನೂ ನಮ್ಹುಡ್ಗುರು ಕೊಂದು ಹಾಕಿದ್ರು. ಆದ್ರೆ Its most unfortunate ಆಗಬಾರದಾಗಿತ್ತು!"

"ಎಲ್ಲಿಯ ದಾವೂದ್ ಇಬ್ರಾಹಿಂ, ಎಲ್ಲಿಯ ಶೈಲಜಾ, ಎಲ್ಲಿಯ ಛೋಟಾರಾಜನ್, ಎಲ್ಲಿಯ ಸಮೀವುಲ್ಲಾ ಅವರಿಗೆ ಸಮೀವುಲ್ಲಾ ಸಂಪರ್ಕದಲ್ಲಿದ್ದಾನೆ ಅನ್ನೋ ಕಾರಣಕ್ಕೆ ರವಿಪೂಜಾರಿ ತನ್ನವರಿಂದ ಇವರ್‍ಯಾರ್‌ಗೋ ಗುಂಡು ಹಾರ್‍ಸ್ತಾನೆ, ಕೊಂದು ಬಿಡ್ತಾನೆ. ಅವರ ಜಗತ್ತಿನಲ್ಲಿ ದಯಾ, ದಾಕ್ಷಿಣ್ಯಗಳಿಗೆ ಜಾಗಾನೇ ಇಲ್ಲ. ಆ ವ್ಯಕ್ತಿ ಹೇಳಿದ ನಾನು ಆಸ್ಟ್ರೇಲಿಯಾದಿಂದ ಮಾತಾಡ್ತಾ ಇದೀನಿ, ರವಿಪೂಜಾರಿ. ಸಡನ್ನಾಗಿ ನನಗೆ ಫ್ಲ್ಯಾಶ್ ಆಯ್ತು. ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದಿರುವಂತಹ ಶಬ್‌ನಂ ಡೆವಲಪ್‌ಮೆಂಟ್ಸ್ ಸಮೀಯುಲ್ಲಾ ಅವರ ಆಫೀಸ್‌ನಲ್ಲಿ ನಡೆದಿರುವಂಥ ಒಂದು ಜೋಡಿ ಕೊಲೆ. ಫೈರ್ ಮಾಡಿ ಇಬ್ರುನಾ ಸಾಯ್ಸಿರುವ ಪ್ರಕರಣಕ್ಕೆ ಸಂಬಂಧಿಸಿದ ಹಾಗೆ ಈ ವ್ಯಕ್ತಿ ಮಾತಾಡ್ತಾ ಇದ್ದಾರೆ, ಅಂತಾ ಗೊತ್ತಾಯ್ತು. ಹೇಳಿ ಏನು ಹೇಳ್ಬೇಕಂತಾ ಇದ್ದೀರಿ. ಅಂತಾ ನಾನು ಕೇಳಿದೆ. ಅದಕ್ಕೆ ಅವರು ಈ ಎರಡು

ಕೊಲೆಗಳಿಗೆ ಹೊಣೆ ನಾನೇ. ನಾನೇ ಮಾಡಿದ್ದು. ನಾನು ನಮ್ಮ ಹುಡುಗರ್ನ ಬಿಟ್ಟು ಎರಡು ಕೊಲೆಗಳನ್ನು ಮಾಡಿಸ್ದೆ. ಆಗ ನಾನು ಕೇಳ್ದೆ. ಪಾಪ ಆ ಇಬ್ರು ಅಮಾಯಕ್ರನ್ನ ನೀವು ಯಾಕ್ ಮರ್ಡರ್ ಮಾಡಿದ್ರಿ. ಈ ವ್ಯವಹಾರಕ್ಕೂ ಅವರಿಗೂ ಏನ್ ಸಂಬಂಧ ಅಂತಾ ನಾ ಕೇಳ್ದೆ. ಅದಕ್ಕೆ ರವಿ ಪೂಜಾರಿ ಅನ್ನೋ ವ್ಯಕ್ತಿ ಆ ಕಡೆಯಿಂದ ಮಾತಾಡಿದ್ರು. ಅದೂ ಅದಾಗಿದ್ದು ಹಾಗಲ್ಲ. ಇಂಟೆನ್ಷನಲ್ ಅಲ್ಲ. ನಮ್ಮ ಹುಡುಗ್ರು ಒಳಗಡೆ ಹೋದಾಗ ಆ ಇಬ್ರು ಬಹಳ ಅವಾಚ್ಯ ಶಬ್ದಗಳಿಂದ ನಮ್ಮ ಹುಡುಗ್ರನ್ನ ನಿಂದಿಸಿದ್ರು. ತೀರಾ ಕೋಪೋದ್ರಿಕ್ತರಾದ ನಮ್ಮ ಹುಡುಗ್ರು ಅವರಿಬ್ರನ್ನ ಸುಟ್ಟು ಹಾಕಿದ್ರು. ಕೊಂದ್ಹಾಕಿದ್ರು. "ಗೋಲಿ ಮಾರ್‌ದೀಯಾ ಉನ್‌ಕೋ" ಅಂತಾ ಹೇಳಿದ್ರು.

ಇವತ್ತೂ ರವಿಪೂಜಾರಿ ಅನ್ನೋ ಪಾತಕಿಯ ಪರಮಗುರಿ ಆಗಿರುವ ಸಮೀವುಲ್ಲಾ ಕೂಡಾ ಸಜ್ಜನ ಅನ್ನಿಸಿಕೊಂಡಿಲ್ಲ. ಇವನ ಹತ್ರ ದುಡ್ಡಿದೆ ಅನ್ನೋ ಕಾರಣಕ್ಕೆ ಒಂದಷ್ಟು ಜನ ಜಯಕಾರ ಹಾಕಬಹುದು. ಆದ್ರೆ ಈತ ಮಾಡ್ತಾ ಇದ್ದ ಭೂಮಿ ವ್ಯವಹಾರ ಸಾಚಾ ಆಗಿರಲಿಲ್ಲ. ಪಾರ್ಟ್‌ಟೈಮ್ ರಾಜಕಾರಣಿ ಕೂಡಾ ಆಗಿರೋ ಸಮೀವುಲ್ಲಾ, ಭೂಗತ ಜಗತ್ತಿನ ನಂಟನ್ನು ಹೊಂದಿದ್ದಾನೆ. ಅದರಲ್ಲೂ ದಾವೂದ್ ಜೊತೆ ಸಂಪರ್ಕ ಹೊಂದಿದ್ದು ರವಿಪೂಜಾರಿ ಕಣ್ಣು ಕೆಂಪಗಾಗುವುದಕ್ಕೆ ಕಾರಣವಂತೆ.

ಆಗ ರವಿಪೂಜಾರಿ ಹೇಳಿದ್ದು ಏನೂ ಅಂದ್ರ, ಈ ಸಮೀವುಲ್ಲಾ ಅನ್ನೋ ವ್ಯಕ್ತೀನಾ ನಾನು ಬಿಡೋದಿಲ್ಲಾ. ಕೊಂದು ಹಾಕಿಬಿಡ್ತೀನಿ. ಅಷ್ಟೇ ಅಲ್ಲ; ರಾಜಕಾರಣಿಗಳಾಗಲಿ, ಜನಸಾಮಾನ್ಯರಾಗಲೀ ಯಾರು ಇವರಿಗೆ ಸಪೋರ್ಟ್ ಮಾಡ್ತಾರೆ ಅವರನ್ನು ಉಳಿಸೋದಿಲ್ಲ. ಕೊಂದ್ಹಾಕಿ ಬಿಡ್ತೀನಿ ಅಂತ ಹೇಳಿದ್ರು. ಕಾರಣ ಏನೂ ಅಂತ ನಾನ್ ಕೇಳ್ದೆ. ಆ ತರದ ದ್ವೇಷಕ್ಕೆ ಕಾರಣ ಏನು?\ ಆಗ ರವಿಪೂಜಾರಿ ಹೇಳಿದ್ದು 'ಡಿ' ಗ್ರೂಪ್‌ನ ಜೊತೆ ಅವರು ಶಾಮಿಲಾಗಿದ್ದಾರೆ. ಅಂದ್ರೆ "ಡಿ' ಗ್ರೂಪ್ ವಹಸೆ, ವಹಲೋಗ್ ಕಾಮ್ ಕರ್ ರಹೇ ಹೈ." ಅದಕ್ಕಾಗಿ ನಾನು ಅವರನ್ನು ಉಳಿಸೋದಿಲ್ಲಾ ಅಂತ ರವಿಪೂಜಾರಿ ಹೇಳಿದ್ದಾರೆ.

ಒಟ್ನಲ್ಲಿ ರವಿಪೂಜಾರಿಯ ಮುಖ್ಯ ಉದ್ದೇಶ ಇಲ್ಲಿ ಪೂಜಾರಿ ಹೆಸರಿನಲ್ಲಿ ಒಂದು ಭಯೋತ್ಪಾದನೆ ಸೃಷ್ಟಿ ಮಾಡೋದು. ಜಮೀನು ವ್ಯಾಪಾರದಲ್ಲಿ ಹಾಲೀ ಮಾಜೀ ಡಾನ್‌ಗಳ ಹೆಸರು ಬಳಕೆ ಆಗೋದು ಮಾಮೂಲಿ. ಅಲ್ಲಿ ತನ್ನ ಛಾಪನ್ನು ಹೊತ್ತೋದು ಪೂಜಾರಿಯ ಬಯಕೆ. ಮುಂದೇನಾಗಬಹುದು? ಅದಾದ ಮೇಲೆ ನಾ ಹೇಳಿದೆ ಮುಂದೆ ನೀವು ಬೆಂಗಳೂರ್ ಪೋಲಿಸ್ನೋರ್ಗೆ ಯಾಕೆ ಸರೆಂಡರ್ ಆಗೋದಿಲ್ಲ. ಅಂತಾ ನಾನು ಕೇಳಿದೆ. ನಾನ್ಯಾಕ್ ಸರೆಂಡರ್ ಆಗ್ಲಿ. ಬ್ಯಾಂಗಲೂರ್ ಪೋಲಿಸ್ನೋರ್‌ಗೆ ತಾಕತ್ ಇದ್ರೆ ಅವ್ರು ಹಿಡೀಲಿ, ದಾವೂದ್‌ನ ಹಿಡೀಲಿ, ಛೋಟಾ ಶಕೀಲ್‌ನ ಹಿಡೀಲಿ ಅವರೆಲ್ಲ ದೇಶದ್ರೋಹಿಗಳು. ನಾನು ಪರಮ ದೇಶಭಕ್ತ. ಹಾಗೆ ಹೀಗೆ ಇವರು ಮಾತಾಡೋ ಟ್ರೆಂಡ್ ಹೀಗಿತ್ತು. ಒಟ್ಟಾರೆಯಾಗಿ ನನಗೆ ಅಭಿಪ್ರಾಯ ಆಗಿದ್ದು ಏನೂ ಅಂದ್ರೆ? ಬೆಂಗಳೂರಿನ ರೀಯಲ್ ಎಸ್ಟೇಟ್ ದಂಧೆಯ ಮೇಲೆ ಹಿಡಿತ

ಸಾಧಿಸಲಿಕ್ಕೆ ಮುಂಬೈ ಪಾತಕಲೋಕ ತುದಿಗಾಲಲ್ಲಿ ನಿಂತಿದೆ. ಕಾರಣ ಇಲ್ಲಿ ಹೆಚ್ಚ್ತಾ ಇರುವಂಥ ಬೆಲೆಗಳು, ಭೂಮಿಯ ಬೆಲೆ ಮತ್ತು ಬೆಳೀತಾ ಇರುವಂತಾ ನಗರ ಪ್ರದೇಶ, ಇದು ಬಹುಶಃ ಮುಂದಾಗುವಂತಹ ಅನೇಕ ಅನಾಹುತಗಳಿಗೆ ಕೇವಲ ಮುನ್ನುಡಿ ಅಂತ ನನ್ನ ಭಾವನೆ. ನನ್ನ ಅಭಿಪ್ರಾಯ.

ಓಹೋ..... ರವಿಪೂಜಾರಿ ಜಪ್ಪಯ್ಯಾ ಅಂದ್ರೂ ಸರೆಂಡರ್ ಆಗೋದಿಲ್ಲಾ ಅಂತಾನ್ನೇ! ಈಗ ಆತ ಬ್ಯಾಂಗಲೂರು ಪೋಲಿಸ್ನೋರ ಬೇಟೆ ಆಗಿರಬಹುದು. ಆದರೆ ಹಲವಾರು ವರುಷಗಳಿಂದ ಮುಂಬಯಿ ಪೋಲಿಸಿನವರಿಗೆ ಚಳ್ಳೇಹಣ್ಣು ತಿನ್ನಿಸಿಕೊಂಡೇ ಬಂದಿರುವ ಪೂಜಾರಿ ಬಂಧನದ ವರಾ ಕೊಡೋದಕ್ಕೆ ಮಾತ್ರ ತಯಾರಿಲ್ಲ.

ಸರೆಂಡರ್ ಅನ್ನೋ ಮಾತೇ ಇಲ್ಲ. ಅರೆಸ್ಟಾದ್ರೆ ತೊಂದರೆ ಇಲ್ಲ. ಅದಕ್ಕೂ ಮೊದ್ಲು ದಾವೂದ್ ಹಾಗೂ ಶಕೀಲ್‌ನ ಕೊಲ್ಲಬೇಕಲ್ಲ, ಅನ್ನೋದು ರವಿಪೂಜಾರಿ ಹೇಳೋ ಮಾತು. ದಾವೂದ್ ಇಬ್ರಾಹಿಂ ಪಾಕಿಸ್ತಾನದಲ್ಲಿ ಸೆಟ್ಲಾಗಿ ಮಿಯಾಂಡರ್ ಜೊತೆ ಸಂಬಂಧ ಬೆಳಸ್ಕೊಂಡು ಕ್ರಿಕೆಟ್ ಆಡ್ತಾ ಇದ್ದಾನೆ. ಶಕೀಲ್ ಮತ್ಯಾವುದೋ ದೇಶದಲ್ಲಿದ್ದಾನೆ. ರವಿಪೂಜಾರಿ ಆಸ್ಟ್ರೇಲಿಯಾ ಅಂತಾನೆ. ಹೀಗೆ ಇವರುಗಳು ಎಲ್ಲೆಲ್ಲೋ ಇದ್ದುಕೊಂಡು ಕಂಟ್ರೋಲ್ ಮಾಡ್ತಾ ಇರೋದು ಭಾರತದ ಭೂಗತ ಜಗತ್ತನ್ನು. ಅದು ಈಗ ಬ್ಯಾಂಗಲೂರಿನ ತನಕ ಬಂದಿದೆ. ಮುಂದೆ ಇನ್ನೆಲ್ಲಿ ತನಕ ಹೋಗುತ್ತೋ ಕಾದು ನೋಡಬೇಕಷ್ಟೆ.

* * *

“ಕ್ರೈಂ ಸ್ಟೋರಿ” ಉದಯ ಟಿ.ವಿ ೨೧.೦೨.೨೦೦೭ ಬುಧವಾರ (ರಾತ್ರಿ ೧೦.೦೦ ರಿಂದ ೧೦.೩೦)

(“ಆರಾಧನಾ ಲೇಔಟ್‌ನ ಗಲಾಟೆಯ ಕೇಸು”)

“ಧಿಕ್ಕಾರ ... ಧಿಕ್ಕಾರ ... ಬೇಕೇ ಬೇಕು, ನ್ಯಾಯ ಬೇಕು. ಬೇಕೇ ... ಬೇಕು, ನ್ಯಾಯ ಬೇಕು.”

ವರದಿಗಾರ : “ಇದ್ಯಾವುದೋ ಕಾವೇರಿ ನೀರಿಗಾಗಿ ನಡೀತಾ ಇರೋ ಪ್ರತಿಭಟನೆ ಅಂದುಕೊಂಡ್ರಾ. ಖಂಡಿತಾ ಅಲ್ಲ. ಸೂರ್ ಇದ್ರೇ ತಾನೇ ನೀರು; ಅನ್ನೋ ಪರಿಸ್ಥಿತಿ ಇವರದ್ದು. ನಮ್ಮ ನೀರು, ನೆಲ, ಎಲ್ಲಾ ಪರಾಭಾರೆ ಆಗ್ತಾ ಇರೋ ಹೊತ್ತಲ್ಲಿ; ಈ ಜನಗಳಿಂದ ಇರೋ ಮನೆ ಜಾಗವನ್ನೇ ಕಿತ್‌ಕೊಳ್ಳೋದಕ್ಕೆ ಬಂದಿದ್ದಾನೆ ಒಬ್ಬ ತೋಲಾಂಡಿನಾಯ್ಕ. ಹೆಸರು ಶ್ರೀನಿವಾಸ ಪ್ರಸಾದ್!”

ವಕ್ತೃ : “ಕೊಟ್ಟೂರು ಗ್ರಾಮಪಂಚಾಯ್ತಿಗೆ ಸೇರಿರುವಂತಹ ಈ ಆರಾಧನಾ ಲೇಔಟ್ ಅಂತ ಇದೊಂದು ಬಡಾವಣೆ. ಈ ಆರಾಧನಾ ಲೇಔಟ್ ಅಂದರೆ ಇದು ಸೌತ್ ಸಿಟಿ ಪಕ್ಕದಲ್ಲೇ ಇದೆ. ಸೌತ್ ಸಿಟಿ ಪಕ್ಕದಲ್ಲಿರೋ ಲೇಔಟಲ್ಲಿ ಸಾವುರದಾ ಒಂಭೈನೂರಾ ಎಪ್ಪತ್ತೊಂಭತ್ತರಲ್ಲಿ ಶ್ರೀ ಎ.ಎಂ. ನಾರಾಯಣಸ್ವಾಮಿ ಎನ್ನೋರು ಶ್ರೀನಿವಾಸ ಪ್ರಸಾದ್ ಅವರಿಗೆ ಮಾರಿಬಿಟ್ಟಿದ್ರು. ಆ ನಾರಾಯಣಸ್ವಾಮಿ ಬಂದು ಬೇರೆ ಯಾರಿಗೋ ಜಿ.ಪಿ.ಎ. ಕೊಟ್ನಂತೆ. ಕೊಟ್ಬಿಟ್ಟು ಈಗ ಅದು ಎಲ್ಲಾ Eighty Six ಅಲ್ಲಿ ಮಾರಾಟ ಆಗಿದೆ. Eighty Six ನಲ್ಲಿ ಸೈಟು ಅಲಾಟ್ ಮಾಡಿ ಸೈಟುಗಳೆಲ್ಲಾ (86) ಎಯ್ಟೀಸಿಕ್ಸಲ್ಲೆಲ್ಲಾ ಮಾರಾಟ ಮಾಡಿದ್ದಾರೆ. ಮಾರಾಟ ಆದ್ಮೇಲೆ ಇಲ್ಲೆಲ್ಲಾ ನಾವು ಎಲ್ಲಾರು ಮನೆಗಳು ಕಟ್ಟಿಕೊಂಡು ಎಲ್ಲಾ ವ್ಯವಸ್ಥೆಗಳನ್ನು ಮಾಡ್ಕೊಂಡು ನೀರಿನ ವ್ಯವಸ್ಥೆ ಎಲ್ಲಾ ವ್ಯವಸ್ಥೆಯಿದೆ. ಎಲ್ಲಾ ಕೆಲಸ ಇದ್ದು ಮಾಡ್ಕೊಂಡು ಇಲ್ಲೆಲ್ಲಾ ಸುಮಾರು ನಾಗರೀಕರು ಬ್ಯಾಂಕಿಂದ ಸಾಲಾ ಪಡಕೊಂಡು ಬೇಕ್ಕಾದಷ್ಟು ಕಷ್ಟ ಬಿದ್ದು; ಇಲ್ಲಿ ಎಲ್.ಎನ್.ಟಿ (L.N.T) ವರ್ಕರ್ಸ್ ಎಲ್ಲಾ ಇದು ಮಾಡ್ಕೊಂಡು ಇಲ್ಲಿ ವಾಸವಾಗಿದ್ದಾರೆ. ಈ ಟೈಮಲ್ಲಿ ಇವ್ನು ಹಳೆ ಓನರ್ ಶ್ರೀನಿವಾಸ ಪ್ರಸಾದ್ ಒಂದು ಸಾವುರದಾ ಒಂಭೈನೂರಾ ಎಪ್ಪತ್ತೊಂಭತ್ತರಲ್ಲಿ ಮಾರಿಬಿಟ್ಟು; ಆಗ ಅವನು ಕಮ್ಮಿ ಬೆಲೆಗೆ ಮಾರಿಬಿಟ್ಟಿದ್ದಾ. ಈಗ ಇದು ಕಾರ್ಪೋರೇಷನ್‌ಗೆ ಸೇರಿಬಿಟ್ಟಿದೆ. ಸಿ.ಎಂ.ಸಿ.ಗೆ ಸೇರಿಬಿಟ್ಟಿದೆ ಅಂತ್ಹೇಳಿ ಬಿಟ್ಟು ಸುಮಾರು ದುಡ್ಡಿನ ಆಸೆ ಬಂದು ಕೆಲವು ಕಿಡಿಗೇಡಿಗಳನ್ನಾ ಇಲ್ಲಿ ಕಳಿಸಿ, ಇಲ್ಲಿನ ವಾತಾವರಣ ಕೆಡಿಸಿ, ನಮಗೆ ಪೇಪರ್ ಕೊಡು ಹಾಗೇ ಹೀಗೆ ಅಂತಾ ಎದಿರ್ಸೋಕೆ ಟ್ರೈ ಮಾಡ್ತಾ.”

ವರದಿಗಾರ : “ಮೊನ್ನೆ ಇದ್ದಕ್ಕಿದ್ದ ಹಾಗೆ ಒಂದಷ್ಟು ಜನ ಗೂಂಡಾಗಳು ಈ ಆರಾಧನಾ ಲೇಔಟ್‌ಗೆ ನುಗ್ಗಿ, ಈ ಆಸ್ತಿ ಶ್ರೀನಿವಾಸಪ್ರಸಾದ್‌ಗೆ ಸೇರಿದ್ದು ಅಂತಾ ಸಿಕ್ಕ ಸಿಕ್ಕಲ್ಲಿ ಬರೆದು ಹೋಗ್ತಾರೆ. ಜನಾ ಇದೇನಪ್ಪಾ ವಿಚಿತ್ರ! ಅಂತ ತಲೆ ಕೆರ್ಕೋತಾರೆ. ಸುಮಾರು ನಾಲ್ಕು ಎಕರೆ ವಿಸ್ತೀರ್ಣದ ಈ ಜಾಗವನ್ನು ಸಾವಿರದ ಒಂಭೈನೂರಾ ಎಂಭತ್ತಾರರಲ್ಲಿ ಈ ಜಾಗದಲ್ಲಿ ಒಟ್ಟು ತೊಂಭತ್ತೊಂಬತ್ತು ಸೈಟುಗಳನ್ನು

ಮಾಡಿ ಎಲ್ಲರಿಗೂ ಮಾರಿದ್ದ. ಆಗ ಸೈಟುಗಳ ಬೆಲೆ ಹೆಚ್ಚು ಕಡಿಮೆ ಇಪ್ಪತ್ತು ಸಾವಿರ. ಅದೇ ಸೈಟುಗಳ ಬೆಲೆ ಇವತ್ತು ಸರಿಸುಮಾರು ಇಪ್ಪತ್ತು ಲಕ್ಷ, ಮಾರಿದೋನ್ಗೆ ಹೊಟ್ಟೆಗೆ ಬೆಂಕಿ ಬೀಳುತ್ತಾ ಇಲ್ವಾ? ನೀವೇ ಹೇಳಿ?"

ವಕ್ತ : ಇತ್ತೀಚೆಗೆ ಏನಾಗಿದೆ ಅಂದ್ರೆ, ಇಡೀ ಇಂಡಿಯಾನೆ ಅಲ್ಲ ಏಷಿಯಾಗೆ ಕಂಪೇರ್ ಮಾಡಿದ್ರೆ ನಮ್ಮ ಬನ್ನಾರುಘಟ್ಟ ರೋಡ್ ಎಲೆಕ್ಟ್ರಾನಿಕ್ ಸಿಟಿ. ಬ್ಯಾಕ್ ಸೈಡ್ ಇರೋವಂಥ ಸಾಫ್ಟ್‌ವೇರ್ ಕಂಪನೀಸ್ ಇಡೀ ಇಂಡಿಯಾದಲ್ಲೇ ಅಲ್ಲಾ ಏಷಿಯಾದಲ್ಲೇ ಇಲ್ಲ. ಸೋ ಅದೇನಾಗಿದೆ ಆ ಕಂಪನೀಸ್ ಎಲ್ಲಾ ಇಲ್ಲಿ ಬಂದಾಗ ಅಕ್ಕ ಪಕ್ಕಾ ಯಾವುದು ರೆವಿನ್ಯೂ ಲ್ಯಾಂಡ್ ಇತ್ತು. ಅದನ್ನೆಲ್ಲಾ ಏನ್ ಮಾಡಿದ್ರು, ಸೈಟ್ ಮಾಡಿ, ಸೈಟ್ ಮಾಡಿ ಮಾರಿದ್ರು. ಏನಾಯಿತು ಅವತ್ತು ಎಂಭತ್ತಾರನೇ ಇಸ್ವಿಯಲ್ಲಿ ನೂರು ರೂಪಾಯಿ, ಐವತ್ತು ರೂಪಾಯಿ ಅಂಗೆ ಒಂದೊಂದು ಸ್ಕ್ವೇಯರ್ ಫೂಟ್‌ಗೆ ಮಾರಿಬಿಟ್ರು. ಇವತ್ತು ಸಾಫ್ಟ್‌ವೇರ್ ಜನರೇಶನ್‌ನಿಂದಾಗಿ ಏನಾಗಿದೆ ಅಂದ್ರೆ, ಇದು ನೂರು ರೂಪಾಯಿಗೆ ಇನ್ನೂರು ರೂಪಾಯಿಗೊಂದು, ಸಾವಿರೂಪಾಯಿ - ಎರಡು ಸಾವಿರೂಪಾಯಿವರೆಗೂ ಆಗಿದೆ. ಅವತ್ತು ಎಂಭತ್ತಾರನೇ ಇಸ್ವಿಯಲ್ಲಿ ಮಾರಿದಂಥ ವೋನರ್‌ಗೆ ಏನಾಗಿದೆ ಅಂದ್ರೆ, ಅವತ್ತು ನಾನು ಇನ್ನೂರೂಪಾಯಿಗೆ ಮಾರಿದ್ರೆ ಇವತ್ತು ಎರಡುಸಾವಿರ ರೂಪಾಯಿ ಆಯ್ತು. ನಾ ಏನಾದರೂ ಹೋಗಿ ಇವರಿಗೇನಾದರೂ ಒಂದು ಧಮಕಿ ಕೊಟ್ರ ಅಂದ್ರೆ ನನಗೆ ನಾನೇ ಎಷ್ಟಾನ ಅಂದ್ರೆ ನನಗೆ ಪಾಲಿಗೆ ಬಂದದ್ದು ಪಂಚಾಮೃತ ಒಂದು ಐವತ್ತು ಲಕ್ಷನೋ, ಅರವತ್ತು ಲಕ್ಷನೋ ತೊಂಭತ್ತೊಂಬತ್ತು ಸೈಟಿಂದ ಒಂದೊಂದು ಲಕ್ಷ ಅಂದರೂ ಅದು ಒಂದು ಕೋಟಿ ರೂಪಾಯಿ ಆಯ್ತು. ಅದು ಬರಬೇಕು. ಆತರ ಒಂದು ಛಾನ್ಸ್ ತಗೊಂಡು ಬಂದಷ್ಟು ಬರ್ಲಿ ಅಂದ್ಬಿಟ್ಟು ಪ್ರಯತ್ನ ಬಿದ್ದು ಈ ದುಡ್ಡಿಗೋಸ್ಕರನೇ ಅವ್ರು ಮಾಡಿರೋದು ಇನ್ಯಾವ ಕಾರಣಾನೂ ಇಲ್ಲ."

ವರದಿಗಾರ : "ಬೆಂಗಳೂರಿನಲ್ಲಿ ಭೂಮಿ ಬೆಲೆ ಈ ಪಾಟಿ ಏರುತ್ತೆ ಅಂತ ಯಾರಿಗ್ಗೊತ್ತಿತ್ತು. ಸಾವಿರದ ಬೆಲೆ ಲಕ್ಷಾ ಆಗಿದೆ. ಲಕ್ಷದ ಬೆಲೆ ಕೋಟಿ ಆಗಿದೆ. ಏಷ್ಟೇ ಆಗಲಿ ಒಂದ್ಸಲ ಮಾರಿದ ಮೇಲೆ ಅದರ ಕತೆ ಮುಗೀತು. ಆದರೆ ಮುಗೀತು ಅಂತಾ ಶ್ರೀನಿವಾಸಪ್ರಸಾದ ಸುಮ್ನೇ ಕೂರೋದಿಲ್ಲಾ. ಪೇಪರ್‌ನಲ್ಲಿ ಒಂದು ನೋಟೀಸು ಹಾಕ್ಸಿ ಮಾರನೇ ದಿನಾನೇ ಆರಾಧನಾ ಲೇಔಟ್‌ಗೆ ಗೂಂಡಾಗಳನ್ನು ಬಿಟ್ಟಿದ್ದಾನೆ."

ವಕ್ತ : 'ಕಳೆದ ತಿಂಗಳು ಇಪ್ಪತ್ತೆರಡನೇ ತಾರೀಖು ಸುಮಾರೊಂದು ಮೂರುಗಂಟೆ ಅಷ್ಟೊತ್ತಿಗೆ ನಮ್ಮ ವೆಲಫೇರ್ ಅಸೋಸಿಯನ್ನಿನ ಪದಾಧಿಕಾರಿಗಳು ಕೆಲವಾರು ಅನಾಮಧೇಯ ವ್ಯಕ್ತಿಗಳ್ನಾ ಆ ಕಾರುಗಳಲ್ಲಿ ಬಂದು ನಮ್ಮ ಕೆಲವು ಬಿಲ್ಡಿಂಗ್‌ಗಳ ಮೇಲೆ ಅವರು ಬರಹಗಳನ್ನು ಬರೆಯುತ್ತಾ ಇದ್ದರು. ಅದು ಏನು ಅಂತಾ ಕೇಳುವಾಗ; ಅವ್ರು ಹೇಳಿದ್ರು ನೀವು ನೆನ್ನೆ ದಿನ ನಮ್ಮ ನೋಟೀಸ್ ನೋಡಲಿಲ್ವಾ? ನಮ್ಮ ಶ್ರೀನಿವಾಸಪ್ರಸಾದ್ ಅವರು ಆ ಈ ತರ ಪೇಪರ್‌ನಲ್ಲಿ ಒಂದು ನೋಟೀಸ್ ಪಬ್ಲಿಕ್ ನೋಟೀಸ್

ಕೊಟ್ಟಿದ್ದಾರೆ. ಅದು ಅವರ ಪ್ರಕಾರ ಇದೆಲ್ಲಾ ಕೆಲವು ವ್ಯಕ್ತಿಗಳು ಇದನ್ನೆಲ್ಲಾ ಲೇಔಟ್ ಮಾಡಿ ಆ ಒಂದು ... ಬೇರೆ ಬೇರೆ ವ್ಯಕ್ತಿಗಳಿಗೆ ಮಾರಿದಾರೆ. ಆದರೆ ಅದೆಲ್ಲಾ ನ್ಯಾಯಬದ್ಧವಾಗಿ ಇಲ್ಲಾ ಅಂತೇಳಿ ಹೇಳುವಾಗ - ಆದರೆ ಪೇಪರ್ ನೋಟೀಸ್ ನೋಡಲಾಗಿ ಅದರ ಪ್ರಕಾರ ಅಂತೇಳಿ ಇಡೀ ನಮ್ಮ ೯೯ ಸೈಟ್ಸ್ ಅಥವಾ ನಾಲಕ್ಕೆಕರೆ ಏನ್ ಜಾಗ ಇದೆ ಅವೆಲ್ಲಾ ಶ್ರೀನಿವಾಸ ಪ್ರಸಾದ ಅವರು ಯಾರಿಗೂ ಮಾರಿಲ್ಲ. ಅಂತೇಳಿ ಒಂದಿದು ಕೊಟ್ಟಿದಾರೆ.'

ಮಹಿಳೆ ೧ : "ಈಗ ಅವ್ರು ಗೂಂಡಾಗಳು ಬರ್‍ತಾರೆ. ಹೆದ್ರುಸ್ತಾರೆ. ನಮ್ದು ನಮ್ದು ಜಾಗ ಅಂತ ಹೇಳ್ತಾರೆ. ನಾವು ಹೇಂಗ್‌ಬುಟ್ ಹೋಗ್ಬೇಕು, ಗಂಡಸ್ರು ಇರುವಾಗ ಬರ್‍ಬೇಕು, ಲೇಡೀಸ್ ಇರುವಾಗ ಬಂದು ಹೆದ್ರುಸುದ್ರೆ ಸರಿಯೇ? ಗಂಡಸ್ರಾ ಅವ್ರು?"

ಮಹಿಳೆ ೨ : "ನಮ್ಮ ಯಜಮಾನ್ರು ಕೆಲಸಕ್ಕೆ ಹೋಗಿದ್ರು ಸಾರ್. ಅವ್ರು ಬಂದು ನಮ್ಗೆ ಹೆದ್ರಿಸಿದ್ರು. ನೀವು ಪೇಪರ್ ಕೊಡಿ ಅಂತ ಕೇಳಿದ್ರು. ನಮ್ಗೆ ಗೊತ್ತಿಲ್ಲಾ ಅಂತಾ ಹೇಳ್ದಿವು ನಾವು. ಅದಕ್ಕೆ ನೀವು ಇರ್‍ರೀ ನೀವು; ನಾವು ಬಂದು ನಮ್ಗೆ ತೊಂದರೆ ಕೊಡ್ತೀವಿ ಅಂತಾ ಹೇಳಿದ್ರು."

ಮಹಿಳೆ ೩ : "ನಾವು ಇಪ್ಪತ್ತು ವರ್ಷ ಆಯ್ತು ನಾವು ಸೈಟ್ ತಗೊಂಡು. ಇಪ್ಪತ್ತು ವರ್ಷದ ತನಕ ಯಾರೂ ಬರಲಿಲ್ಲ. ಅವಾಗ ನಾವು ಸೈಟ್ ರಿಜಿಸ್ಟರ್ ಮಾಡಿ ಕೊಡಿ ಅಂತಂದ್ರೆ ಅವಾಗ ಆಗೋದಿಲ್ಲಾ ಅಂದ್ಬಿಟ್ರು. ಮೂವತ್ತು ಸಾವರಾ ತಗೊಂಡ್ರು. ಎರಡು ಸೈಟಿಗೆ ಅರವತ್ತು ಸಾವಿರಾ ಕೊಟ್ವಿ ನಾವು. ಕೊಟ್ಬಿಟ್ಟು ನಾವು ರಿಜಿಸ್ಟರ್ ಮಾಡಿಕೊಂಡ್ವಿ. ಇಷ್ಟು ದಿವಸ ಇಲ್ಲ, ಈವಾಗ ಬಂದ್ಬಿಟ್ಟು ಅವ್ರು ಹೆಸರು ಎಲ್ಲಾ ನಮ್ಮದು ಸೈಟು ಅಂದು ಬರದುಬಿಟ್ಟು ಹೋಗಿದ್ದಾರೆ ಸಾರ್. ನಮ್ಗೆ ತುಂಬಾ ಭಯ ಆಗ್ತೈತೆ ಸಾರ್. ಇಲ್ಲಿ ಇದು ಮಾಡೋದಕ್ಕ ಇದ್ನ ಇದ ಮಾಡಿಕೊಡ್ಬೇಕು."

ವರದಿಗಾರ : "ಆದ್ರೆ ಆರಾಧನಾ ಲೇಔಟ್‌ನ ಜನಾ ಹೆದರೋದಿಲ್ಲ. ಎಲ್ಲಾ ಒಗ್ಗಟ್ಟಾಗಿದ್ದಾರೆ. ಶ್ರೀನಿವಾಸಪ್ರಸಾದ ಕಳ್ಸಿದಾ ಗೂಂಡಾಗಳನ್ನು ಪೊಲೀಸ್‌ನವರು ಅರೆಸ್ಟ್ ಮಾಡಿದ್ದಾರೆ. ಈಗ ಹಿಂದೆ ಮಾರಿದ ಸೈಟುಗಳ ದುಡ್ಡಿನ ವಿಚಾರದಲ್ಲಿ ತಗಾದೆ ತಗ್ದ್ರೆ ತಕ್ಕ ಪಾಠ ಕಲಿಸಲೇ ಬೇಕು ಅಂತಾ ಜನ ಕೂಡಾ ತಯಾರಾಗಿದ್ದಾರೆ. ಅದಕ್ಕೆ ಈ ಹೋರಾಟ ಪ್ರತಿಭಟನೆ."

"ಬೇಕೇ ಬೇಕು ... ನ್ಯಾಯ ಬೇಕು... ಬೇಕ್ಕೇ ಬೇಕು ... ನ್ಯಾಯಾಬೇಕು... ನಮ್ಮದೋ ನಮ್ಮದೋ ಈ ಆರಾಧನಾ ನಮ್ಮದು. ನಮ್ಮದೋ ನಮ್ಮದೋ ಈ ಆರಾಧನಾ ಲೇಔಟ್ ನಮ್ಮದೋ. ಬೇಕೇ ಬೇಕು ನ್ಯಾಯ ಬೇಕು. ಬೇಕ್ಕೇ ಬೇಕು ... ನ್ಯಾಯ ಬೇಕು!

* * *

"ಕ್ರೈಂ ಸ್ಟೋರಿ" ಉದಯ ಟಿ.ವಿ ೨೨.೦೨.೨೦೦೭ ಗುರುವಾರ (ರಾತ್ರಿ ೧೦.೦೦ ರಿಂದ ೧೦.೩೦)

("ರಮೇಶನ ಕೊಲೆ ಕೇಸು")

ವರದಿಗಾರ : "ಆತ್ಮೀಯ ವೀಕ್ಷಕ ಮಿತ್ರರಿಗೆಲ್ಲ ನಿಮ್ಮ ಕಾಕತ್ಕರ್ ಮಾಡುವ ಸಲಾಮ್. ಜೊತೆಗೆ ಇವತ್ತಿನ ವಿಶೇಷ ಸಂಚಿಕೆಗೆ ವೆಲ್‌ಕಮ್. ಕ್ರೈಂ ಸ್ಟೋರಿಗೆ ಸಿಕ್ಕ ಈ ಘಟನೆ ನಡೆದದ್ದು, ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ. ಮೊದ್ಲಿಗೇ ಒಂದು ಶ್ಯಾಂಪಲ್ ಬಿಟ್‌ನೋಡಿ ......

"ನಮ್ಮ ತಂಡ ಈ ಹುಡುಗನನ್ನು ಮಾತಾಡಿಸಿದ್ದು ರಿಮ್ಯಾಂಡ್‌ಹೋಂನಲ್ಲಿ. ಈ ಹನ್ನೊಂದು ವರ್ಷದ ಹುಡುಗ ರಿಮ್ಯಾಂಡ್‌ಹೋಂಗೆ ಯಾಕ್ ಬಂದಾ ಅಂತೀರಾ? ಈತನ ಮೇಲಿದೆ ಕೊಲೆ ಆರೋಪ. ಅದೂ ಅಪ್ಪನ ಕೊಲೆಯಲ್ಲಿ ಭಾಗಿಯಾದ ಆರೋಪ. ಹೈತಲಗಾ! ಇವನ ಅಪ್ಪ ರಮೇಶನನ್ನು ಕೊಂದವರು ಯಾರು ಅಂತೀರಿ? ವಿಜಯಲಕ್ಷ್ಮಿ. ಮುವತ್ತು ವರ್ಷದ ವಿಜಯಲಕ್ಷ್ಮಿಯೇ ರಮೇಶನನ್ನು ಕೊಂದು ಹಾಕಿದ್ದಾಳೆ. ಇವರಿಬ್ಬರಿಗೂ ಸಂಬಂಧ ಏನು ಅಂತೀರಾ. ಇವಳು ಕೊಲೆಯಾದ ರಮೇಶನ ಖಾಸಾ ಹೆಂಡತಿ. ಈಗ ನಿಮ್ಮ ಮುಂದೆ ಮಾತಾಡಿದ್ನಲ್ಲ ಮೋಹನ್ ಆತನ ಸ್ವಂತ ತಾಯಿ. ಇಷ್ಟಾಗೀ ವಿಜಯಲಕ್ಷ್ಮಿ ರಮೇಶನನ್ನು ಯಾರ ಒತ್ತಾಯಕ್ಕೂ ಮದುವೆಯಾಗಲಿಲ್ಲ. ರಮೇಶ ಕೂಡಾ ಅವಳನ್ನು ಬಲವಂತಕ್ಕೆ ಮದುವೆಯಾಗಲಿಲ್ಲ. ಇವರು ಎರಡೂ ಮನೆಗಳ ಮಾತನ್ನು ದಿಕ್ಕರಿಸಿ ಲವ್ ಮಾಡಿ ಅಂತರ್‌ಜಾತಿಯ ಮದುವೆಯಾದವರು."

ವಕ್ತ್ರ : "ನಾವು ನಾಲ್ಕು ಜನ ಗಂಡು ಮಕ್ಕಳು. ಒಂದು ಹೆಣ್ಣು. ಈಗ ಒಂದು ಹುಡಗೀನಾ ನಾವು ಕೊಳ್ಳೇಗಾಲಕ್ಕೆ ಕೊಟ್ಟಿದ್ದೀವಿ. ನಾವು ನಾಲ್ಕು ಜನದಲ್ಲಿ ನಾನು ಮತ್ತೆ ನನ್ನ ತಮ್ಮ ಇನ್ನೊಬ್ಬಾ ಇರೋನು. ಬೆಂಗಳೂರಲ್ಲಿದ್ದಾನೆ. ನಾವಿಬ್ಬರೂ ಬೆಂಗಳೂರಲ್ಲಿರೋದು. ಇನ್ನು ನಮ್ಮ ತಮ್ಮಂದಿರಿಬ್ಬರೂ ಇಲ್ಲಿ ನಮ್ಮ ಹುಣಿಸೆ ಹಳ್ಳಿಯಲ್ಲಿದ್ರು. ಅವರಿಬ್ರೂ ಇರಬೇಕಾದ್ರೆ ಇಲ್ಲಿ ಜಮೀನು ನೋಡಿಕೊಂಡು ಸ್ವಲ್ಪ ಜಮೀನಿದೆ ಆ ಜಮೀನು ನೋಡಿಕೊಂಡು ವ್ಯವಸ್ಥೆ ಮಾಡಿಕೊಂಡಿದ್ರು. ಅವ್ರು ಏನ್ ಮಾಡಿದ್ರು ಹಿಂಗೆ ಇರಬೇಕಾದ್ರೆ. ಇದನ್ನು ಸ್ವಲ್ಪ ಈ ಸಣ್ಣ ಪುಟ್ಟ ಕಾಂಟ್ರಾಕ್ಟು ಮಾಡ್ಸೋದು. ಎಲ್ಲಿ ಈ ಇದು ಇದೆಯಲ್ಲಾ ಈ ಎಸ್ಟೇಟ್‌ಗಳಲ್ಲಿ ಸಣ್ಣ ಸಣ್ಣ ತೋಟಗಳಲ್ಲಿ, ಅಲ್ಲಿ ಇಲ್ಲಿ ಅಂತಂದ್ಬಿಟ್ಟು ಮಾಡ್ತಾ ಇದ್ರ. ಆ ... ಮಾಡ್ತಾ ಇರಬೇಕಾದ್ರೆ ಈ ಹುಡ್ಗೀನು ಅಲ್ಲಿ ಕೆಲಸಕ್ಕೆ ಬರ್ತಾ ಇದ್ಲು."

ವರದಿಗಾರ : "ವಿಜಯಲಕ್ಷ್ಮಿ ರಮೇಶನ ಬಾಡೀ ನೋಡಿ ಮರುಳಾದ್ರೆ, ರಮೇಶ ಅವಳ ಮೋಡಿಗೆ ಬಿದ್ಹೋದ. ಕೊನೆಗೆ ಇಬ್ರೂ ಕೂಡಿ ಜೋಡಿ ಆಗೋಣಾಂತ ಡಿಸೈಡ್ ಮಾಡ್ತಾರೆ." ವಿಜಯಲಕ್ಷ್ಮಿ ಅಂತಂದುಬುಟ್ಟು ಕೆಲ್ಸಕ್ಕ ಬರ್ತಾ ಇದ್ಲು. ಅವಳಿಗೂ ಇವನಿಗೂವೆ ಲವ್ ಸ್ಟಾರ್ಟ್ ಆಗಿದೆ. ಲವ್ ಸ್ಟಾರ್ಟ್ ಆಗಿಬುಟ್ಟು ಇದು ನಮ್ಗೇ ಗೊತ್ತಾಗಿಲ್ಲ. ಇದ ಈತರ ಹಾಂಗೆ ಹೀಂಗೆ ಅಂತಾ ಯಾರೂ ಇಲ್ಲಿ

ಸಾಮಾನ್ಯವಾಗಿ ಹಳ್ಳಿಯಲ್ಲಿ ಹೇಳೋಕೆ ಬರೋದಿಲ್ಲ. ಒಂದಿವಸ ಏನ್ ಮಾಡಿದಾನೆ ಬಂದಾ ಇವ್ನು. ಬಂದ್‌ಬಿಟ್ಟು ಈತರಾ ನಾನು ಒಂದು ಹುಡ್ಗೀನಾ ಪ್ರೀತಿಸ್ತಾ ಇದೀನಿ. ಹಾಗೇ ಹೀಗೆ ಅಂತಂದ್ಬಿಟ್ಟು ನಮ್ಗೆ ಹೇಳ್ದ. ಅವಾಗ ನಾವೇನ್ ಮಾಡಿದಿವಿ, ಏನ್ ಕ್ಯಾಸ್ಟ್, ಏನು ಎತ್ಲಂತಂದ್ಬಿಟ್ಟು ಈ ಹಳ್ಳಿಯಲ್ಲಿ ಅಂದ್ಮೇಲೆ ಇವೆಲ್ಲಾ ಇದ್ದೇ ಇರುತ್ತೆ. ಕೇಳಿದ್ವಿ. ಕೇಳಿದ್ರೆ ಅವನೇನ್ ಮಾಡಿದಾನೆ ಮದ್ವೆ ಮಾಡ್ಕೋಬೇಕು ಅಂತಾ ನಾನು ಪ್ರೀತಿಸ್ತಾ ಇದೀನಿ ಅಂತ ಹೇಳಿದ್ನಲ್ಲಾ. ನಾನೇನ್ ಮಾಡ್ದೆ ಇಲ್ಲಾ ಇದಕ್ಕಾಗಲ್ಲ ಅಂತಂದ್ಬಿಟ್ಟು ನಮ್ಮ ಕುಟುಂಬದವರೆಲ್ಲರೂ ಅಷ್ಟೇನೇ. ಬೇರೆ ಕ್ಯಾಸ್ಟ್ ಹಾಂಗೆ ಹೀಂಗೆ ಅಂದ್‌ಬುಟ್ಟು ಇಲ್ಲಿ ಇವೆಲ್ಲಾ ಹಳ್ಳಿಯಲ್ಲಿ ಆಗಲ್ಲಪ್ಪಾ ಬ್ಯಾಡಾ ಮತ್ತಿ ಆ ಹುಡುಗಿ ಕ್ಯಾರೆಕ್ಟರ್ ಸರೀ ಇಲ್ಲ. ಅವರೆಲ್ಲೋ ತಮಿಳ್ನಾಡಿನಿಂದ ಬಂದು ಸೇರಿಕೊಂಡಿರೋರು. ಇವತ್ತಿರ್ತಾರೆ ನಾಳೆ ಇನ್ನೊಂದು ಕಡೆ ಹೋಗ್ತಾರೆ. ಆ ಸವಾಸನೇ ಬ್ಯಾಡ. ನಾನ್ಯಾಕೆ? ಹೆಣ್ಣು ಕೊಡೋರಿಲ್ವಾ ಹಾಗೇ ಹೀಗೆ ಅಂತಂದ್ಬಿಟ್ಟು ನಾವು ಇರೋ ವಿಷಯಾನೆಲ್ಲ ಹೇಳಿದಿವಿ.

ವರದಿಗಾರ : "ಓಹೋ ... ರಮೇಶ ಹಾಗೂ ವಿಜಯಲಕ್ಷ್ಮಿ ಮದ್ವೆಗೆ ಮನೆಯವರು ಒಪ್ಪಿಗೆ ಕೊಡೋದಿಲ್ಲ. ಒಪ್ಪದೇ ಇದ್ರೆ 'ಕತ್ತೆ ಬಾಲ ಕುದುರೆ ಜುಟ್ಟು' ಅಂತಾ ಜೂಟ್ ಹೇಳಿ ಓಡಿ ಹೋದವರು ಮತ್ತೆ ಒಂದು ವರ್ಷ ಕಣ್ಗೆ ಬಿದ್ರೆ ಕೇಳಿ."

ವಕ್ತೃ : ಇವನದ್ರು ವಿರುದ್ಧವಾಗ್ಯೂವೇ ಇವನು ಆಯ್ತಣ್ಣಾ ಅಂತಾ ಹೇಳಿ ಹೋದವನು ಮತ್ತೆ ಸ್ವಲ್ಪ ದಿವಸದ ನಂತರ ಇವ್ನು ಎಲ್ಲೋ ಮದ್ವೆ ಮಾಡ್ಕೊಂಡಿದಾನೆ.

"ರಮೇಶ ಮಗನ ಜತೆಗೆ ಸೇರಿಕೊಂಡು ಪಟಾಕಿ ಹೊಡದು ಆನಂದಪಟ್ಟಿದ್ದೇ ಪಟ್ಟಿದ್ದು. ಆಗ ಅವನಿಗೆ ದೇವರಾಣೆ ಗೊತ್ತಿಲ್ಲ. ತಾನು ಇನ್ನೊಂದು ಎರಡು ಗಂಟೇಲಿ ಕೊಲೆ ಆಗಿ ಸಾಯ್ತಿ ನೀ ಅಂತಾ ... ಪಟಾಕಿ ಸಿಡೀತು. ಹಬ್ಬ ಮುಗೀತು. ಬೆಳಗಾಗೋ ಹೊತ್ತಿಗೆ ರಮೇಶನ ಪ್ರಾಣಾ ಕೂಡಾ ಹೋಗಿತ್ತು."

'ಸರಿ, ನಾವ್ ಏನ್ ಮಾಡಿದ್ವಿ ಹಬ್ಬಾ ಅವತ್ತೆಲ್ಲಾ ನಾವು ಮನೆ ಹತ್ರಾನೇ ನಮ್ಮನೇಲೂ ಹಬ್ಬ ಅಲ್ವಾ, ನಾವು ಎಲ್ಲಾ ಸಂತೋಷವಾಗೇ ಇದ್ವಿ. ನಮ್ಗೆ ಈತರ ಅಂತಾ ಗೊತ್ತೇ ಇಲ್ಲ. ಆಮ್ಯಾಲೆ ಬೆಳಿಗ್ಗೆ ನಾವು ಏನ್ ಮಾಡಿದ್ವಿ. ಇವನು ಬೆಳಿಗ್ಗೆ ಕೂಗೋ ಹಬ್ಬ ಅಲ್ವಾ ಸಾರ್. ಬೆಳಿಗ್ಗೆ ದಿವಸ ನಾವು ಎದ್ದು ಬಿದ್ದು ಮಾಮೂಲಿಯಂತೆ ಹಬ್ಬ ಇದ ಮಾಡೋನಂತ ನಾವು ಏನ್ ಮಾಡಿದ್ವಿ ಹೊರಗಡೆ ಹೋದ್ವಿ. ಅವಾಗ ಅಲ್ಲೇ ಪಕ್ಕದ ಮನೆ ಲಿಂಗಾಯತ ಮನೆ ಹುಡುಗ ಒಬ್ಬ ಗದ್ದೆಗಂತ ಬರ್ತಾ ಇದ್ದ. ಬರ್ತಾ ಇದ್ದವನು ಏನ್ ಮಾಡದ್ನೆ, ಅವ್ನು ನೋಡಿದ್ದಾನೆ. ರೇವಣ್ಣಾ ... ರೇವಣ್ಣಾ ... ಅಂತ ಏಳ್ತಿದಾನೆ ಸಾರ್ ಆಮೇಲೆ ಅವ್ನು ಎದ್ದಿಲ್ಲ ಹೋ ... ಅಂತಾ ಕಿರ್ಚಿಗೊಂಡು ಬಂದು ನಮೀಗೆ ಹೇಳ್ದಾ ಸಾರ್. ಆಮೇಲೆ ನಾನು ಏನ್ ಮಾಡ್ದೆ ಗದ್ದೆಗಿಂತ ಹೋಗುತ್ತಿದ್ದವ್ನ ನಾನು ಏನಾಯ್ತು ಅಂದೆ. ರೇವಣ್ಣ ಬಿದ್ದು ಹೋಗಿಬಿಟ್ಟಿದೆ. ಹಿಂಗಾಗಿದೆ ಅಂದ. ಇಷ್ಟು ಬೆಳಿಗ್ಗೇಲೆ ಹೇಗೆ ಆಯ್ತು? ಏನಾಯ್ತು? ಅಯ್ಯೋ ಅಂತ

ಕಿರುಚಿಕೊಂಡು ನಾವೆಲ್ಲಾ (5-6) ಐದಾರು ಜನ ನಮ್ಮ ಕಡೆ ಹುಡುಗ್ರು ಎಲ್ಲಾ ಓಗಿದ್ವಿ ಸಾರ್. ಹೋಗಿ ನೋಡ್‌ಬೇಕಾದರೆ ಇಲ್ಲೊಂದು ಬಾಡಿ ಬಿದ್ದಿತ್ತು. ನಮ್ಮನೆ ಪಕ್ಕ ಬೈಕ್ ಬಿದ್ದಿತ್ತು. ಇದು ಬಿದ್ದಿತ್ತು. ನಾವು ನೋಡಿದ ತಕ್ಷಣ ಗಾಬರಿ ಆದ್ವಿ ಸಾರ್. ಯಾವ ತರ ಹಿಂಗಾಯ್ತು ಅನ್ನೋದೇ ಗೊತ್ತಾಗಲಿಲ್ಲ ಸಾರ್. ಏನ್ ಮಾಡಬೇಕು ಅಂತಾ ತೋಚಲಿಲ್ಲ ಸಾರ್. ನಾವೇನ್ ಮಾಡಿದಿವಿ ಸೀದಾ ಎತ್ಗೊಂಡ್ವಿ ಸೀದಾ ಮನೆ ಹತ್ರ ತಗಂಡ್‌ಬಿಟ್ಟು ಬಂದ್ವಿ ಸಾರ್. ಆಮೇಲೆ ತಗಂದ್‌ಬಂದು ಅಳ್ತಾ ಎಲ್ಲಾ ಸೇರ್‌ಕೊಂಡು ಇದ್ ಮಾಡ್ಕೊಂಡು ತಗಂಬಂದು ಮನೆ ಹತ್ರ ಹಾಕಿದ್ವಿ ಸಾರ್. ಹಂಗೆ ಸುಮಾರು ಜನ ಹಿಂಗೆ ಎಲ್ಲಾ ಬರಾಕಾಯ್ತು. ನಮ್ಮಣ್ಣ ಅವರು ಎಲ್ಲಾ ಬಂದ್ರು ಸಾರ್.'

ವರದಿಗಾರ : ಸಕಲೇಶಪುರದ ಹುಣಸೇಹಳ್ಳಿಯ ಪ್ರತಿಯೊಬ್ಬರೂ ಆಶ್ಚರ್ಯಪಟ್ಟಿದ್ರು. ಅಂತಾ ಗಟ್ಟಿಮುಟ್ಟಾದ ಮನಸಾ ಅದು ಹ್ಯಾಗಪ್ಪ ಇದ್ದಕ್ಕಿದ್ದ ಹಾಗೇ ಸತ್ತ್ಹೋದಾ ಅಂತಾ ಪ್ರತಿಯೊಬ್ರು ಪ್ರಶ್ನೆ ಕೇಳ್ತಾ ಇದ್ರು.

ನಾವು ಬೆಂಗಳೂರಿಂದ ಬಂದ ತಕ್ಷಣವೇ ಬಾಡೀ ನೋಡಿದ್ವಿ. ಬಾಡಿ ನೋಡಿದ ತಕ್ಷಣ ಅವ್ನು ಸತ್ಹೋದವನ್ನಂಗೇ ಕಾಣಿಸ್ತಿಲ್ಲ. ನಿದ್ದೆ ಮಾಡ್ತಾವ್ನೇ ಅನ್ನಂಗಿತ್ತು. ಆಮೇಲೆ ನಮ್ಗ ಏನು ಡೌಟೇ ಬರ್ಲಿಲ್ಲ. ಆಮೇಲೆ ಇಷ್ಟು ಆಕ್ಸಿಡೆಂಟ್ ಆಯ್ತಂದ್ರೆ ಒದ್ದಾಡಿರಬೇಕು, ಎಲ್ಲೋ ಏನಾರ ಆಗಿರಬೇಕು. ಇದು ನೋಡಿದ್ರೆ ಸ್ಟೈಲಾಗಿ, ಆರಾಮ ಮಲಗಿದಂಗೆ ಐತೆ. ಕಣ್ ಮುಚ್ಚಿಗೆಂಡಿರೋದು ನೋಡಿದ್ರೆ, ಆ ಫೋಟೋಗಳೆಲ್ಲಾ ನೋಡಿ ಒಂಥರಾ ಕ್ಲೀನಾಗಿ ಇವ್ನು ಸತ್ತ್ಹೋಗವ್ನೇ ಅಂತಾ ಯಾವದೇ ಕಾರಣಕ್ಕೂ ಡೌಟ್ ಬರ್ತಾ ಇಲ್ಲ. ಆಮೇಲೆ ಏನಾಯ್ತು ಇದೇನೋ ಮರ್ಡರ್ ಇರ್ಬೇಕು ಮಾರಾಯಾ. ಇದೇನೋ ಆಗಿದೆ ಅಂತಂದ್ಬಿಟ್ಟು ಅಲ್ಲೆಲ್ಲರೂ ಗುಸುಗುಸು, ಗುಸುಗುಸು ಅನ್ನುತ್ತಾ ಇದ್ರು. ಸುಮಾರು ಮೂರು-ನಾಲ್ಕು ಸಾವಿರ ಜನಾ ಹತ್ರ ಹತ್ರ ಸೇರಿದ್ರು ಅವೊತ್ತು.'

ವರದಿಗಾರ : "ಮನೆಯಿಂದ ಸ್ವಲ್ಪ ದೂರದಲ್ಲಿ ರಮೇಶನ ಡೆಡ್‌ಬಾಡಿ ಬಿದ್ದಿತ್ತು. ಬಾಡಿ ಪಕ್ಕದಲ್ಲಿ ಅವನ ಗಾಡಿ ಬಿದ್ದಿತ್ತು. ಸಡನ್ನಾಗಿ ನೋಡಿದ್ರೆ ಅದೊಂದು ಆ್ಯಕ್ಸಿಡೆಂಟ್ ಇದ್ರೂ ಇರಬಹುದು ಅನ್ನೋ ಹಾಗೆ ಕಾಣ್ತಿತ್ತು. ಆ್ಯಕ್ಸಿಡೆಂಟ್ ಖಂಡಿತವಾಗ್ಲೂ ಅಲ್ಲ ಅಂತಾ ಇಟ್ಕೊಳ್ಳಿ."

ವಕ್ತೃ: 'ಇವರೇನ್ ಮಾಡಿದ್ದಾರೆ ಬೈಕ್ ತಗೊಂಡ್ಹೋಗಿದಾರೆ. ಬೈಕಲ್ಲಿ ಕೀ ಇಲ್ಲ. ಮತ್ತೆ ಬೈಕಿಂದ ಪೆಟ್ರೋಲ್ ಆಫ್ ಆಗಿದೆ. ಬೈಕ್ ಕೀ ಆಫೇ ಆಗಿದೆ. ಇವನಲ್ಲಿ ಚಪ್ಲಿ ಇಲ್ಲ. ಈತರ ಎಲ್ಲಾ ಕಂಡು ಬಂತು. ಅವಾಗ ಎಲ್ಲಾ ಈ ಮತ್ತೆ ಆ್ಯಕ್ಸಿಡೆಂಟ್ ಆಗಿರೋವಂಥ ಸ್ಥಳವೇ ಅಲ್ಲ ಅದು. ಆ ಸ್ಥಳದಲ್ಲಿ ತಗೊಂಡ್ಹೋಗಿ ಹಾಕಿದಾರೆ. ಇದು ಯಾವ ತರಾ ಅಂತಾ ಎಲ್ಲಾ ಬಂದೋರೆಲ್ಲಾ ಕೇಳೋಕ ಇದ್ ಮಾಡಿದ್ರು. ನಮ್ಮ ಅಣ್ಣಂದೀರು ಎಲ್ಲಾ ಬಂದೋರು ಇದ್ಯಾವ ತರ, ಇದ್ ಮಾಡ್ಬೇಡಿ. ಇದನ್ನು

ಪೋಸ್ಟ್‌ಮಾರ್ಟ್ ಮಾಡ್ಸಿ. ಇದೆಲ್ಲಾ ಮಾಡಿಸ್ಲೇ ಬೇಕು. ಇದು ಇದಾಗಕ್ಕೆ ಸಾಧ್ಯವೇ ಇಲ್ಲ. ಹಾಂಗೇ ಹೀಂಗೇ ಅಂತ ಹೇಳಿದ್ರು. ಅವಾಗ ನಾ ಏನ್ ಮಾಡ್ಲೆ ಹೌದು ಅಂತಾ ಹೇಳಿಬಿಟ್ಟು, ನನಗೆ ಯಾವ ತರಾನು ಗೊತ್ತಿಲ್ಲ ಸಾರ್. ನನಿಗೆ ತುಂಬ ದುಃಖ ಸಾರ್. ನನಿಗೆ ಬರೀ ಒಂದು ಅಳೋದ್ಬುಟ್ಗೊಂಡು ಬುಟ್ರೆ ನನಗಿನ್ನೇನು ಗೊತ್ತಿಲ್ಲ ಸಾರ್. ನಾನು ಆತರ ಸಿಕ್ಕಾಬಟ್ಟೆ ದುಃಖದಲ್ಲಿದ್ದೆ ಸಾರ್. ನಾನು ಆಮೇಲೆ ಯಾರು ಬಂದ್ರು ಏನು ಮಾಡಿದ್ರು ಅನ್ನೋದು ನನಿಗೆ ಗೊತ್ತಾಗ್ತಾ ಇಲ್ಲ ಸಾರ್. ನಮ್ಮಣ್ಣನ್ನು ಈತರ ಮಾಡಿರಲ್ಲಾ ಅನ್ನೋದು ರೀಯಲೀ ನಾನು ಬಂದು ದುಃಖ ಆಗಿ ಅಳುತ್ತಾ ಕುಂತಗಂಬುಟ್ಟೆ ಸಾರ್ ನಾನು.'

ವರದಿಗಾರ : ಹೆಣ್ತಿ ವಿಜಯಲಕ್ಷ್ಮಿ ಗಂಡನ ಹೆಣದ ಮೇಲೆ ಕೈ ಹೊಡದು ಅಳ್ತಾ ಇರೋದನ್ನಾ ನೋಡಿದವರು ಹೈತ್‌ಲಾಗಾ! ಎಂತಾ ಮಹಾಸತಿ ಅಂತ ಕಣ್ಣೀರು ಹಾಕಿದ್ರು. ಅವಳು ಅತ್ತು ಅತ್ತು ಸುಸ್ತಾಗಿ ಬೀಳೋದನ್ನ ನೋಡಿ ನೆರೆದಿದ್ದ ಜನ ಕಲಿಯುಗದ ಸೀತೆ; ಹೈತ್‌ಲಾಗಾ ಅಂತಾ ಉದ್ಗಾರ ತೆಗೀತಾರೆ. ಯಾವಾಗ ಅವಳ ಬಾಯಲ್ಲಿ ರಕ್ತ ಬರೋದಕ್ಕೆ ಶುರುವಾಯ್ತೋ ಜನರೆಲ್ಲ ಸತ್ತೋದ ರಮೇಶನನ್ನು ಮರ್ತೂ ಅವಳ ಆರೈಕೆಗೆ ನಿಂತು ಬಿಟ್ರು."

ವಕ್ತೃ : ಕಡೀಗೆ ಏನು ಮಾಡ್ತಾಳೆ, ಆ ಇದು ಇದೆಯಲ್ಲಾ ಕುಂಕುಮ, ತೇಟ್ ರಕ್ತದ ಕಲರ್ ಇರೋದಂಥ ಕುಂಕುಮ ತಗಂಬಿಟ್ಟು ಬಾಯಿಗೆ ಹಾಕ್ಕಂಬಿಟ್ಟು ಉಗೀತದಾಳೆ. ಆದರೆ ಅದು ಕುಂಕುಮ ಅನ್ನೋದು ನಮ್ಗೆ ಈಗ ಗೊತ್ತು. ಅದು ಗೊತ್ತಿಲ್ಲ ಮದ್ಲು. ಓ ಇವಳೀಗೆ ಬ್ಲಡ್‌ಕ್ಯಾನ್ಸರ್ ಅಂತೇ, ಇನ್ನು ಬರೇ ಮೂರುತಿಂಗಳು ಬದುಕುತಾಳಂತೆ ಹೇಳಿಬಿಟ್ಟಾವರಂತೆ ಡಾಕ್ಟರ್ರು. ಹಾಂಗೇ ಹೀಂಗೇ ಅಂದುಬುಟ್ಟು ಅವಳೀಗೆ ಪೋಷಣೆ ಮಾಡಿದ್ದೇ ಮಾಡಿದ್ದು. ಈ ಜನಾ ಎಲ್ಲಾವಾ. ಇಲ್ಲಿ ನೋಡಿದರೆ ಇವ್ರು ಆ್ಯಕ್ಟ್‌ನ ಮಾಡ್ತಾ ಇರೋದು ಈ ನಾಟಕಾ ಮಾಡ್ತಾ ಇರೋದು ನಮಗೆ ಲಾಸ್ಟಿಗೆ ಕೊನೆಗೆಲ್ಲಾ ಗೊತ್ತಾಯ್ತಾ ಇದೆ. ಆಮೇಲೆ ಡೌಟಾಯ್ತು ನಾವೇನ್ ಮಾಡಿದ್ವಿ ಊರಿಗೆ ಹೋಗ್‌ಬುಟ್ಟು, ಕಂಪ್ಲೇಂಟ್ ಕೊಟ್ಟುಬಿಡೋಣ ಪೊಲೀಸ್‌ಗೆ ಕಂಪ್ಲೇಂಟ್ ಕೊಡೋಣ. ಇದು ಆ್ಯಕ್ಸಿಂಟರಾ ಆಗಿರ್ಲಿ, ಮರ್ಡರ‍್ರನಾ ಆಗಿರ್ಲಿ. ಇದು ಮಾತ್ರ ನಾವು ಕಂಪ್ಲೇಂಟು ಕೊಟ್ರೆ ನಮಗೂ ಸಮಾಧಾನ ಆಗುತ್ತೆ. ಇಲ್ಲದೇ ಹೋದರೆ ಸಮಾಧಾನ ಆಗಂಗಿಲ್ಲಪಾ ಅಂತಂದುಬುಟ್ಟು ಹೋಗಿ ಕಂಪ್ಲೇಂಟು ಕೊಟ್ವಿ.

'ಅಲ್ಲಿ ಏನಾಯ್ತು ಡೌಟೂ ಬಂದು ಇದು ಕೀ ಇಲ್ಲ ಬೈಕಿಂದು. ಬೈಕ್ ತಗೋ ಹೋದರೆ ಬೈಕು ತಗೋಂಡ್ಹೋಗಿ ಬೀಳಿಸಿದಾರೆ. ಬೈಕ್ ಬಿದ್ದಿರೋದು ರೈಟ್‌ಸೈಡಿಗೆ ಬಿದ್ದಿದೆ. ಅಲ್ಲಲ್ಲಿ ಲೆಫ್ಟ್ ಸೈಡಿಗೆ ಬಿದ್ದಿದೆ. ಬಾಡಿ ಬಂದು ಲೆಫ್ಟ್ ಸೈಡಿಗೆ ಬಿದ್ದಿದೆ. ಅವನು ಬಿದ್ದಾನ ಏನಾಗಿದೆ ಸಾರ್ ಮತ್ತೆ ಅದೊಂದು ತಲೆಗೆ ಏಟೆ ಬಿದ್ದಿರೋದು. ಬೈಕನ್ನು ಈ ತರಾ ಲೆಫ್ಟಿಗೆ ಕೆಡವಿರೋದು, ರೈಟ್ ಸೈಡಿಗೆ ಏನು ಬಿದ್ದಿದೆ.

ಅವನಿಗೆ ಇಲ್ಲಿನೆ, ಅವಾಗ ನಮಗೆ ಎಲ್ಲಾ ಡೌಟ್ ಬಂತು. ಇದ್ಯಾವುದರಾ ಆಗಿದೆ ಇದು. ಇದಾಗಕ ಸಾಧ್ಯವಿಲ್ಲ. ಅಂತ್ಹೇಳಿಬುಟ್ಟು ನೋಡಿದ್ವಿ.

ಆಮೇಲೆ ಬೈಕುದು ಪೆಟ್ರೋಲ್ ಆಫ್ ಆಗಿದೆ ಸಾರ್. ಆಫ್ ಮಾಡಿದಾರೆ. ಇಲ್ಲಿಂದ ಹೋಗಿ ಬೈಕು ತಗೊಂದು ಹೋಗಿ ಪೆಟ್ರೋಲ್ ಆಫ್ ಮಾಡಿದಾರೆ. ಆತರ ಇದು ಮಾಡಿದ್ದಾಗ ನಾವೆಲ್ಲಾ ಬಂದು ಇದು ಮಾಡಿದ್ವಿ. ಕರ್‌ಕಂದ್ಬೋಗಿ ಡಾಕ್ಟ್ರು ಹತ್ರ ಮತ್ತೆ ಬಾಡಿ ತಗೊಂಡು ಬಂದು ಮಲಿಗಿಸಿದಾಗ ನಮ್ಮಣ್ಣ ಅವರೆಲ್ಲ ಬಂದು ಇದ್ ಮಾಡಿದಾಗ ಪೋಸ್ಟ್ ಮಾರ್ಟ್‌ರಿಗೆ ಬಾಡಿ ಕೊಟ್ವಿ ಸಾರ್.

ವರದಿಗಾರ : "ಇಷ್ಟೆಲ್ಲಾ ಆಗೋ ಹೊತ್ತಿಗೆ ನಿಧಾನವಾಗಿ, ಜನಕ್ಕೆ ವಿಜಯಲಕ್ಷ್ಮಿ ಮೇಲೆ ಅನುಮಾನ ಬಂದಿತ್ತು. ಅವಳ ಆ್ಯಕ್ಟಿಂಗ್ ಸ್ವಲ್ಪ ಓವರ್ ಆಗಿತ್ತು. ತವರು ಸಿರಿ ಸಿನಿಮಾಗಳಲ್ಲಿ ಅತ್ತ ಶೃತಿಗಿಂತ ನಾನು ಜೋರಾಗಿ ಅಳ್ತೀನಿ ಅಂತ ಪೈಪೋಟಿಗೆ ನಿಂತರೆ ಇನ್ನೇನಾಗುತ್ತೆ. ಬಾಯಿಂದ ಬಂದ ರಕ್ತ ಅಪ್ಪಟ ಕುಂಕುಮದ ನೀರು ಅಂತಾ ಕೆಲವರಿಗೆ ಸಂಶಯಾ ಬಂದಿತ್ತು... ಸಾಲದ್ದಕ್ಕೆ ಮಗಾ ಮೋಹನ ಮಾಮೂಲಾಗೆ ಇದ್ದ."

ವಕ್ತೃ : ಆಗ ಇವ್ಳು ನಾಟಗಾ ಆಡಾಕ ಕುಂತಗಂಡ್ಲು ಸಾರ್. ಇವ್ಳು ಏನ್ ಮಾಡಿದ್ಲೋ. ನಾವು ನೋಡಿದಾಗ ನಮ್ಮ ಹಿಂದುಗಡೇನೇ ಓಡಿ ಬರ್ಲಿಲ್ಲ. ಸ್ವಲ್ಪ ಹೊತ್ತು ಎಷ್ಟೋ ಹೊತ್ತು ಆದ್ಮೇಲೆ ಇವ್ಳು ಓಡಿ ಬಂದ್ಲು. ಈ ಹುಡುಗಾನೂ ಇವ್ಳು ಹೋಡಿ ಬಂದ್ರು. ಹುಡುಗಾ ಅಳ್ತಾನೇ ಇಲ್ಲ. ಇವ್ಳು ಓಡಿ ಬಂದು ಬಿದ್ಬುಕಂಡ್ಲು. ಅದೇ ಮೋಹನ್‌ಕುಮಾರ್ ಅವರ ಮಗಾನೂವೆ ಆ ಹುಡ್ಗೀನೂವೆ ಓಡಿ ಬಂದು ಅಳ್ತಾ ಇದ್ರೂ ಸಾರ್. ಅಳೋರಂಗಾ ನಾಟಗಾ ಆಡಿದ್ರು. ಆಮೇಲೆ ಇವಳಿಗೆ ಬಂದು ಕರಕಬಂದು ಮಲಿಗಿಸೀದ ತಕ್ಷಣ ಸುಮ್ನೆ ಹಿಂಗೆ ಹೆಣದ ಮೇಲೆ ಬಿದ್ಬುಕಣಂಗ ಮಾಡಿದ್ಲು ಸಾರ್ ವಿಜಯಲಕ್ಷ್ಮಿ.

ವಿಜಯಲಕ್ಷ್ಮಿ ಮತ್ತು ಮೋಹನ್‌ಕುಮಾರ್ ಇವರಿಬ್ರುನೂ ಏನ್ ಮಾಡಿದ್ರು. ಮೋಹನ್‌ಕುಮಾರ್ ಚೆನ್ನಾಗೇ ಕ್ಲೀನಾಗಿ ಇದ್ದ ಮಾಡ್ತಾನೆ ಸಾರ್. ಚೆನ್ನಾಗಿರಂಗೇ ಹೇಳ್ತಾ ಇದಾನೆ ಸಾರ್. ಅವನೀಗೆ ಯಾವ ತರನೂ ದುಃಖಾನೇ ಇಲ್ಲಾ ಸಾರ್. ಹೂಂ ಮಗಂಗೆ ಮೋಹನ್‌ಕುಮಾರಂಗೆ. ಅಷ್ಟರೊಳಗೆ ಅವನು ಸಂಬಂಧಿಕರೆಲ್ಲ ಓಡಿಬಂದು, ಅವಳನ್ನೆ ಸಮಾಧಾನ ಮಾಡಾಕ ಶುರು ಮಾಡ್ಕೊಂಡ್ರು. ಅವಾಗ ಇವ್ಳು ಇಲ್ಲೆ ಬಿದ್ದು ಇದಾದ್ಲು. ಆಮೇಲೆ ಲಾಸ್ಟಿಗೆ ಅದೇ ತರಾ ನಾಟ್ಕ ಆಡ್ತಾ ಇದ್ಲು....

ಅವನು ಯಾವುದೋ ಕಾರಣಕ್ಕೂನೂವೆ ಏಳು-ಏಳುವರೆ ಮೇಲೆ ಅವನು ಹೋಗಾನಲ್ಲ ಹೊರಗಡೆ. ಅಂತಾದರಲ್ಲಿ ಅವನು ಆ್ಯಕ್ಸಿಡೆಂಟ್ ಆಗ್ಯಾನ ಅಂದ್ರೆ ಆ ದಾರಿಯಲ್ಲಿ ಯಾರೂ ಬಂದಿಲ್ವೆ. ಹತ್ತು ಹನ್ನೊಂದು ಗಂಟೆವರೆಗೆ ಯಾರೂ ಬಂದಿಲ್ವೆ. ಅಂತಂದಬುಟ್ಟು ಎಲ್ಲರಿಗೂ ಡೌಟೇ. ಈ ಡೌಟ್ ಬಂದುಬಿಟ್ಟು ನಾಟ್ಗ ಮಾಡ್ತಾಳೇನೋ ಅನ್ನಿಸುತ್ತಿದೆ.

"ಅದು ಆ್ಯಕ್ಸಿಡೆಂಟ್ ಅಲ್ವೇ ಅಲ್ಲ. ಮರ್ಡರ್ ಅಂತ ಹೇಳೋದಕ್ಕೆ ಸ್ಥಳದಲ್ಲೇ ಸಾಕ್ಷಿ ಇತ್ತು. ಮೊದಲನೆದಾಗಿ ರಾತ್ರಿ ರಮೇಶ ರಾತ್ರಿ ಏಳೆಂಟು ಗಂಟೆ ಮೇಲೆ ಹೊರಗೆ ಹೋಗೋನೇ ಅಲ್ಲ. ಹೋಗೋದಾದರೂ ಜರ್ಕಿನ ಹಾಗೂ ಚಪ್ಪಲಿ ಹಾಕದೇ ಹೋಗ್ತಾ ಇರಲಿಲ್ಲ. ಅವೆರಡೂ ಮನೆಲೇ ಇದ್ವು. ಗಾಡಿಯನ್ನು ಆನ್ ಮಾಡೇ ಇರಲಿಲ್ಲ. ಅಷ್ಟು ಮಾತ್ರ ಅಲ್ಲಾ ಗಾಡಿ ಕೀ ಕೂಡ ಮನೇಲೇ ಇತ್ತು. ಗಾಡೀಲಿ ಪೆಟ್ರೋಲು ಕೂಡ ಬಿಟ್ಟಿರಲಿಲ್ಲ. ಇದರರ್ಥ ಗಾಡೀನಾ ಸ್ಟಾರ್ಟ್ ಮಾಡಿಕೊಂಡು ಬರಲಿಲ್ಲ ಅನ್ನೋದು ಸ್ಪಷ್ಟ. ಜೊತೆಗೆ ಬಾಡೀ ಬಿದ್ದಿದ್ದ ಜಾಗದಲ್ಲಿ ಒಂದು ಕಲ್ಲು ಇರಲಿಲ್ಲ. ಯಾವ ರೀತೀಲೂ ಸಾಯೋ ಹಾಗೆ ಏಟು ಆಗೋದಕ್ಕೆ ಸಾಧ್ಯನೇ ಇರಲಿಲ್ಲ. ಅಲ್ಲದೆ ಬಿದ್ದು ಗುರ್ತೂ ಇರಲಿಲ್ಲ. ಗಾಡೀಗೆ ಸಣ್ಣದೊಂದು ಸ್ಕ್ರ್ಯಾಚೂ ಇಲ್ಲ. ಆದರೆ ರಮೇಶನ ಮೈಮೇಲೆ ಮಾತ್ರ ಬೇಕಾದಷ್ಟು ಗಾಯಗಳಿದ್ದವು.

ಆ ಕುತ್ತಿಗಿ ಹತ್ರ ಇಲ್ಲಿಂದ ಇಲ್ಲಿಯವರೆಗೆ ಒಂದು ಮಾರ್ಕಿದೆ. ಆಮೇಲೆ ಎದೆಯಲ್ಲಿ ಇಲ್ಲಿ ಒಂದಿದು ಇದೆ. ಹೊಡೆದಂಗೆ ಕೆತ್ತಿದೆ. ಅಷ್ಟೊಂದು ಎರಡು ಮೂರು ಕಡೆ ಸ್ವಲ್ಪ ಇದಾಗಿದೆ. ಆಮೇಲೆ ನಾವೇನು ಅನುಕೊಂಡಿದ್ವಿ ಇರಿವೆಗಳೇನು ಕಚ್ಚಿರಬೇಕು. ರಾತ್ರಿ ೧ ಗಂಟೆ ೨ ಗಂಟೆಗೆ ಹಿಂಗಾಗಿ ಬಿಟ್ಟೈತೆ ಅಂತಾ ನಾವು ಅಂದಕತ್ತೀವಿ. ಗಾಡೀಗೆ ನೋಡಿದ್ರೆ ಒಂದು ಕ್ರ್ಯಾಚಸ್ ಆಗ್ಲಿ, ಮಿರ್ರರ್ ಒಡೆದಿರೋದಾಗ್ಲಿ ಏನು ಇಲ್ಲ. ಸುಮ್ನೆ ಹೋಗಿ ಮಲಗಿಸಿದಾರೆ. ಅಷ್ಟು ಬಿಟ್ರೆ ಇನ್ನೇನು ಇಲ್ಲ. ಇದನ್ನು ಸುಮ್ನೆ ಒಂದು ಕಡೆ ಸೈಡಿಗೆ ಮಲಗಿಸಿದಾರೆ. ಅದೂ ಎಲ್ಲಿ ಮಲಗಿಸಿದಾರೆ ನಮ್ಮ ತೋಟದ ಬಡ್ಡೀಗೆ ಮಲಗಿಸಿದಾರೆ. ಇಲ್ಲಿಂದ ಕಮ್ಮಿ ನೂರಾ ಐವತ್ತಡಿ ಅಂತರದಲ್ಲಿ ಮಲಗಿಸಿದಾರೆ.

ಇವಳೇನು ಮಾಡಿದಾಳೆ ಈ ರವೀ ಹೆಂಡ್ತಿ ಇದಾಳಲ್ಲ ವಿಜಯಲಕ್ಷ್ಮಿ, ಅವಳು ಪ್ರಥಮದಿಂದಾಲೂವೆ ಆ ಸತ್ತದ್ದ ದಿನ ಸಾಯಿಸಿದ ದಿವಸ ಈಚೆಗಿಂದನೂವೆ ನಾವು ನೋಡಿದ್ಮಟ್ಟಿಗೆ ಬರೇ ಒಂಥರಾ ಸುಸ್ತಾದಂಗೆ ಹಾಗೆ ಹೀಗೆ ಕುಂಕಮದ ನೀರಂಗೆ ಇದ್ ಮಾಡ್ತಾ ಇದ್ದಲ್ಲ, ಎಲ್ಲಿ ಸತ್ತೋಹ್ಹೇಗಿಬುಟ್ತಾಳೋ ಅನ್ನೋ ಲೆಕ್ಕದಲ್ಲಿ ಜನಗಳೆಲ್ಲ ಅವಳ ಬಗ್ಗೇನೇ ಅನುಕಂಪ ತೋರ್ತಾ ಇದ್ರು. ಆಮೇಲೇನಾಗಿದೆ ಅನುಕಂಪ ತೋರ್ತಾ ಇದ್ದೋರು. ಇವ್ಯೇನ ಮಾಡಿದಾಳೆ. ಅವ್ಳ ತಂಗಿ ಒಬ್ಳು ಇದ್ದಾಳೆ. ಒಬ್ಳು ಅಕ್ಕ ಇದ್ದಾಳೆ. ಎರಡು ಮೂರು ಜನಾ ಇದಾರೆ. ಅವರು ಬಂದುಬುಟ್ಟು ಅಣ್ಣಾ ಇದೊಂದು ಸ್ವಲ್ಪ ಇವಳ್ನ ಕರಕೊಂಡು ಹೋಗಬಹುದಾ ಹಾಸ್ಪಿಟಲಿಗೆ? ಹಾಸ್ಪಿಟ್ಲಿಗೆ ಕರಕೊಂಡು ಹೋಗಿ ತೋರಿಸಬಹುದಾ? ಇಲ್ದೇ ಹೋದರೆ ಸತ್ತೋಹ್ಹೇಗಿಬುಡ್ತಾಳೆ. ರಕ್ತ ಕಕ್ಕುತ್ತಾ ಅದಾಳೆ ಅಂತಾ ಬಂದು ಹೇಳಿದರು. ಯಾರೂ ಅವರ ತಂಗೀರೆ. ಅವಾಗ ಬಂದು ನೋಡಬೇಕಾದರೆ ಹೌದು! ಬಾಯಲ್ಲಿ ರಕ್ತಾ ಇದೆ! ಆಮೇಲೆ ಏನಾಯ್ತು ಹೋ ಏನ್ ಬಾಯಲ್ಲಿ ರಕ್ತಾ ಇದೆ ಸರಿ ಆಯ್ತು ಕರಕೊಂಡ್ಹೋಗಿ ಇನ್ನೇನು ಯಾರು ಮಾಡಿದಾರೆ ಅಂತಾ ಗೊತ್ತಾಗುತ್ತಿಲ್ಲ. ಅವ್ರು ಅರೆಸ್ಟ್ ಮಾಡ್ತೀವಿ ಅಂದಾದ್ರೆ, ನೀವು ಧೈರ್ಯವಾಗಿ ಇರೀ ಅಂತಂದುಬುಟ್ಟು ನಾವೇ ಅವರಿಗೆ ಆಯಮ್ಮಂಗೆ ಧೈರ್ಯ ತುಂಬಿ ಆಯ್ತು ಕರಕಂಡೋಗಿ ಅಂತಾ ಆಟೋ ನಾವೇ ಕರ್‍ಸಿ ಕಳ್ಸಿಕೊಟ್ವಿ.

ವರದಿಗಾರ : ಆನಂತರ ಬಂದದ್ದೇ ಪೋಸ್ಟ್‌ಮಾರ್ಟಂ ರಿಪೋರ್ಟ್. ಅದರಲ್ಲಿ ಉಸಿರುಗಟ್ಟಿಸಿ ಹೊಡೆದು ಕೊಂದಿದ್ದಾರೆ. ಅನ್ನೋದು ಸ್ಪಷ್ಟವಾಗುತ್ತೆ. ಈ ರಿಪೋರ್ಟ್ ಬರ್‍ತಿದ್ದ ಹಾಗೆಯೇ ವಿಜಯಲಕ್ಷ್ಮಿ ಬಂದು ಪೊಲೀಸ್ ಸ್ಟೇಷನ್‌ಗೆ ಹೋಗಿದ್ದಾಳೆ. ಕಂಪ್ಲೇಂಟು ಕೊಡೋದ್ಕಲ್ಲ ನಾನೇ ಕೊಲೆ ಮಾಡಿದ್ದು ಅಂತಾ ಸರೆಂಡ್ರಾಗೋದಕ್ಕೆ."

ವಕ್ತೃ : ಆಮೇಲೆ ಲಾಸ್ಟಿಗೆ ರಾತ್ರಿ ಏನಾಗಿದೆ (ಇವ್ನು ಬಂದ ಮೇಲೆ) ಇವ್ನು ಅಂಗಡಿ ಹತ್ರ ಬಂದಾನಲ್ಲ ಸಾರ್ ಅವ ಬಂದಾನಂತೆ. ಬಂದ ಮೇಲೆ ಅಂಗಡಿ ಹತ್ರ ಬಂದ ಮೇಲೆ ಅಲ್ಲಿ ಸ್ವಲ್ಪ ಹೊತ್ತು ಇದ್ದು ಅಂಗಡಿಯಿಂದ ಬಂದಿದಾನೆ. ಇವ್ನು ಊಟ ಮಾಡಕಂತಾ ಇದ ಮಾಡಿದ ಮೇಲೆ ಪಟಾಕಿ ಹೊಡದ್ರಂತೆ ಇವರಿಬ್ರೂವೆ. ಹುಡುಗ ಮಗ ಮೋಹನ್‌ಕುಮಾರ್ ಮತ್ತು ನಮ್ಮಣ್ಣ ರವಿ. ಇವರಿಬ್ರೂವೆ ಪಟಾಕಿ ಹೊಡದು ಸ್ವಲ್ಪ ಹೊತ್ತು ಆದಮೇಲೆ ಲಾಸ್ಟಿಗೆ ಊಟಕ್ಕೆ ಹೋಗಿದಾನೆ. ಅದಕ್ಕೆಲ್ಲ ಇವರಮ್ಮ ಮಿಕ್ಸ್‌ಮಾಡ್ತಾ ಒಂದಿಷ್ಟು ಮಾತ್ರೆ ಅರೆದುಬುಟ್ಟು ಅದಕ್ಕೆ ಮಿಕ್ಸ್‌ಮಾಡ್ತಾ ಅದನ್ನು ಹಂದಿ ಮಾಂಸಕ್ಕಾಹ್ಹಿಕಿಬುಟ್ಟು ಊಟಕ್ಕೆ ಬಡಿಸಿದ್ಲಂತೆ ಸಾರ್ ಅವಾಗ ಏನ್ ಮಾಡಿದಾನೆ ಇದೇನು ಕಹಿ ಕಹಿ ಇದೆಯಲ್ಲಾ ಅಂದ್‌ಬುಟ್ಟು ಕೇಳಿದಾನೆ ಸಾರ್. ಹಂದಿ ಮಾಂಸ ಯಾಕೆ ಕಹಿಯಾಗಿದೆ ಅಂತಾ ಕೇಳಿದಾನೆ ಸಾರ್. ಅವ್ಳು ಏನ್ ಹೇಳಿದಾಳೆ ಮಸಾಲೆ ಜಾಸ್ತಿ ಹಾಕಿಬುಟ್ಟಿದೆ. ಅದಕ್ಕೆ ಕಹಿ ಕಹಿ ಅನ್ನುಸ್ತಾ ಇದೆ ಅಂತ ಹೇಳಿದಾಳೆ. ಆವಾಗ ಕಹಿಯಾಗಿದೆ ಅಂತಾ ಹೇಳಿದಾಗ ಇವನೇನು ಮಾಡಿದಾನೇ ಪರವಾಗಿಲ್ಲ ಅಂದುಬುಟ್ಟು ತಿಂದ್ನಂತೆ ಸಾರ್. ಮತ್ತೆ ಎದ್ದು ಇಬ್ರೂ ಹೋಗಿ ಪಟಾಕಿ ಹೊರಡಿಸಿದ್ರಂತೆ.

ವರದಿಗಾರ : "ರಮೇಶಾ ಅಲಿಯಾಸ್ ರವೀಗೆ ತಾನು ದೀಪಾವಳಿ ದಿನ ಕೊಲೆಯಾಗಬಹುದು ಅನ್ನೋ ಯಾವ ಅನುಮಾನವೂ ಇರಲಿಲ್ಲ. ವಿಚಿತ್ರ ಅಂದ್ರೆ ಹೆಂಡ್ತಿ ವಿಜಯಲಕ್ಷ್ಮಿ ಅವನನ್ನು ಕೊಲ್ತೀನಿ ಅನ್ನೋ ಮಾತು ಮಾತ್ರ ಅವನ ಕಿವಿಗೆ ಬಿದ್ದಿತ್ತು. ನೋಡಿ ರಮೇಶನಿಗೆ ಮಗಾ ಹೇಳಿದ್ದು ಆದ್ರೆ ರಮೇಶ ಅವಳು ನನ್ನನ್ನು ಕೊಲ್ತಾಳ. ಥೂ ಅದಕ್ಕೆ ಇನ್ನೊಂದು ಸಲ ಹುಟ್ಟಿ ಬರಬೇಕು ಅಂತ ಅವನು ಯೋಚ್ನೆ ಮಾಡ್ತಾ ಇದ್ದರೆ; ದೀಪಾವಳಿ ದಿನ ವಿಜಯಲಕ್ಷ್ಮಿ ಮಟನ್ ಸಾರ್ ಒಲೆಯ ಮೇಲೆ ಇಟ್ಟು ನಿದ್ದೆ ಮಾತ್ರೆಗಳನ್ನು ಕುಟ್ಟೋದಕ್ಕೆ ಶುರು ಮಾಡ್ತಾಳೆ. ನಂತರ ಮಾತ್ರೆ ಪುಡೀನ ಮಟನ್ ಸಾರಿಗೆ ಹಾಕಿ ಚೆನ್ನಾಗಿ ಕುದಿಸಿದ್ದಾಳೆ. ಹಸ್ಕಂಡು ಬಂದು ಊಟಕ್ಕೆ ಕುಳಿತ ಗಂಡನಿಗೆ ಬ್ಯಾಡ ಬ್ಯಾಡ ಅಂದ್ರೂ ಒತ್ತಾಯ ಮಾಡಿ ಸುರಿದಿದ್ದಾಳೆ. ಆಗ್ಲೂ ರಮೇಶಾ ಸಾರು ಯಾಕೆ ಕಹಿ ಕಹಿ ಇದೆ ಅಂತ ಕೇಳಿದ್ದಾನೆ. ವಿಜಯಲಕ್ಷ್ಮಿ ಅದಕ್ಕೊಂದು ಶಬ್ದ ಹೇಳಿದ್ದಾಳೆ. ಗಂಡ ನಂಬಿ ತಿಂದಿದಾನೆ. ಏನು ಮಾಡೋದು ಹೆಂಡ್ತಿ ಮಾಡೋ ಮಾಡೋ ಅಡಿಗೇನಾ ಅನುಮಾನ ಪಡೋ ಕಾಲ ಇನ್ನೂ ಬಂದಿಲ್ವಲ್ಲಾ. ಹಾಗಾಗಿ ಹೊಟ್ಟೆ ತುಂಬಾ ಉಂಟ ರಮೇಶ ಹೋಗಿ ಮಂಚದ ಮೇಲೆ ಅಡ್ಡ ಬೀಳ್ತಾನೆ. ಆಗ ಮನೆ ಒಳಗೆ ಬಂದಿದ್ದಾರೆ ವಿಜಯಲಕ್ಷ್ಮಿಯ ತಮ್ಮ ಜಗದೀಶ ಮತ್ತು ಅವನ ಸ್ನೇಹಿತರು... ಎಲ್ಲರೂ ಸೇರಿಕೊಂಡು ಮಲಗಿದ್ದ ರಮೇಶನ ಮೇಲೆ ಬಿದ್ದಿದ್ದಾರೆ. ಸಿಕ್ಕ ಸಿಕ್ಕಲ್ಲಿ ಒದ್ದು ಕತ್ತಿಗೆ ಹಗ್ಗಬಿಗಿದು ಕೊಂದೇಬಿಟ್ಟಿದ್ದಾರೆ."

ವಕ್ತ : ಆಮೇಲೆ ಇವ್ನು ಏನ್ ಮಾಡಿದ್ನಂತೆ ಸಾರ್ ವಿಜಯಲಕ್ಷ್ಮಿ ರವಿಯ ಹೆಂಡತಿ ವಿಜಯಲಕ್ಷ್ಮಿ ಏನ್ ಮಾಡಿದ್ನಂತೆ ಕೊಳಪೆ ತಗಂದು ಇಲ್ಲಿಗೆ ತಲೆಗೆ ಒಂದ್ಹೇಟ್ ಹೊಡೆದ್ನಂತೆ ಸಾರ್. ಆಮೇಲೆ ಮತ್ತೆ ನಂತರ ಅವ್ನು ಸ್ವಯ ತಪ್ಪಿದಂಗ ಇದಾದಾಗ ಮತ್ತೆ ಕುತ್ಗೇಗೆಲ್ಲಾ ಒದ್ದು ಒಬ್ರು ಎದೆ ಮೇಲೆ ಕೂತ್ಕೊಂಡ್ರು. ಒಬ್ರು ಮಂಡೀಮ್ಯಾಲೆ ಕೂತ್ಕೊಂಡ್ರು ನಮ್ಮಮ್ಮ ಬಂದು ಅಮ್ಮನೂವೆ ತಂಬಿ ಮೋಹನ್ ಹಗ್ಗ ಹಾಕಿಬಿಟ್ಟು ಎಳೆದ್ರು, ಅಂತ್ಹೇಳಿ ಆಮೇಲೆ ನಮ್ಮಮ್ಮ ಕೊಳಪೆ ತಗದು ಬೀಜಕ್ಕೆ ಹೊಡೀತು. ಬೀಜಕ್ಕೆ ಹೊಡದಾಗ ಬೀಜ ಎಲ್ಲಾ ನೀರಾಯಿತು ಅಲ್ಲಾ ಅವಾಗ ಈಚೆಗೆ ಹೊತ್ಕೊಂಡು ಬಂದ್ರು. ಹೊತ್ಕೊಂಡಾಗ ನಾನೂ ಇದ್ದೆ ಅಲ್ಲಿ. ನಾನು ಟಾರ್ಚು ಇಡುಕಂದೆ. ಟಾರ್ಚ್ ಇಡುಕೊಂಡು ಬೈಕ್ ಮೇಲೆ ಹಾಕ್ಕೊಂಡು ನೂಕ್ಕೊಂದು ಹೋದ್ವಿ. ಹೋಗಿ ತಗಂದ್ಹೋಗಿ ಒಂದು ನೂರೈವತ್ತು ಇನ್ನೂರು ಮೀಟರ್ ದೂರದಲ್ಲಿ ಹಾಕಿದ್ವಿ ಅಂತಾ ಹೇಳಿದ್ರು.

ವರದಿಗಾರ : "ವಿಜಯಲಕ್ಷ್ಮಿ ತಮ್ಮನ ಸಹಾಯ ಪಡಕೊಂಡು ಮಗನನ್ನು ಜೊತೇಗಿಟ್ಟುಕೊಂಡು ಗಂಡನನ್ನೇ ಕೊಂದು ಮುಗಿಸಿದ್ನಲ್ಲ ಯಾಕೇ? ಅಂತೀರಾ?"

ವಕ್ತ : ಸಾರ್ ಇಲ್ಲೇ ಅವ್ಳು ಕಿತ್ತೋಹಳ್ಳಿ ಅನ್ನೋ ಒಂದು ಎಸ್ಟೇಟ್ ಇದೆ. ಅಲ್ಲಿಗೆ ಕೆಲಸಕ್ಕೆ ಹೋಗೋಳು. ಕೆಲಸಕ್ಕೆ ಹೋಗಿ ಅಲ್ಲಿ ಒಬ್ಬ ರೈತ ಮೂರ್ತಿರೇಟಾ ಅಂತಾ ಇದ್ನಂತೆ. ಅವನ ಜತೆ ಅನೈತಿಕ ಸಂಬಂಧ ಇತ್ತು. ಅವ್ರು ಅವ್ರೂ ... ಏನೋ ...? ಅದಕ್ಕೆ ಒಂದಿಷ್ಟು ಇವನು ಖಂಡಿಸ್ತಾ ಇದ್ದ. ಆ ಖಂಡಿಸಿದ್ದು ಏನು ಹಿಂಸೆ ಆಯ್ತೋ ಏನೋ ಗೊತ್ತಾಗಲಿಲ್ಲ. ಅವ್ಳು ಒಟ್ಟಲ್ಲಿ ಏನಾದ್ರು ಮಾಡಿ ಇವ್ರನ್ನ ಮುಗಿಸಿಬಿಟ್ರೆ ನಮಗೆ ಹೇಳೋರು, ಕೇಳೋರು ಯಾರೂ ಇಲ್ಲಾ ಅಲ್ಲಾ ಅಂದ್ಬಿಟ್ಟು ಅವರೇನು ಮಾಡಿದ್ರು ಅಂದ್ರೆ ಇವ್ನ ಮ್ಯಾಲೆ ಒಂದು ಸ್ವಲ್ಪ ಯಾವಾಗಲೂ ಒಂದು ಥರಾ ಇದಾಗಿದ್ರು. ಈಗಲೇ ಒಂದೆರಡು ತಿಂಗಳ ಹಿಂದೇನೇ ತಾಯಿ ಮನೆಯಲ್ಲಿ ಮಾತಾಡ್ಕೋತಾ ಇದ್ದರಂತೆ. ಏನಾದರೂ ಮಾಡಿ ಈ ಸೂಳೆಮಗ್ನನ್ನು ಸವಾಸ ಆಗೋಲ್ಲಾ ಏನಾರ ಮಾಡಿ ಮುಗಿಸಿಬಿಡಬೇಕು. ನಿದ್ರೆ ಮಾತ್ರೆ ಹಾಕಿ ಮುಗಿಸಿಬಿಡೋಣ ಹಾಗೆ ಹೀಗೆ ಅಂತ ಮಾತಾಡಿದ್ರಂತೆ.

ವರದಿಗಾರ : "ವಿಜಯಲಕ್ಷ್ಮಿ ಎಂಥಾ ಪತಿವ್ರತೆ ನೋಡಿ. ಅನೈತಿಕ ಸಂಬಂಧಕ್ಕಾಗಿ ಪ್ರೀತಿಸಿ ಮದುವೆಯಾದ ಗಂಡನನ್ನೇ ಕೊಂದಿದ್ದಾಳೆ. ಮಗನ್ನ ರಿಮ್ಯಾಂಡ್‌ಹೋಂ ಸೇರೋ ಹಾಗೇ ಮಾಡಿದ್ದಾಳೆ. ವಿಚಿತ್ರ ಅಂದ್ರೆ ರಮೇಶನ ಕೊಲ್ಲೋದಕ್ಕೆ ಸಹಾಯ ಮಾಡಿದ ಅವಳ ತಮ್ಮ ಹಾಗೂ ಸ್ನೇಹಿತರನ್ನು ಪೊಲೀಸ್‌ನೋರು ಹಲೋ ಅಂತ ಮಾತಾಡಿಸಿಲ್ಲ. ಈ ರಹಸ್ಯ ಮಾತ್ರ ಇನ್ನೂ ಬಯಲಾಗಿಲ್ಲ. ಹಾಗೂ ಸೂಚನೇನೂ ಇಲ್ಲ."

ನಿಮ್ಮ ಅನಿಸಿಕೆಯನ್ನು ತಿಳಿಸೋ ವಿಳಾಸ : ಉದಯ ಟಿ.ವಿ. ಕ್ರೈಂ ಸ್ಟೋರಿ ವಿಭಾಗ, ಪಿ.ಬಿ. ನಂ, ೫೪೪೩, ಬೆಂಗಳೂರು.

* * *

"ಕ್ರೈಂಸ್ಟೋರಿ" ಉದಯ ಟಿ.ವಿ ೨೨.೦೨.೨೦೦೭ ಗುರುವಾರ (ರಾತ್ರಿ ೧೦.೦೦ ರಿಂದ ೧೦.೩೦)

("ಸೀಬರ್ಡ ನೌಕಾನೆಲೆ ಮತ್ತು ಗುರ್ಖಾ ರೆಜಿಮೆಂಟ್ ಮತ್ತು ಪೊಲೀಸ್ ಕದನ")

ವಕ್ತೃ ೧ : ನಮ್ಮ ಕಾರವಾರ ಉತ್ತರ ಕನ್ನಡ ಜಿಲ್ಲೆಯಲ್ಲೇ ಕಾರವಾರ ತಾಲ್ಲೂಕಿನಲ್ಲಿ ಬಹಳಷ್ಟು ಖನಿಜ ಸಂಪತ್ತು ಹಾಗೂ ಬಹಳ ಮೂಲ ಅನೇಕ ವಸ್ತುಗಳಿಂದ, ಕಲೆಗಳಿಂದ ಇರುವಂಥ ಈ ಊರು. ಇದರಲ್ಲಿ ಮೊದ್ಲೇ ಬೀಟ್ ಈ ಒಂದು ಬಿರ್ಲಾ ಫ್ಯಾಕ್ಟರಿ, ಸೋಡಿಯಂ ಫ್ಯಾಕ್ಟರೀ ಅದು ಬಂತು. ಆಗಲೇ ಕೆಲವರು ಬಹಳಷ್ಟು ಜನ ನಿರಾಶ್ರಿತರಾದರು. ಅವರು ಮನೆಗಳು ಹೋದ್ವು. ಅಂದ್ರೆ ಅವರಿಗೆ ಫ್ಯಾಕ್ಟರೀಲಿ ಮನೆ ಸಿಕ್ತು. ಕೆಲಸಗಳು ಸಿಕ್ವು. ಆಮೇಲೆ ಕೈಗಾರಿಕೆ ಆಯ್ತು. ಕೈಗಾ ಅಣುಶಕ್ತಿ ಅದರಿಂದಲೂ ನಮ್ಗೆ ಬಹಳಷ್ಟು ಹಾನಿ. ಯಾಕೆ ಅಂದರೆ ಅಲ್ಲೀ ಕೂಡಾ ನಿರಾಶ್ರಿತರು ಆದ್ರು. ಅವರಿಗೆ ಬಾಬ್ತು ಎಲ್ಲಾ ಸಿಕ್ವು. ಸೆಲೆಕ್ಷನ್ ಎಲ್ಲಾ ಸಿಕ್ಕಿದೆ. ಕೊನೆಯಲ್ಲಿ ಈಗ ಸೀಬರ್ಡ್ ಅನ್ನೋವಂಥಾ ಇದೊಂದು ನೌಕಾನೆಲೆ ಬಂದಿದೆ. ಅದರಿಂದ ಜನರು ನಿರಾಶ್ರಿತರು ಆಗಿದ್ದೂ ಅಲ್ಲದೆ ನೌಕರಿ ಇಲ್ಲ. ಅವರು ಮಾಡಿದ ಬೆಳಸಿದ ಬೆಳೆಗಳ ಮೌಲ್ಯ ಇಲ್ಲ. ಇಂಥಾ ಒಂದು ಪರಿಸ್ಥಿತಿಯಲ್ಲಿ ಈ ನೇವಿಯಲ್ಲಿ ಟ್ರೈನಿಂಗ್‌ಗೆ ಬರುವಂತವರೇ ಗೂರ್ಖಾ ಮಕ್ಕಳು. ಬಹಳಷ್ಟು ಇಲ್ಲಿ ತಂಟೆ ತಕರಾರುಗಳು ಮಾಡ್ತಾರೆ. ಕಾರವಾರ ನಮ್ಮೂರು. ಬಹಳ ಸಂಪನ್ನ ಜನರು. ಬೇಕೂಂತ ಯಾರೂ ಮೇಲೆ ಹೋಗಲ್ಲಾ. ಏನಾರ ಬಂದ್ರೆ ಬಿಡೋದಿಲ್ಲ. ಅಂಥಾ ಜನ ನಮ್ಮ ಕಾರವಾರದವರು.

ನ್ಯೂಸ್ ರೀಡರ್ : "ನಮ್ಮ ಜನ ತಾವಾಗೇ ಯಾರ ಮೇಲೂ ಹೋಗೋದಿಲ್ಲ. ಅವರಾಗೇ ಬಂದ್ರೆ ಕಡ್ಲೆಪುರಿ ತಿನ್ನುತಾ ಕೂರೋದಿಲ್ಲ. ಅಂತ ನಮ್ಮ ಸುಮಲತಾ ಮೇಡಂ ಸುಮ್ನೆ ಹೇಳಲಿಲ್ಲಾ ಕಣ್ರೀss. ಮೊನ್ನೆ ಬುಧವಾರ ಮಧ್ಯಾಹ್ನ ಮೂರು ಗಂಟೆ ಹೊತ್ತಿಗೆ ಸಿರವಾಡಾ ರೈಲ್ವೇ ಸ್ಟೇಷನ್ ಅಕ್ಷರ ಸಹ ಕುರುಕ್ಷೇತ್ರ ಆಗಿತ್ತು. ಕೆಲವರ ತಲೆಯಲ್ಲಿ ರಕ್ತ ಸುರೀತಾ ಇತ್ತು. ಕೆಲವರ ಕೈಯಲ್ಲಿ ಚಾಕೂ ಇತ್ತು. ಕೆಲವರು ಓಡಾಡ್ತಾ ಇದ್ರು. ಕೆಲವರು ಬಡಿದಾಡ್ತಾ ಇದ್ರು. ಇದಕ್ಕೆ ಕಾರಣವಾಗಿದ್ದು ಯಾರೋ ಕಿಡಿಗೇಡಿಗಳಲ್ಲಾ, ಪುಡಿರೌಡಿಗಳಲ್ಲ ನಂಬಿದ್ರೆ ನಂಬಿ ಬಿಟ್ರೆ ಬಿಡಿ. ಈ ರಾದ್ಧಾಂತಕ್ಕೆಲ್ಲ ಕಾರಣ ನಮ್ಮ ದೇಶ ಕಾಯೋ ಸೈನಿಕರು.

ವಕ್ತೃ : ಹೀಗಾದ ತಕ್ಷಣ ಅದು ಇನ್ನೂ ಮಾಬು ಜಾಸ್ತಿ ಆದಮೇಲೆ ಜನಾ ಎಲ್ಲಾ ಅದನ್ನು ತಿಳಿದುಕೊಂಡು ಜನಾ ಅಲ್ಲಿಗೆ ರೈಲ್ವೆಸ್ಟೇಷನ್ನಿಗೆ ಬಂದ್ರು. ಇಷ್ಟೊತ್ತಿಗಾಗಲೇ ಪೊಲೀಸ್ ಪರ್ಸನ್ ಇಲ್ಲಿಗೆ DYSP ಮತ್ತು ಅಡಿಷನಲ್ S.P ಪೊಲೀಸ್ ಪರ್ಸನ್ಸ್ ಹೆಚ್ಚಾಗಿ ಕರುಕೊಂಡು ಹೋದ್ರು. ಇಷ್ಟೊತ್ತಿಗಾಗಲೇ ಇಡೀ ರೈಲ್ವೇ ನಿಲ್ದಾಣದಲ್ಲಿ ಒಂದು ರೀತಿ ಕುರುಕ್ಷೇತ್ರ. ಈ ಗೋರ್ಖಾ ರೆಜಿಮೆಂಟಿನಿಂದ ಒಂದು ರೀತಿ ಕುರುಕ್ಷೇತ್ರ. ಪೊಲೀಸ್‌ನೋರ್ನಾ ಕಂಡ ಕಂಡಲ್ಲಿ ಹೊಡಿಯೋದು. ಅಲ್ಲಿಯ ರೈಲ್ವೇ

ಪ್ರಾಪರ್ಟಿನ ಹಾಳು ಮಾಡೋದು. ಜತೆಗೆ ಪಬ್ಲಿಕ್‌ನ ಒಂದಿಬ್ಬರು ಪ್ಯಾಸೆಂಜರ್‌ಗೆ ಅವರೆಲ್ಲರಿಗೂ ಹೊಡದುಬಿಟ್ಟು ಒಟ್ಟಾರೆ ಇಡೀ ರೈಲ್ವೇ ನಿಲ್ದಾಣಂದ್ರೆ ಒಂದು ರೀತಿ ಕುರುಕ್ಷೇತ್ರ ಮಾಡಿದ್ರು.

ವರದಿಗಾರ : "ಅದು ಗುರ್ಖಾ ರೆಜಿಮೆಂಟ್ ಆವೊತ್ತು ಮೂರ್ಖರ ಹಾಗೆ ವರ್ತನೆ ಮಾಡಿದ್ರು. ಅನ್ನೋದನ್ನ ಬಿಟ್ರೇ, ನಮ್ಮ ದೇಶ ಕಾಯೋದ್ರಲ್ಲಿ ಪ್ರಾಣಾ ಕೊಡೋದ್ರಲ್ಲಿ ಈ ಗೂರ್ಖಾ ಜನ ಮೂರೊತ್ತು ಹಿಂದೆ ಬಿದ್ದಿಲ್ಲ. ಇಂತ ಸೈನಿಕರೇ ಪೊಲೀಸ್ನೋರ ಮ್ಯಾಲೆ ಹಲ್ಲೆ ಮಾಡ್ತಾರಂದ್ರೆ!?"

ವಕ್ತ : ಇಲ್ಲಿನ ಈ ನೌಕಾನೆಲೆಯಲ್ಲಿ ಕಳೆದ ಒಂದು ತಿಂಗಳಿಂದ ಈ ನಮ್ಮ ಭಾರತೀಯ ಭೂಸೇನಾ ಗೂರ್ಖಾ ರೆಜಿಮೆಂಟ್‌ನ ಒಂದು ನೂರು ಜನಾ ಸೈನಿಕರು ಜಂಟಿಯಾಗಿ ತರಬೇತಿ ತಗೋಳ್ತಾ ಇದ್ರು. ಸೋ ನಿನ್ನೆ ಅವರಿಂದ ಈಗ ಆಲ್ ರೆಡಿ ಒಂದು ಅರವತ್ತು ಜನ ಹೋಗಿದ್ದಾರೆ. ಎಲ್ಲಿ? ಚೆನ್ನೈಗೆ ಪಾಸಾಗಿದ್ದಾರೆ. ಮುಗಿಸಿ ಆಮೇಲೆ ಮುವ್ವತ್ತು ಜನರಷ್ಟು ಇಲ್ಲಿಂದಾ ಅಂದ್ರೆ, ನಿನ್ನೆ ಚೆನ್ನೈಗೆ ಹೋಗಲಿಕ್ಕೆ ಆಮೇಲೆ ಚೆನ್ನೈಗೆ ಹೋಗೋ ಕಾರ್ಯಕ್ರಮ ಇತ್ತು. ಸೋ ನಿನ್ನೆ ಬೆಳಿಗ್ಗೆ ಅಷ್ಟೇ ಹೋಗಿದಾರೆ. ಅಲ್ಲಿ ಮಧ್ಯಾಹ್ನ ಅಲ್ಲೇನೋ ರೈಲ್ವೇ ಸ್ಟೇಶನ್ನಲ್ಲಿ ಒಂದು ಸ್ವಲ್ಪ ಗಲಾಟೆ ಆಯ್ತು.

ವರದಿಗಾರ : "ಈ ಗೂರ್ಖಾ ಪಡೆ ಕಾರವಾರಕ್ಕೆ ಬಂದಿದ್ದು ತರಬೇತಿಗಾಗಿ. ಇಲ್ಲಿನ ನೌಕಾನೆಲೆಗೆ ಟ್ರೈನಿಂಗ್‌ಗೆ ಅಂತಾ ಬಂದಿದ್ದು ಸುಮಾರು ನೂರು ಜನಾ ಗೂರ್ಖಾರು ಒಂದು ತಿಂಗಳ ತರಬೇತಿ ಮುಗಿಸಿದ ನಂತರ, ಅರವತ್ತು ಜನಗಳ ಒಂದು ತಂಡ ಆಗಲೇ ಹೋಗಿತ್ತು. ಉಳಿದಿರೋ ನಲವತ್ತು ಜನ ಗಾಂಚಾಲಿ ಗೂರ್ಖರು ಮಾತ್ರ ಮೊನ್ನೆ ಬುಧವಾರ ಸಿರವಾರ ರೈಲ್ವೇ ನಿಲ್ದಾಣಕ್ಕೆ ಬಂದ್ರು. ಸಿರವಾರದಿಂದ ಮಂಗಳೂರಿಗೆ, ಮಂಗಳೂರಿಂದ ಚೆನ್ನೈಗೆ ಹೋಗಿ ಅಲ್ಲಿಂದ ಡೆಲ್ಲಿಗೋ ಮತ್ತೆಲ್ಲಿಗೋ ಹೋಗೋದು ಅವರ ಪ್ಲ್ಯಾನ್ ಆಗಿತ್ತು. ಆದ್ರೆ ಆ ಟೀಮ್‌ನ ಕ್ಯಾಪ್ಟನ್ ಅರಿಸಿಕೊಂಡಿದ್ದ ಮೂರ್ಖಾ, ದಾರಿ ಗೂರ್ಖಾ ಮಹೇಶಕರ್ಕಿ ಮಾಡಿದ ಒಂದೇ ಒಂದು ಎಡವಟ್ಟು ದೊಡ್ಡ ರಾದ್ಧಾಂತಕ್ಕೆ ಕಾರಣ ಆಗಿ ಹೋಯ್ತು.

ಯಾಕೆ ಅಂದ್ರೆ ಏನು ಇವ್ರು ಸಿಗರೇಟ್ ಸೇದುವಾಗ ಆ ರೆಜಿಮೆಂಟಿನ ಕ್ಯಾಪ್ಟನ್ ಕರ್ಕಿ ಅಂತ ಹೇಳಿ ಅವ್ರು ಸಿಗರೇಟ್ ಸೇದುತ್ತಾ ಇದ್ರು. ಅಲ್ಲಿ ಆಮೇಲೆ ಸ್ಟೇಷನ್ ಕಮ್ಯಾಂಡರ್ ರೈಲ್ವೇ ಸ್ಟೇಷನ್ನಿನಿಂದ ಯಾರೋ ಒಬ್ರು ಮಾಸ್ಟರ್ ಪರವಾಗಿ ಅವರು ಕೇಳಿದ್ರು. ನೀವು ದಯವಿಟ್ಟು ಇಲ್ಲಿ ಸಿಗರೇಟು ಸೇದಬ್ಯಾಡ್ರಿ ಅಂತ ಹೇಳಿದ್ರು. ಅದಕ್ಕೆ ಈ ಮನುಷ್ಯ ಸ್ವಲ್ಪ ಇಗೋ ಆಗಿರಬೇಕು. ಅವನಿಗೆ ಅಂದರೆ ತಾನೊಬ್ಬನು ಸೈನ್ಯದೋನು ತನಗೆ ಏಕವಚನದಲ್ಲಿ ಮಾತಾಡಸ್ತೋನೆ ಎಂಬ ಭಾವನೆ. ಅದಕ್ಕೆ ಅವರು ಏಕ್‌ಧಮ್ ನೀನು ನನ್ನನ್ನು ಏಕವಚನದಲ್ಲಿ ಯಾಕ್ ಮಾತಾಡಿಸ್ದೆ ಅಂತಾ ಕೇಳಿದ್ರು. ಅದಕ್ಕೆ ಅಷ್ಟೊತ್ತಿಗಾಗಲೇ ಅವನಿಗೆ ಈ ಕ್ಯಾಪ್ಟನ್ ಜೊತೇಗಿದ್ದೋರೆಲ್ಲಾ ಬಂದು ಅವನ ಮೇಲೆ ಅಟ್ಯಾಕ ಮಾಡಿದ್ರು. ರಮೇಶ ಅತ್ಹೇಳಿ ಅವ್ರು ಸ್ಟೇಷನ್ ಮಾಸ್ಟರ್ ಪರವಾಗಿ ಯಾರೋ ಇದಾರೆ. ಅವರ ಇನ್‌ಚಾರ್ಜ್ ಸೋ ಇದಾದ

ಮೇಲೆ ಅವ್ರು ಅಲ್ಲಿ ರೈಲ್ವೇ ಪಡೆಯವರಿದಾರೆ. ಅವರೆಲ್ಲ ಬಂದು ಇದನ್ನು ಎನ್‌ಕ್ವೈರಿ ಮಾಡೋವಾಗ ಅವರಿಗೂ ಒಂದು ನಾಲ್ಕು ಜನರಿಗೆ ಹೊಡದಿದಾರೆ.

ವರದಿಗಾರ : "ಸಿಗರೇಟ್ ಸೇವನೆ ಆರೋಗ್ಯಕ್ಕೆ ಹಾನಿಕರ. ಹಾಗಂತ ಸಿಗರೇಟ್ ಪ್ಯಾಕ್ ಮೇಲೆ ಪ್ರಿಂಟ್ ಮಾಡಿರ್‍ತಾರೆ. ಬಹುಶಃ ಪ್ರಿಂಟ್ ಮಾಡ್ದೇ ಹೋಗಿದ್ದಿದ್ರೆ ಇದ್ರಲ್ಲೇನು ಚಿಕ್ಕಿರಲಿಕ್ಕಿಲ್ಲ ಅಂತಾ ಸಾಕಷ್ಟು ಜನಾ ಸೇದುತ್ತಾ ಇರಲಿಲ್ಲವೇನೋ. ಹೈಟಲಗಾ ... ಆ ಕಥೆ ಹಾಳಾಗೋಗಲೀ ಆದ್ರೆ ಸಿಗರೇಟ್ ಸೇದೋದು ಬೇರೆಯವರ ಆರೋಗ್ಯಕ್ಕೆ ಹಾನಿಕರ ಅನ್ನೋದು ಮಾತ್ರ ಐ.ಟಿ.ಸಿ ಮೇಲಾಣೇ. ಮೊನ್ನೆ ಕ್ಲೀಯರ್‍ರಾಗಿ ಹೋಯ್ತು."

"ಸಿಗರೇಟ್ ಸೇದುದಾ ಹೋದರೇ ಟಾಯ್ಲಟ್ಟಲ್ಲೇ ಪ್ರಾಬ್ಲಂ ಶುರುವಾಗುತ್ತಂತೆ. ಸೇದಿದ್ರೆ ಮನೆಯಲ್ಲೋ ಮತ್ತೆಲ್ಲೋ ಸೇದುಕೊಳ್ಳಿ. ನಿಷೇದಿತ ಜಾಗದಲ್ಲಿ ಯಾಕಪ್ಪಾ ಸಿಗರೇಟ್ ಸೇದಬೇಕು ಅಂಥ ಕೇಳಿದ್ರೆ ಈ ಗೂರ್ಖಾ ನನ್ನೂ ಕೆಟ್ಟದ್ದನ್ನು ಸುಟ್ಟುಬಿಡೋ ಗಾಂಧೀಜಿ ಅನ್ನೋ ಹಾಗೆ ಮೈಮೇಲೆ ಬೀಳೋದಕ್ಕೆ ಬರ್‍ತಾನಲ್ರೀ. ಅಲ್ಲಾ ಕಣಯ್ಯ ಇದು ರೂಲ್‌ಸೂ... ಸಿಗರೇಟ್ ಸೇದೋ ಹಾಗಿಲ್ಲ. ಅಂದದ್ದೇ ತಡಾ ನನ್ಯಾರು ಗೊತ್ತಾ? ಈ ದೇಶದ ಸೈನಿಕ ನನ್ನನ್ನು ಕೇಳೋದಕ್ಕ ನೀನ್ಯಾರು? ಅಂಥ ಪೊಲೀಸ್ನೋರ್‌ಗೆ ತಪರಾಶಿಬಿಟ್ಟಾ ಅಷ್ಟು ಮಾಡಿದ್ದೇ ತಡಾ ... ಮರೀ ಗೂರ್ಖಾಗಳೆಲ್ಲ ತಮ್ಮ ಚಾಕೂ ತಗದೇ ಬಿಟ್ರಲ್ಲ."

ವಕ್ತ : ನೀವೂ ದೇಶರಕ್ಷಣೆ ಮಾಡೋರು... ದೇಶ ರಕ್ಷಣೆ ಮಾಡೋರು. ಆ ಪೋಲಿಸರು ಬಂದು ಛಂದವಾಗಿ ಹೇಳಿದರೂ ಸಿಗರೇಟ್ ಸೇದ್‌ಬಾರ್‍ದು ಇಲ್ಲಿ ಅಂತ ಅಂದಾಗ ಅಲ್ಲಿ ನೀವು ಆ ಕಾಲಿನಲ್ಲಿ ಇದ್ದ ಕತ್ತೀನ ತಗೊಂಡು ಪೊಲೀಸರಿಗೆ ಹೊಡಿಯೋದು ಅಂದ್ರೆ ಏನು ಜನಾ ಯಾರಿಗೆ ಸುಮ್ನಿರ್‍ತಾರೆ. ಎಷ್ಟೋ ಗಲಾಟೆ ಮಾಡಿದ್ರು. ಆಮೇಲೆ ಜಿಲ್ಲಾಧಿಕಾರಿಗಳು ಹೋಗಿ ಸಾಂತ್ವಾನ ಹೇಳಿ ಅವಾಗ ಯಾರು ರಕ್ಷಣೆ ಮಾಡಿದ್ರು? ನಿಮ್ದು ಪೊಲೀಸ್ ರಕ್ಷಣೆ ಮಾಡಿದ್ರು. (ಆಮೇಲೆ ಜಿಲ್ಲಾಧಿಕಾರಿಗಳು ಹೋಗಿ) ಆ ಇಲ್ಲಾಂದ್ರ ನಿಮ್ಗೆ ಲೋಕಲ್ ಜನ್ರೂ ನಿಮ್ನ ಇರಿಸ್ತಿರಲಿಲ್ಲ. ಆದ್ರೆ ಆವಾಗ ಪೋಲಿಸ್ರು ನಿಮ್ನ ಜೋಪಾನ ಮಾಡಿ ನಿಮ್ಮನ್ನು ನಿಮ್ಮ ಸ್ಥಾನಕ್ಕೆ ಕಳಿಸಿದ್ರು. ಆವಾಗ ಡಿ.ಸಿ.ಯವರು ಬಂದು ಅವ್ರು ಆಫೀಸರು ಬಂದ್ರು. ಅವ್ರು ಆಫೀಸರ್ ಏನ್ ಹೇಳ್ತಿದಾರಂತೆ. ಯಾರ್ ಮುಂದೆ ಬಂದ್ರೆ ಅವರಿಗೆ ಕತ್ತಿ ಹಾಕಿಬಿಡ್ರಿ. ಅಂತ ಅಂದ್ರ ಏನ್ ಅರ್ಥಾ ಅದು ಹ್ನಾಂ. ಹ್ನಾ ನಾವು ನೆಲ, ಜಲ ಕಳಕೊಂಡು ನಾವು ಕೊಟ್ಟ ಜಾಗದಲ್ಲಿ ಸೇದಿತೆಂದು ಹ್ನಾಂ ನಮ್ಮನ್ನು ಗಲಭೆ ಎಬ್ಬಿಸೀರಂದ್ರಾ ಮಾಡ್ತೀರಿ ಅಂದ್ರೇ?

ವರದಿಗಾರ : "ಸೈನಿಕರೂ ಅಂದ್ರೆ ಯಾರೂ? ನಮಗೆ ಅವರ ಬಗ್ಗೆ ಇರೋ ಗೌರವ ಏನು? ಅವರ ದೇಶಭಕ್ತಿ ಎಂಥಾದ್ದು? ಅವರ ತ್ಯಾಗ ಎಂಥಾದ್ದು! ನಾವು ಯಾವತ್ತಾದ್ರು ಅದನ್ನು ಪ್ರಶ್ನೆ

ಮಾಡೋದು ಸಾಧ್ಯನಾ? ಜಾಸ್ತಿ ಹಿಂದೆ ಬೇಡ. ಕೆಲವರ್ಷಗಳ ಹಿಂದೆ ಕಾರ್ಗಿಲ್‌ನಲ್ಲಿ ಯೋಧರು ಸತ್ತಾಗ ಇಡೀ ದೇಶ ಅವರಿಗಾಗಿ ಪ್ರಾರ್ಥನೆ ಮಾಡಿತ್ತು. ಅವರಿಗಾಗಿ ಕಣ್ಣೀರು ಹಾಕಿತ್ತು. ಯಾವ ತಾಯಿ ಹೆತ್ತ ಮಗನೋ ಸತ್ತು ಊರಿಗೆ ಶವವಾಗಿ ಬಂದಾಗ್ಯ ತಮ್ಮ ಮನೆ ಮಗನ ಸಾವು ಅನ್ನೋ ಹಾಗೆ ಜನಾ ಸೇರ್ತಾರೆ. ಅದು ನಮ್ಮ ಸೈನಿಕರಿಗಿರೋ ಗೌರವ. ಒಬ್ಬ ಸಿಪಾಯಿಗಿರೋ ಹೀರೋಗಿರಿ ಮುಂದೆ ಯಾವ ಅಮಿತಾಬಚ್ಚನ್ನು ಇಲ್ಲಾ. ಯಾವ ಶಾರೂಖ್‌ಖಾನೂ ಇಲ್ಲ. ಅಷ್ಟು ಎತ್ತರದಲ್ಲಿರೋ ಸೈನಿಕ ಪಡೆಯ ಗೂರ್ಖಾ ರೆಜಿಮೆಂಟ್ ಮೊನ್ನೆ ಕಾರಾವಾರದಲ್ಲಿ ಮಾಡಿದ್ದು ಮಾತ್ರ ಅಪ್ಪಟಾ ಗೂಂಡಾಗಿರಿ."

ವಕ್ತ : ಈಗ ನ್ಯೂ ಈಯರ್ ಆಯ್ತು. ನ್ಯೂ ಈಯರ್‌ದಲ್ಲಿ ಹೋಟೆಲ್‌ನಲ್ಲಿ ಕೂತು ಹೋದ ಜನರಿಗೆಲ್ಲಾ ಸುಮ್ನೆ ಏನಾದರೂ ಮಾಡಿ ಆ ಇದು ಬ್ಲೇಡಿಂದ ಅವರ ಕಿವಿ ಕೊಯ್ದ್ರು. ಈ ಹೋಟೆಲ್ ಸದಾನಂದದಲ್ಲಿ ಆದ್ರೂ ಜನಾ ಸುಮ್ನೆ ಇದ್ರು. ಆದ್ರೆ ಇವತ್ತು ಪೊಲೀಸ್ನೋರು ಮ್ಯಾಲೆ ಚಾರ್ಜ್ ಆಯಿತಲ್ಲಾ ಪೊಲೀಸರಿಗೆ ಹೊಡೆದ್ರು. ಆದ್ದರಿಂದ ನಮ್ಮ ಜನಾ ಸುಮ್ನೆ ಇರಲಿಲ್ಲ. ಜನಾ ರೊಚ್ಚಿಗೆದ್ದು ಅವರ ಏನೋ ಲುಕ್ಷಾನಾ ಮಾಡಿರ್‍ಬೇಕು. ನಾನು ತಪ್ಪಂಥ ಹೇಳೋದಿಲ್ಲ. ಯಾಕಂದ್ರೆ ಜನ್ರು ಒಂದು ಸಲ ರೊಚ್ಚಿಗೆದ್ರೆ ಬಿಡೋದಿಲ್ಲ. ನಮ್ಮನ್ನು ಅವರು ರಕ್ಷಣೆ ಮಾಡೋರು ಪೋಲಿಸರು. ಆ್ನ ಇಂಥಾ ನೆವ ಬಂದು ನಮ್ಮನ್ನು ಈವೊತ್ತು ಈ ಕಾರಾವಾರ ಇರ್ತದೋ ಇಲ್ಲವೋ ಗೊತ್ತಿಲ್ಲ. ನಮ್ಮ ಜೀವಾ ಎಲ್ಲಾ ನಮ್ಮ ಮುಷ್ಠಿಯಲ್ಲಿದೆ. ಈಗ ಈ ಕಡೆ ಕೈಗಾ ಬಾಂಬ್‌ಸ್ಫೋಟಾ ಆದ್ರೆ ನಾವು ಇರೋದಿಲ್ಲ. ಈ ಸೀ ಬಾರ್ಡದಲ್ಲಿ ಮೊನ್ನೆ ಒಂದು ಎಲಿಕ್ಯಾಪ್ಟರ್ ಬಂತು. ಆದರೆ ಅದು ನ್ಯೂಸ್ ಇನ್ನೂ ಪಬ್ಲಿಕ್ ಮಾಡಿಲ್ಲ. ಯಾಕೆಂದ್ರೆ ಆ ಒಂದು ಬಾಂಬು ತುಂಬಿದಂಥ ಒಂದು ಪೆಟ್ಟಿಗಿ ಮೇಲಿನಿಂದ ಕೆಳಗೆ ಬಿದ್ದಿತ್ತು. ಅದೇನಾದ್ರೂ ಸ್ಫೋಟ್ ಆದ್ರೆ ಅಲ್ಲಿ ಎಲ್ಲಾ ಮನೆಗಳು ಒಂದೈವತ್ತು, ಅರವತ್ತು ಮನೆಗಳಿದ್ದವು. ಮಕ್ಕಳ, ಜನಗಳದು. ಆ ಮಕ್ಕಳಿಗೆ ಗೊತ್ತಾಗಿಲ್ಲ. ಅವ್ರು ತೆಗೆದು ನೋಡ್ತಾ ಇದ್ರು ಏನಿದು ಅಂಥಾ. ಆವಾಗ ಅವರೆಲ್ಲಾ ಜನ ಬಂದು ಅವರ್‍ನ ಹೊಡದು, ಬಡದು ಹೀಗೆಲ್ಲಾ ಮಾಡಬಾರ್‍ದು ಅಂತ ಅಲ್ಲೇ ಸುಮ್ನೆ ಬಿಟ್ಟಿದಾರ ಅದನಾ. ಇಂಥಾ ಒಂದು ಘಟನೆಗಳು ನಡೀತಾ ಇದೆ. ಆದ್ದರಿಂದ ನಾನು ಈ ಹೊತ್ತು ಮುಖ್ಯಮಂತ್ರಿಗಳಿಗೂ ಬರ್‍ದಿದೀನಿ.

ವರದಿಗಾರ : "ಸೈನಿಕರೂ ತಮಗಿರೋ ಗೌರವ ಹಾಗೂ ಸ್ವಾತಂತ್ರ್ಯದ ಮುಸುಕಿನೊಳಗೆ ಸಾಕಷ್ಟು ತಪ್ಪುಗಳನ್ನು ಮಾಡಿದ ಉದಾಹರಣೆಗಳಿವೆ. ಆದ್ರೆ ಇವುಗಳನ್ನೇ ದೊಡ್ಡದು ಮಾಡಿ ಅವರ ನೈತಿಕ ಸ್ಥೈರ್ಯ ಹಾಳು ಮಾಡಬಾರ್‍ದು ಅನ್ನೋ ಒಂದೇ ಕಾರಣಕ್ಕೆ ಎಲ್ರೂ ಸುಮ್ನೆ ಇರ್ತಾರೆ. ಆದ್ರೆ ಮೊನ್ನೆ ಸಿಗರೇಟು ಸೇದಬಾರದು ಅಂಥಾ ಹೇಳಿದ್ದಕ್ಕೆ ಸಿಕ್ಕ ಸಿಕ್ಕೋರ್ ಮೇಲೆ ಚಾಕೂ ಹಿಡುಕೊಂಡು ಹಲ್ಲೇ ಮಾಡಿದ್ದಾರೆಂದ್ರೆ ಈ ಪರ್ಟಿಕ್ಯುಲರ್ ಗುರ್ಖಾ ರೆಜಿಮೆಂಟ್ ಕಲ್ಚರ್ ಎಂಥಾದ್ದು ಇವರಿಗೆ ಎಂಥಾ ದೇಶಪ್ರೇಮ ಇದೆ. ಜನರನ್ನು ದೇಶವನ್ನೇ ಕಾಯಬೇಕಿದ್ರೆ ನಾಗರೀಕರನ್ನೇ ಪೋಲಿಸ್ನೋರ ಮನಸ್ಸಿಗೆ

ಬಂದ ಹಾಗೆ ಹೊಡೆದು ಹಾಕ್ತಾರಂದ್ರೇ ಇವರಿಗೆ ಹೇಳೋರು, ಕೇಳೋರು ಯಾರೂ ಇಲ್ಲ್ವಾ! ..."

ಯಾವಾಗ ಗೂರ್ಖಾ ಪಡೆಯ ಗೂಂಡಾಗಿರಿ ಟೂಮಚ್ ಆಯ್ತೋ ಆಗ ಜನಗಳು ಕೆರಳಿದ್ದಾರೆ. ನಮ್ಮೂರಿಗೆ ಬಂದು ನಮ್ಮ ಪೊಲೀಸ್ನೋರ ಮೇಲೆ ಕೈ ಮಾಡ್ತೀರಾ ಅಂದುಕೊಂಡು ಜನಾ ರೊಚ್ಚಿಗೆದ್ದೇಬಿಡ್ತಾರ ... ಸೈನಿಕರೇ ಇರಬಹುದು, ಪೊಲೀಸ್ನೋರೇ ಇರಬಹುದು. ಅನ್ಯಾಯ ಮಾಡಿದೆ ಈ ಜನಾ ಸುಮ್ನೆ ಇರೋದಿಲ್ಲ. ಇಷ್ಟಕ್ಕೂ ಇವರೆಲ್ಲಾ ಇರೋದೇ ಜನ ಸೇವೆಗಾಗಿ. ಗೂರ್ಖಾ ಶಿಖಾಮಣಿಗಳು ಮೊದಲ ರೈಲ್ವೇ ಪೊಲೀಸ್ನೋರ ಮಂಡೇ ಒಡಿತಾರೆ. ನಂತರ ಕಾರಾವಾರ ಪೊಲೀಸ್ನೋರ ಬುರುಡೆಬಿಡ್ತಾರೆ. ಅಡ್ಡ ಬಂದ ನಾಗರೀಕರನ್ನು ಅಡ್ಡಾಡಿಸಿಕೊಂಡು ಹೊಡಿತಾರೆ. ಎಲ್ಲರ ಕೈಲೂ ಗೂರ್ಖರ ಚಾಕು ರಕ್ತಾ ಬೇಕೂಂತಾ ನಿಗರಾಡ್ತಾ ಇತ್ತು. ಜನಗಳಾದ್ರೂ ಎಷ್ಟೂ ಅಂತಾ ಸಹಿಸ್ಕೋತಾರೆ. ಗೂರ್ಖಾ ಪಡೆಯ ಹಕ್ಕು ಮೀರಿದ ವರ್ತನೆ ಕ್ಷಣದಲ್ಲಿ ಊರಿಗೆಲ್ಲಾ ಹಬ್ಬಿದೆ. ಸ್ಥಳೀಯ ಜನರೆಲ್ಲ ಅತ್ತ ದೌಡಾಯಿಸಿದ್ದಾರೆ. ಅಲ್ಲಿತನಕ ರೈಲ್ವೇ ಸ್ಟೇಶನ್ನಲ್ಲಿ ತಮ್ಮ ಮೋಟು ಕತ್ತಿ ಇಡ್ಕೊಂಡು ದಾಂಧಲೆ ಮಾಡ್ತಿದ್ದ ಪುಂಡ ಗೂರ್ಖರು. ಈ ಜನಸಾಗರ ಕಂಡು ಹೆದರಿಕಂಡು ಹಿಂದೆ ಸರಿದಿದ್ದಾರೆ.

ವಕ್ತೃ ೧ : ಮಿಲ್ಟ್ರಿಯವರಂದ್ರೆ ಏನ್ ಕೈಯಲ್ಲಿ ಏನ್ ಸಿಕ್ಕಿದ್ದು ತೆಗೆದ್ಕೊಂಡು ಇದು ಮಾಡಿದಾರೆ. ಮತ್ತೆ ಅವ್ರು ಗೂರ್ಖಾ ರೆಜಿಮೆಂಟಿನವರು ಜೊತೆಗೆ ಚಾಕೂ ಇರುತ್ತಲ ಸ್ಪೆಷಲ್ಲಾಗಿ ಅವರಲ್ಲಿರೋದದು. ನಮ್ಮ ಆರ್ಮಿ ಅದರಲ್ಲಿ ಸೋ ಅದನ್ನು ಅಲ್ಲಿ ಒಂದು ನಿಯಮ ಇದೆಯಂತೆ. ಒಂದು ಮೊನ್ನೆ ಚಾಕೂವನ್ನು ತೆಗೆದು ಅದಕ್ಕೇನಾದ್ರೂ ಒಂದು ರಕ್ತ ಕೊಡಬೇಕು ಅನ್ನೋದಿದೆ. ಅದಕ್ಕಾಗಿ ಅವ್ರು ಸಿಟ್ಟಿನಿಂದಾ ತೆಗೆದುಬುಟ್ಟು ಇದನ್ನು ಕಂಡವರ ಮೇಲೆ ಹಲ್ಲೆ ಮಾಡಿದಾರೆ. ಪಾಪ ಪ್ರಯಾಣಿಕರಿಗೆ ಸಹ ಒಂದೆರಡು ಜನಾ ಸಿಕ್ಕಿದಾರೆ.

ವರದಿಗಾರ : "ಕೊನೆಗೂ ಜನಶಕ್ತಿ ಕೈಮೇಲಾಗಿದೆ. ಗೂರ್ಖರೆಲ್ಲಾ ಹೆದ್ರಿಕೊಂಡು ರೈಲ್ವೇ ಸ್ಟೇಷನ್ನಿಗೊಂದು ರೂಮ್ ಸೇರಿಕೋತಾರೆ. ವಿಚಿತ್ರ ಅಂದ್ರೆ ಈ ಗೂರ್ಖರನ್ನು ಕಾಪಾಡಬೇಕಾದ್ರೆ ಮತ್ತೆ ಪೊಲೀಸ್ನೋರೇ ಬರಬೇಕಾಯ್ತು. ಆ ಗೂರ್ಖಾ ಒಬ್ಬ ಎರಡು ರೂಪಾಯಿ ಮುಖಾ ನೋಡ್ದೇ ಹಚ್ಚಿದ ಸಿಗರೇಟು ಹಾರಿಸಿ ಬಿಸಾಕಿದ್ದಿದ್ರೆ ಇಷ್ಟೆಲ್ಲಾ ಆಗ್ತಾನೇ ಇರಲಿಲ್ಲ. ಆದ್ರೆ ಜನಗಳು ಕೋಪಾ ಹಾರ್ಸೋದು ಮಾತ್ರಾ ಅಷ್ಟು ಸುಲಭ ಆಗಿರಲಿಲ್ಲ."

ಸೈನ್ಯದವರಿಗೆ ವಿಶೇಷವಾಗಿ ಅಷ್ಟು ಈಗ ನಮ್ಮ ಇಂಡಿಯನ್ ಪೊಲೀಸ್ ಆ್ಯಕ್ಟ್ ಅದೇನು ಅನ್ವಯ ಆಗೋಲ್ಲ. ಸೋ ಅದಕ್ಕಾಗಿ ಅವರಿಗಾಗಿ ಕೋರ್ಟ್ ಮಾರ್ಷಿಲ್ ಅಂಥಾ ಇದ್ದೇ ಇರುತ್ತೆ. ಈಗ ಅವರು ರಕ್ಷಣೆ ಮಾಡಬೇಕಿತ್ತು ಸರಿ ಆದ್ರೆ ಅವರಿಗೆ ಇತ್ತೀಚಿನ ದಿನಗಳಲ್ಲಿ ಈಗ ನಾವು ದೇಶದ ತುಂಬಾ ಈ ಥರಾ ಸೈನಿಕ ರಂಪಾಟಗಳನ್ನು ನೋಡ್ತಾ ಅದೀವಿ. ಈ ಕಲ್ಕತ್ತದಲ್ಲಿ ಆಯ್ತು. ಹೀಗೆ ಕೆಲವು ವರ್ಷಗಳ ಹಿಂದೆ ಬೆಳಗಾಂನಲ್ಲಿ ಸಹ ಇಂಥಾದು ನಡೆದಿತ್ತು.

* * *

"ಕ್ರೈಂಸ್ಟೋರಿ" ಉದಯ ಟಿ.ವಿ ೨೩.೦೨.೨೦೦೭ (ರಾತ್ರಿ ೧೧.೦೦ ರಿಂದ ೧೧.೩೦)

("ರಾಯಚೂರು ಪೊಲೀಸ್‌ಪೇದೆ ತಾಯಮ್ಮನ ಸ್ಟೋರಿ")

ವರದಿಗಾರ : "ಮದುವೆಗಳು ಸ್ವರ್ಗದಲ್ಲೆ ನಡೆಯುತ್ತವೆ ಅಂತಾರೆ ಇರಬಹುದೋ ಏನೋ ಅಪ್ಪಾ ಯಾರು ನೋಡಿದ್ದಾರೆ ಹೇಳಿ. ಆದ್ರೆ ಸ್ವರ್ಗದಲ್ಲಿ ಮದುವೆ ನಡೆದ ಮೇಲೆ ಅಲ್ಲಿ ಯಾರೋ Go to hell ಅಂಥಾ ಶಾಪ ಕೊಡ್ತಾರೆ ಅನ್ನಿಸುತ್ತೆ. ಕಣ್ರೀ ಅಂಥವರು ಗಂಡ ಹೆಂಡ್ತಿಯರಾಗಿ ಭೂಮಿಗೆ ಬರ್ತಾರ ನೋಡಿ. ಭೂಲೋಕದಲ್ಲಿ ನರಕಾ ನೋಡಬೇಕು ಅನ್ನೋ ಹಾಗಿದ್ರೆ ಮದುವೆ ಆಗಬೇಕು. ಹೈತ್‌ಲಗಾ! ಹಾಗಂತಾ ಯಾರೋ ದಾರ್ಶನಿಕರು ಹೇಳಿದ ಮಾತು, ಇಂತಹ ಪರಿಸ್ಥಿತೀಲಿ ರಾಯಚೂರಿನ ಪೊಲೀಸ್ ಪೇದೆ ಲವ್ ಮಾಡಿ ಮದುವೆ ಆಗಿದ್ದು ಮಹಾಂತೇಶಾ ಅನ್ನೋ ಲಫಂಗನನ್ನು. ಮದುವೆಯಾಗಿ ಮನೆ, ಮಕ್ಳು, ಸಂಸಾರ ಅಂಥಾ ಜೀವನ ಮಾಡಬೇಕಾಗಿದ್ದ ತಾಯಮ್ಮ, ತಾನಿದ್ದ ಪೊಲೀಸ್ ಕ್ವಾರ್ಟರ್ಸ್‌ನಲ್ಲೇ ಆತ್ಮಹತ್ಯೆ ಮಾಡ್ಕೋತಾಳೆ. ಆದ್ರೆ ಅದು ಆತ್ಮಹತ್ಯೆಯಲ್ಲಾ! ಕೊಲೆ ಅಂತಾರೆ ತಾಯಮ್ಮನ ಸಂಬಂಧಿಕರು."

ತಂದೆ : "ಕೊಲೆ ಅವನೇ ಮಾಡಿದಾನೆ. ಮಹಾಂತೇಶ ಮಾಡ್ಯಾನೆ. ಕೊಲೆ ತಾಯಿ- ತಂದೇನೇ ತಿಳಿಸಿಲ್ಲ. ಒಳಗೊಳಗೇ ಹಿಂಗಾ ಮಾಡಿಬಿಟ್ಟಾನ ಅವನು.

ವರದಿಗಾರ : "ಅಲ್ಲಿಗೆ ವಿದ್ಯಾವಂತ ಬುದ್ಧಿವಂತೆ, ಧೈರ್ಯವಂತೆ ಅನ್ನಿಸಿಕೊಂಡಿದ್ದ ತಾಯಮ್ಮನ ಬದುಕು ಮುಗಿದು ಹೋಗುತ್ತೆ. ಮಾತು ನಿಂತು ಹೋಗಿತ್ತು. ಆನಂತರ ಮಾತಾಡಿದ್ದು ಅವಳು ಬರೆಸಿಟ್ಟು ಹೋದ ಕೊನೆಯ ಪತ್ರ."

ಪತ್ರವಾಚನ : "ಪ್ರೀತಿಯ ಮಹಾಂತೂಗೆ| ಆತ್ಮೀಯ ನಮಸ್ಕಾರಗಳು| ಮಹಾಂತೂ| ನಾನು ಇಲ್ಲಿ ಒಬ್ಬಳೇ ಚೆನ್ನಾಗಿದ್ದೀನಿ ಅಂಥಾ ತಿಳಕೊಂಡಿದ್ದೀಯಾ| ನಾನು ಸಂತೋಷವಾಗಿದ್ದೀನಿ ಅಂತಾ ತಿಳಿ ಕೊಂಡಿದ್ದೀಯಾ| ಇಲ್ಲಿ ಒಂದೊಂದು ದಿನಾನೂ| ನಾನು ಎಷ್ಟು ಕಷ್ಟದಲ್ಲಿ ಕಳೀತಾ ಇದೀನಿ ಅಂತಾ| ನಿನಗೆ ಗೊತ್ತಲ್ಲಾ ಮಹಾಂತೂ| ಯಾಕೆಂದರೆ ನೀನಲ್ಲಿ ಸಂತೋಷವಾಗಿದ್ದೀಯಾ| ಬಹುಶಃ ನನ್ನ ನೆನಪೂ ಕೂಡ ನಿನಗೆ ಬರ್‍ತಾ ಇಲ್ಲಾ ಅನ್ನಿಸುತ್ತೆ| ಮಹಾಂತೂ ನಾನು ನಿನ್ನ ಜೀವನದಲ್ಲಿ ಬರೋದಕ್ಕೆ ನೀನೇ ಕಾರಣ| ನನ್ನ ಜೀವನದಲ್ಲಿ ನಡೆದಿರೋ ಎಲ್ಲಾ ವಿಷಯಗಳನ್ನು ತಿಳುಕೊಂಡೆ ತಾನೇ? ನೀನು ನನ್ನನ್ನು ಇಷ್ಟಪಟ್ಟಿದ್ದು ನನಗೂ ಬದಲಾಗಬೇಕೂಂತಾ ನೀನೇ ತಾನೇ ಹೇಳಿದ್ದು. ಹೇಳಿದ್ದಕ್ಕೆ ತಾನೇ ನಾನು ಬದಲಾದೆ. ಆದ್ರೆ ಕೊನೆಗೆ ನೀನೇ ನನ್ನ ದಾರಿ ತಪ್ಪಿಸಿಬಿಟ್ಟೆಲ್ಲಾ ಯಾಕ ಮಾಂತೂ|

ವರದಿಗಾರ : "ಯಾಕೇ? ಮಹಾಂತೇಶಾ ಅನ್ನೋ ನೀಚ ತಾಯಮ್ಮನನ್ನು ದಾರಿ ತಪ್ಪಿಸಿದ್ದು ಯಾಕೆ? ಯಾಕೇ ಅಂದ್ರೇ ತಾಯಮ್ಮ ಅವನ ತಂದೆ-ತಾಯಿಗೆ ಹಿಡಿಸಿರಲಿಲ್ಲ."

ಅಣ್ಣ : 'ಅವರ ತಂದೆ-ತಾಯಿ ಇನ್ನೊಂದು ಮದ್ವಿ ಮಾಡಿಕ್ಯಾ ಅಂತಾ ಹೇಳಿದ್ರು. ಇವನು ಮದುವೆ ಮಾಡ್ಕೊಂಡಿದ್ದು ಅವರಿಗೆ ಗೊರ್ತಿಲ್ಲ. ತಂದೆ-ತಾಯಿಗೆ ಗೊತ್ತಿಲ್ಲ. ನಮ್ಮಮ್ಮೋರಿಗೆ ತಿಳುಸ್ತೀವಿ ಅಂದ್ರೆ ಬ್ಯಾಡ ನಮ್ಮಮ್ಮಗೆ ಹಾರ್ಟ್‌ಅಟ್ಯಾಕ್ ಆದ ಹಂಗೆ ಹೀಗೆ ಅಂಥ ಹೇಳ್ತಿದ್ದ ಸಾರ್. ಹಂಗಾಗಿ ನಾವು ಏನೂ ಕೇಳ್ಲಿಲ್ಲ. ನಮ್ಮಮ್ಮೋರು ಕೇಳಿದ್ರು ಅವನು ಎಲ್ಲಿ ನಮ್ಮ ಮನ್ಯಾಗೆ ಗೊರ್ತಾಗುತ್ತೋ ಅಂದಕಾಸಿ ಕೊಲೆ ಮಾಡ್ಯಾನ ನಮ್ಮ ತಂಗೀನ.'

ವರದಿಗಾರ : "ಹೌದು! ಮಹಾಂತೇಶಾ ಅಧಿಕೃತವಾಗಿ ತಾಯಮ್ಮನನ್ನು ಮದುವೇ ಆಗಲೇ ಇಲ್ಲ. ತನ್ನ ಮದುವೆ ವಿಚಾರವನ್ನು ಅವನು ಮನೆಯಲ್ಲಿ ಹೇಳಿಯೂ ಇರಲಿಲ್ಲ. ಕೊನೆಗೆ ಗೊತ್ತಾದ ಮೇಲೂ ಅವನ ಹೆತ್ತವರೂ ಈ ಮದ್ವೇಗೆ ಮಾನ್ಯತೇ ಕೊಡ್ಲೂ ಇಲ್ಲ. ಅವರು ಕೊಡ್ದೇ ಹೋದ್ರೆ ಹಾಳಾಗಿ ಹೋಗ್ಲೀ. ಗಂಡಾ ಅನ್ನಿಸಿಕೊಂಡ ಅವಿವೇಕಿ ಮಹಾಂತೇಶನಿಗೆ ಏನಾಗಿತ್ತು ರೋಗಾ? ಯಾಕೆ ಅಂದರೆ ಅವನು ಮದುವೇನೇ ಬೇಡ ಅಂದುಕೊಂಡು ತನ್ನ ಪಾಡಿಗೆ ತಾನು ಇದ್ದ ಹುಡಿಗೀನಾ ಮನಸ್ಸು ಕೆಡ್ಸಿ ಮದುವೆ ಆಗಿದ್ದ."

ಪತ್ರವಾಚನ : "ಮಹಾಂತೂ ನಾನು ಯಾವತ್ತೂ ಯಾರ್ನೂ ಮದುವೆ ಮಾಡ್ಕೋಬಾರ್ದು ಅಂತಾ ಇದ್ದೆ. ನನ್ನ ಜೀವನದಲ್ಲಿ ಒಂದು ಘಟನೆ ನಡ್ದು ಯಾವ ಆಸೆಗಳು ಇಲ್ದೇ ಹಾಗೆ ಇದ್ದೆ. ನನ್ನ ಮನಸ್ಸಿನಲ್ಲಿ ಭಾವನೆಗಳೇ ಸತ್ತು ಹೋಗಿದ್ವು. ಹೇಗೋ ಹುಟ್ಟಿದೀನಲ್ಲಾ ಅಂಥಾ ಸಾಯೋದಕ್ಕಾಗದೇ ಬದುಕ್ತಾ ಇದ್ದೆ. ಆಗಿದ್ದು ಆಗಿಹೋಯ್ತು ಮದ್ವೆ ಮಾಡ್ಕೋ ಅಂಥಾ ಕೂಡಾ ಹೇಳ್ತಾ ಇದ್ರು| ಆದ್ರೆ ನಾನು ಅವರು ಮಾತನ್ನು ಕೇಳ್ಲೇ ಇಲ್ಲ. ಯಾಕ್‌ಗೊತ್ತಾ ಮಾಂತೂ, ನನಗೆ ಯಾರು ಜೊತೆಗೂ ಇರಲಿಕ್ಕೆ ಇಷ್ಟಾ ಇರಲಿಲ್ಲ. ನನ್ಗೆ ಯಾವುದ್ರ ಮೇಲೂ ಆಸೆ ಇರಲಿಲ್ಲ. ಸಾಯಬೇಕು ಅಂತಾ ಎಷ್ಟೋ ಸರಿ ಅನ್ಕೊಂಡೆ, ಆದ್ರೆ ಸಾಯೋದಕ್ಕೆ ನನ್ನಿಂದ ಸಾಧ್ಯಾನೇ ಇಲ್ಲ.

* * *

*** ವಾರೆಂಟ್ : ಟಿ.ವಿ. ೯ ಚಾನಲ್ (ದಿನಾಂಕ ೦೭.೦೪.೨೦೦೭)**

ವರದಿಗಾರ : ಎಲ್ಲಿ ಕತ್ತಲಿದೆಯೋ ಅಲ್ಲಿ ಎಚ್ಚರದ ಕಣ್ಣು. ಎಲ್ಲಿ ಕ್ರಿಮಿನಲ್ಸ್ ಇದಾರೋ ಅಲ್ಲೇ ನಮ್ಮ ಕ್ಯಾಮರಾ. ಕ್ರೈಂ ಲೋಕದಲ್ಲಿ ಈ ದಿನ ಕೋಲಾಹಲ ಎಬ್ಬಿಸಿದವರು ಯಾರು? ಯಾರ ಹೆಸರಲ್ಲಿದೆ? ಇವತ್ತಿನ ವಾರೆಂಟ್!

ಬಳ್ಳಾರಿಯ ದುರಾದೃಷ್ಟ ಹೇಗಿದೆಯೋ ನೋಡ್ರಿ, ಅಲ್ಲೊಂದ್ಕಡೆ ತಡೀಯೋಕ್ಕೆ ಸಾಧ್ಯನೇ ಇಲ್ಲಾ ಅನ್ನಿಸುವಷ್ಟು ಬಿಸಿಲು. ಮತ್ತೊಂದ್ಕಡೆ ಮ್ಯಾಂಗನೀಸ್ ಗಣಿಯ ಗೋಳು. ಜನರನ್ನು ಹೈರಾಣಾಗಿಸೋಕೆ ಈ ಎರಡು ಸಾಕಾಗಲಿಲ್ಲ ಅಂತಾ ಒಂದರ ಮೇಲೊಂದರಂತೆ ನಡೆಯುತ್ತಿರೋ ಕೊಲೆಗಳು. ಅದಕ್ಕೆ ರಾಜಕೀಯದ ಬಣ್ಣ. ಈ ಜನಾ ಅದನ್ನೆಲ್ಲಾ ಹೇಗ ಸಹಿಸಿಕೊಂಡಿದಾರೋ ಏನೋ ಕಣ್ರೀ.

ಇದು ಬಳ್ಳಾರಿ ಭಯಂಕರ ಬಿಸಿಲಿನ ಜಿಲ್ಲೆ. ಅಕ್ಕ ಪಕ್ಕದಲ್ಲಿ ಆಂಧ್ರಪ್ರದೇಶದ ಸರಹದ್ದು. ಕನ್ನಡಕ್ಕಿಂತ ಹೆಚ್ಚಾಗಿ ತೆಲುಗು ಮಾತ್ನಾಡೋ ಜನ. ಆಂಧ್ರಪ್ರದೇಶದ ರಕ್ತ ರಾಜಕಾರಣದಿಂದ ಹಿಡಿದು ಅಲ್ಲಿನ ಬಹುತೇಕ ಸಂಸ್ಕೃತಿಯನ್ನು ಇಲ್ಲಿ ಜನಾ ತಮ್ಮದಾಗಿಸಿಕೊಂಡಿದಾರೆ. ಈ ಜಿಲ್ಲೆಯಲ್ಲಿ ಅಪಾರವಾದ ಮ್ಯಾಂಗನೀಸ್ ಗಣಿಗಳಿವೆ. ಗಣಿಧೂಳಿನ ಹಣದಿಂದಾಗೀನೇ ಶ್ರೀಮಂತರಾದವರು ಇದಾರೆ. ಸ್ವಂತ ಬಳಕೆಗೇ ಅಂತಾ ಹೆಲಿಕ್ಯಾಪ್ಟರ್‌ಗಳನ್ನು ಇಟ್ಕೊಂಡವರಿದ್ದಾರೆ. ಇಲ್ಲಿನ ಇಡೀ ಮಣ್ಣಿಗೂ ಚಿನ್ನದ ಬೆಲೆಯಿದೆ. ಇಂಥ ಶ್ರೀಮಂತಿಕೆಯ ಪಕ್ಕದಲ್ಲಿಯೇ ಇಲ್ಲಿ ಕಿತ್ತು ತಿನ್ನೋ ಬಡತನ ಕೂಡ ಇದೆ. ಮಳೆಯಿಲ್ಲದೆ ಬೆಳೆ ತೆಗೆಯಲಾಗದ ರೈತಾ ಆಕಾಶ ನೋಡ್ತಾ ಕುಳಿತಿದಾನೆ. ಈ ಜಿಲ್ಲೆಯಲ್ಲಿ ಕುಡಿಯೋ ನೀರಿನ ವ್ಯವಸ್ಥೆ ಕೂಡ ಇಲ್ಲ. ಸರಿಯಾದ ರಸ್ತೆಗಳಿಲ್ಲ. ಗಣಿ ಲಾರಿಯ ಅಬ್ಬರಕ್ಕೆ ಎದ್ವ ತದ್ವಾ ಆದ ರಸ್ತೆಗಳ ರಿಪೇರಿಯೂ ಆಗಿಲ್ಲ. ಊರಿನ ಅಭಿವೃದ್ಧಿ ಕಡೆಗೆ ಇಲ್ಲಿನ ರಾಜಕಾರಣಿಗಳು ಯಾವತ್ತೂ ಗಮನ ಹರಿಸಿಲ್ಲ. ಗೃಹ ಸಚಿವ ಎಂ.ಪಿ.ಪ್ರಕಾಶ್, ಪ್ರವಾಸೋದ್ಯಮ ಸಚಿವ ಶ್ರೀರಾಮುಲು, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಸೂರ್ಯನಾರಾಯಣರೆಡ್ಡಿ ಇವರೆಲ್ಲಾ ಇದೇ ಜಿಲ್ಲೆಯಿಂದ ಎದ್ದು ಬಂದವರು. ಮನಸ್ಸು ಮಾಡಿದ್ದರೆ ಬಳ್ಳಾರಿ ಅಂಬೋ ಜಿಲ್ಲೆ ಇವತ್ತು ಏನೆಲ್ಲಾ ಆಗಬಹುದಿತ್ತು. ಆದ್ರೆ ಇಲ್ಲಿ ಮನೆ ಮಾಡಿಸೋದು ಅಪ್ಪಟ ರಕ್ತ ರಾಜಕಾರಣ.

ವಕ್ತ : "ಮುಖ್ಯಮಂತ್ರಿ ಆಪ್ತಕಾರ್ಯದರ್ಶಿಗಳಾದ ಸೂರ್ಯನಾರಾಯಣರೆಡ್ಡಿ ಅಂತೋರು ಆದ ನಂತರ ಬಳ್ಳಾರಿ ಜಿಲ್ಲೆಯಲ್ಲಿ ಐದು ಮರ್ಡರ್‌ಗಳು ಆಗಿದಾವೆ ಇವತ್ತು. ಹಿಂಗೆ ಬಿಟ್ಕೊಂಡ್ಹೋದರೆ ಆಪ್ತ ಕಾರ್ಯದರ್ಶಿ ಸೂರ್ಯನಾರಾಯಣರೆಡ್ಡಿಯೋರು ಸಂಪೂರ್ಣವಾಗಿ ಅವರಿಗೆ ಯಾರು ಧ್ವನಿ ಎತ್ತುತಾರೋ ಅವರ ವಿರುದ್ಧವಾಗಿ ಯಾರ್ ಮಾತಾಡುತಾರೋ ಅಂತಾ ವ್ಯಕ್ತಿಗಳನ್ನು ಮುಗಿಸುವಂತಾ ಪ್ರಯತ್ನ ನಡೆಸಿದಾರೆ ಇವತ್ತು. ಎಲ್ಲಾ ಅಧಿಕಾರಿಗಳು ಇವತ್ತು ರಾಚಪ್ಪೋರು ತುಂಬಾ ವರ್ಷಗಳಿಂದ

ಇಲ್ಲಿ ಇದ್ರೂ ಕೂಡ ರಾಚಪ್ಪೋರು ಸೂರ್ಯನಾರಾಯಣರೆಡ್ಡಿಯವರು ಕುರಿತು ಯಾರು ಧ್ವನಿಯನ್ನು ಎತ್ತುತಾರ ಅಂಥ ವ್ಯಕ್ತಿಗಳ ವಿರುದ್ಧವಾಗಿ ಪ್ರಾಣವನ್ನ ತೆಗೆದಿದ್ದಾರೆ ಇವತ್ತು."

ಹಾಗಂತಾ ಬಳ್ಳಾರಿಯ ಪೊಲೀಸ್ ಠಾಣೆಯೊಂದರ ಮುಂದೆ ಕುಳಿತು ಈ ರಾಜ್ಯದ ಸಚಿವನೊಬ್ಬ ಪೋಲಿಸರ ವಿರುದ್ಧ ತಮ್ಮದೇ ಸರ್ಕಾರದ ಅಂಗಪಕ್ಷವೊಂದರ ಶಾಸಕರ ವಿರುದ್ಧ ಪ್ರತಿಭಟಿಸಬೇಕಾದ ಪರಿಸ್ಥಿತಿ ಇಲ್ಲಿ ನಿರ್ಮಾಣಗೊಂಡಿದೆ ಅಂದ್ರೆ ಬಳ್ಳಾರಿ ಎಂಬಾ ನತದೃಷ್ಟ ಜಿಲ್ಲೆಯ ದೌರ್ಭಾಗ್ಯವಾದರೂ ಎಂಥಾದ್ದು. ಒಮ್ಮೆ ಯೋಚಿಸಿ ನೋಡಿ ಮೊನ್ನೆ ಇಂಥದ್ದೊಂದು ದುಸ್ಥಿತಿ ನಿರ್ಮಾಣವಾಗಿದ್ದು, ಮೊನ್ನೆ ನಡೆದ ಬಳ್ಳಾರಿಯ ಬೀಡಿ ಕಂಪನಿಯೊಂದರ ಮಾಲೀಕನೊಬ್ಬನ ಕೊಲೆಯಿಂದಾಗಿ ಇಲ್ಲಿನ ಕೆಂಪು ಮಣ್ಣಿನ ನೆಲಕ್ಕೆ ರಕ್ತ ಚೆಲ್ಲಿ ಕೊಲೆಯಾಗಿ ಹೋದವನ ಹೆಸರು ಸೈಯದ್ ಮುಜೀದ್.

□□

ಪತ್ರಿಕೆಗಳಲ್ಲಿ ಕ್ರೈಂನ್ಯೂಸ್ ತಲೆಬರಹಗಳು

೧. 'ಪ್ರೀತಿಗಾಗಿ ಪ್ರೇಯಸಿಯನ್ನೇ ಕೊಂದ 'ತೇಜ' ಟಿ.ವಿ ಮೇಕಪ್‌ಮ್ಯಾನ್!'

೨. 'ಹೋಟೆಲ್ ರೂಮಿನಲ್ಲಿ ಸಿಕ್ಕಿಬಿದ್ದ ನಯನಾತಾರಾ!'

೩. 'ಸೆಕ್ಸ್ ಖಯಾಲಿ ಜೇಬಲ್ಲಿದ್ದ ದುಡ್ಡೆಲ್ಲ ನಿಖಾಲಿ!'

೪. 'ಮಿಂಡನೊಂದಿಗೆ ಚಕ್ಕಂದವಾಡುತ್ತಿದ್ದ ಮಿಟುಕಲಾಡಿಯ ಮರ್ಡರ್!'

೫. 'ಸೆಕ್ಸ್ ಪ್ರಾಬ್ಲಂಸ್ ಇದಕ್ಕಿಲ್ಲವೆ ಸೆಲ್ಯೂಷನ್'

(- "ಕ್ರೈಂನ್ಯೂಸ್" ಪಾಕ್ಷಿಕ, ಮಾರ್ಚ್ ೧೫, ೨೦೦೭).

೧. "ಹಸ್ಮಾತಾಜ್ ಹತ್ಯೆಯ ರೂವಾರಿ ಇಮ್ರಾನ್!"

೨. "ಅಸಲು ಮಾರ್ಕೆಟ್ ಮಾಫಿಯಾ ಏನು?"

೩. "ನಾಯಕನೆಂಬ ಪೋಲಿಸ್ ಪುಂಡ! ಪ್ರೇಮಿಗಳ ಬದುಕು ಅಗ್ನಿಕುಂಡ!"

೪. "ಚೆಲುವರಾಯನ ಘಟ್ಟಿಂಗ್‌ಗೆ ವಿರೋಧಿಗಳಿಬ್ಬರು ಫಿನಿಷ್"

೫. "ಡಾ. ಗುರುಪ್ರಸಾದರ ಸಾರಥ್ಯದಲ್ಲಿ ಹಳ್ಳಹಿಡಿದಿರುವ ಪೊಲೀಸ್ ಪರೀಕ್ಷೆ"

(- 'ಕ್ರಿಮಿನಲ್ ಡೈರಿ' ಪಾಕ್ಷಿಕ, ಮಾರ್ಚ್ ೧೫, ೨೦೦೭).

೧. "ಪಿಂಪು ಪ್ರಸಾದ ಸಿಕ್ಕಿಬಿದ್ದ!"

೨. "ಅವನ ಅಡ್ಡೆಯಲ್ಲಿ ಸಾವಿರಾರು ಚಿತ್ರನಟಿಯರಿದ್ದರು"

೩. "ಬೆಂಗಳೂರು ಭೂಗತಲೋಕ ಕಂಪನ ರವಿ .... ಬಾಯ್ ... ಲೋಗ್!"

೪. "ಭೀಮಾ ತೀರದಲ್ಲಿ ಮತ್ತೆ ರಿವೇಂಜ್ ಕಿಲ್ಲಿಂಗ್ ....!"

೫. "ಟಿ.ವಿ. ೯ ಕರಾಮತ್ತು! ತೋಳ ಹಳ್ಳಕ್ಕೆ ಬಿತ್ತು!"

(- 'ಕ್ರೈಂನ್ಯೂಸ್' ಪಾಕ್ಷಿಕ, ಮಾರ್ಚ್ ೨೩, ೨೦೦೭).

೧. "ನಕ್ಸಲ್ ಹತ್ಯೆ ಸತ್ತವನ ಹೆಸರೇ ಗೊತ್ತಿಲ್ಲ?"

೨. "ಛೇ! ಇನ್ನು ಮುಸ್ಲಿಂ ಸೇಡು ಖಚಿತ!"

೩. "ಸೆಂಟ್ರಲ್ ಜೈಲಲ್ಲಿ ಫೈಟ್; ಸುನಿಲ್ ಹತ್ಯೆಗೆ ಸ್ಕೆಚ್?"

೪. "ಅಶ್ವಿನಿ ರಾಂಪ್ರಸಾದ್ ಎಂಬ ಸುಳ್ಳ ಮಲ್ಲಿಕಾಗೆ ಕೊಟ್ಟ ಕಾಸೆಷ್ಟು?"

೫. "ಸದ್ದಾಂ ಹತ್ಯೆಯ ನಂತರ ಮುಸ್ಲಿಂ ದ್ವೇಷದ ಅಗ್ನಿಕುಂಡ"

೬. "ಕಪ್ಪುಸೂಟ್‌ನಲ್ಲಿ ತನ್ನ ಒಬ್ಬಂಟಿ ಸೆಲ್‌ನಿಂದ ಹೊರಬಂದಿದ್ದ ಸದ್ದಾಂ."

೭. "ಕೆಸಮುಡಿ ನಕ್ಸಲ್ ಎನ್‌ಕೌಂಟರ್"

(- ಹಾಯ್ ಬೆಂಗಳೂರು!"- ವಾರಪತ್ರಿಕೆ, ಜನೇವರಿ ೦೫, ೨೦೦೭)

೧. "ಮುಸ್ಲಿಂ ಉಗ್ರ ಡರ್ಟಿಫೆಲೋ"

೨. "ಹಂಪಿ - ಇನ್‌ಸೈಡ್‌ಸ್ಟೋರಿ"

೩. "ತಿರುಗಿ ಬಿದ್ದಳು ಪ್ರಾಣಕಾಂತೆ; ಲವ್‌ಇನ್ ಬಸವೇಶ್ವರ ನಗರ"

೪. "ಸೆಕ್ಸ್ ಮಾರ್ಕೆಟ್ ಅಟ್ ಪೀಣ್ಯ"

೫. "ಹೊನ್ನಾಳಿ ಶಾಸಕನಿಗೆ ಎದ್ದೆದ್ದು ಒದ್ದರು"

೬. "ಶಿರಸಿ! ರಾಜರಾಮಹೆಗಡೆ ಇಟ್ಟ ಟೋಪಿ"

(- "ಹಾಯ್ ಬೆಂಗಳೂರು!" ಜನೇವರಿ ೧೨, ೨೦೦೭)

೧. "ಶ್ರೀರಾಂಪುರದ ಹತ್ಯೆಗಳು"
ಹಂತಕಿಯೊಬ್ಬಳು ಬಂದು ಮನೆಯೊಳಗಿದ್ದಾರೆ!"

೨. "ಬಾಲಕೃಷ್ಣ ಕಾಕತ್ಕರ್ ಕ್ರೈಂ ಸ್ಟೋರಿ; ಪತ್ನಿ ರಶ್ಮಿ, ಏಕೆ ಸೈನೇಡ್ ತಿಂದಳು?"

೩. "ಗುಲ್ಬರ್ಗಾ : ಭೀಮಾತೀರದ ಹಂತಕರು"
"ಅಫಜಲ್ಪುರದಲ್ಲಿ ಕಸಾಯಿ ಮುಸಲರಿಂದ ಹತ್ಯೆ"

(- "ಹಾಯ್ ಬೆಂಗಳೂರು!" ಜನವರಿ ೨೬, ೨೦೦೭)

೧. "ಪೇಜಾವರ : ಕ್ರೈಮ್ ಕನೆಕ್ಷನ್!"

೨. "ವಧಾಪೀಠ - ವಿದ್ಯಾಪೀಠ"

೩. "ಪ್ರತಿಭಾ ಮರ್ಡರ್ ಕೇಸ್; ಏನನ್ನುತ್ತದೆ ಛಾರ್ಜ್‌ಷೀಟ್?"

೪. "ರಾಜಾಜಿನಗರದ ಪೊಲೀಸರು ಬಡಿದು ಕೊಂದರೆ?"

೫. "ಶೃಂಗೇರಿಯ ಶೈಲಾ ಸಾವು; ಮುಸ್ಲಿಂ ಹುಡುಗನ ಸ್ನೇಹವು, ಮೊಬೈಲ್ ಕದ್ದು ಹಗರಣವೂ"

೬. "ಬ್ರಿಗೇಡ್ ರೋಡ್‌ನಲ್ಲಿ ಬೌನ್ಸರ್‌ನ ಮರ್ಡರ್"

(- ಹಾಯ್ ಬೆಂಗಳೂರು, ಜನೇವರಿ ೧೯, ೨೦೦೭)

೧. "ತಾಯಿಯ ಮಡಿಲು; ಎಸ್. ನಾರಾಯಣ್ ಅಸಲಿ ಮುಖ

ತಂದೆ ಭಿಕ್ಷುಕ, ತಾಯಿ ಕೂಲಿ!" "ಮಗ ಎಂಥ ದುಷ್ಟ ಗೊತ್ತೆ?"

೨. "ಬಿಲ್ಡರ್ ಸುಬ್ಬರಾಜು ಮರ್ಡರ್ ಕೇಸಿನ, ಕಿಲ್ಲರ್ ಬಚಖಾನಾ ಪರಾರಿ ಆಗುತ್ತಾನಾ?"

೩. "ಹಾಸನದ ಆತ್ಮಹತ್ಯೆಗಳ ಹಿಂದೆ; ರೇವಣ್ಣನ ಬಡ್ಡಿ ಮಕ್ಕಳಿದ್ದಾರೆ."

೪. "ಪಾರ್ವತಮ್ಮನಿಗೆ ಮಧು ಬಂಗಾರಪ್ಪ ಆವಾಜ್!"

(- ಹಾಯ್ ಬೆಂಗಳೂರ್! ಫೆಬ್ರವರಿ ೦೨, ೨೦೦೭)

೧. "ನಾಗಮಾರಪಳ್ಳಿ ಮರ್ಡರ್!

ಮಂತ್ರಿ ಮಗ ಹೆಂಗೆ ಸತ್ತ?

ಎಸ್ಪಿ ರೂಪಾ ಏನು ಮಾಡ್ತಾ ಇದ್ಳು?

೨. "ಮೈನ್ಸ್ ಲಾರಿಗಳ ಟೋಕನ್ ಏಜೆಂಟ್; ಹೊಸಪೇಟೆಯ ಬಾವಿಕಟ್ಟೆ ಫಿನಿಷ್!"

೩. "ಸಲಿಂಗಿಗಳ ಗುಂಡು! ಬಾಲಮಂದಿರದ ಹಂತಕ ಮಕ್ಕಳ ಎಸ್ಕೇಪ್"

೪. "ಅಬ್ಬಾ! ಪುತ್ತೂರಿನ ಅಡಿಷನಲ್ ಎಸ್ಪಿಗೆ ಎಷ್ಟು ಸಿಟ್ಟು?"

೫. "ಗುರುಪಾದಪ್ಪ ನಾಗಮಾರಪಳ್ಳಿಗೆ ವಿಜಯಕುಮಾರನೆಂಬ ಒಬ್ಬೇ ಒಬ್ಬ ಸಭ್ಯ ಮಗನಿದ್ದ!"

(- ಹಾಯ್ ಬೆಂಗಳೂರ್! ಫೆಬ್ರವರಿ ೯, ೨೦೦೭)

೧. "ಬೆಂಗಳೂರು ಭೂಗತ ಲೋಕಕ್ಕೆ; ಗನಪಾಟ್; ಎಂಟ್ರಿ ರವಿ ಪೂಜಾರಿ!"

೨. ಕಲಾಸಿಪಾಳ್ಯದಲ್ಲಿ ತಲೆ ಎತ್ತಿದೆ. ದಿ ಗ್ರೇಟ್ ಮಾರ್ಕೆಟ್ ಮಾಫಿಯಾ!

೩. ಸೆಕ್ಸ್ - ಡ್ರಗ್ - ಫ್ಯಾಮಿಲಿ!

ಬಿಜಾಪುರದ ಉಸ್ತಾದ್ ಸತ್ತದ್ದು ಹೆಂಗೆ?

೪. ಬೆಂಗಳೂರು ಭೂಗತ ಲೋಕಕ್ಕೆ ರವಿಪೂಜಾರಿ ಎಂಟ್ರಿ?

೫. ಶಬನಮ್ ಡೆವಲಪರ್ಸ್‌ನಲ್ಲಿ ಎರಡು ಹತ್ಯೆಗಳು!

(- ಹಾಯ್ ಬೆಂಗಳೂರ್! ಫೆಬ್ರವರಿ ೨೩, ೨೦೦೭)

೧. "ಚಿಕ್ಕಮಗಳೂರು ಪೊಲೀಸ್ .... ವಿಪುಲ್-ಫಣಿ ಕಿತ್ತಾಡಿಕೊಂಡದ್ದು ಮಟ್ಕಾದವರ ವಿಷಯಕ್ಕೆ!"

೨. "ಐ.ಸಿ.ಐ.ಸಿ.ಐ ಕಾಸು ಕೊಡದಿದ್ರೆ ಖಬಾಡ್ದಾರ್!"

(- ಹಾಯ್ ಬೆಂಗಳೂರು! ಮಾರ್ಚ್ ೨, ೨೦೦೭)

೧. ಬಿಜಾಪುರದ ಡಿಎಸ್ಪಿಯೇ ಸೈಡ್ ಆ್ಯಕ್ಟರ್ !

೨. ಶೇಷನಾನ್ ಹೋಟೆಲ್‌ನಲ್ಲಿ ಹಾಟ್ ಶೂಟಿಂಗ್ !

೩. ಜಾಕಿಚಾನ್ ಎಂಬ ಅಪ್ಪಟ ಸ್ಟ್ರೀಟ್ ಫೈಟರ್ !

೪. ಶಾಸಕ ರೇಣುಕಾಚಾರ್ಯನ ಶಿಷ್ಯ ಹೊನ್ನಾಳಿಯ ಚೂರಿನಾರಾಯಣ ಕೊಲೆಯಾದನಾ?

೫. "ನವುಲೆ ಆನಂದನಿಗೆ ಜಾಮೀನು! ಶಿವಮೊಗ್ಗ! ಮತ್ತೆ ಒಂದಾಗಲಿದೆ ಪಾತಕಿಗಳ ಪಡೆ!

(- ಹಾಯ್ ಬೆಂಗಳೂರ್! ಮಾರ್ಚ್ ೯, ೨೦೦೭)

೧. "ಸುಪಾರಿ ಪೊಲೀಸ್ ಉಮೇಶ್ ಮಷ್ಕರಿ"

"ಗೋಪಾಲಯ್ಯನ ಕಾಸಿಗಾಗಿ ಫೈರಿಂಗ್?"

೨. "ಚಿತ್ರದುರ್ಗದ ಡಾಕ್ಟರು ಹೆಂಡತೀನ ಕೊಂದ"

೩. "ವಿಜುಗೌಡನ ಟೆಬರಿಗೆ ಬಿಜಾಪುರ ಸುಸ್ತ್"

(- ಹಾಯ್ ಬೆಂಗಳೂರು, ಮಾಚ್ ೧೬, ೨೦೦೭)

೧. "ಮಂಡೆ ಕೆಟ್ಟ ಪೊಲೀಸರೂ ಅಂಡೆ ಪಿರ್ಕಿ ಸೀತಾರಾಮನೂ"

೨. "ಗುರೂ ಇದು ಎಂಥ ನೂರು?"

೩. "ಅಬ್ಬಾ ಹೆಗಡೆ ! ..."

(- ಹಾಯ್ ಬೆಂಗಳೂರು, ಮಾಚ್ ೨೩, ೨೦೦೭)

□□

ಅನುಬಂಧ-೪

ಗ್ರಂಥಋಣ

೧. ಅಂಗಡಿ ಎಸ್.ಎಸ್., ೧೯೯೬, ಭಾಷಾ ಕ್ಷೇತ್ರಕಾರ್ಯ, ಸಮಾಜ ಪುಸ್ತಕಾಲಯ, ಧಾರವಾಡ.

೨. ಅಂಗಡಿ ಎಸ್.ಎಸ್., ೧೯೯೮, ಶೋಧನ, ಪಾರ್ವತಮ್ಮ ಪ್ರಕಾಶನ, ಯರಝುರವಿ.

೩. ಅಂಗಡಿ ಎಸ್.ಎಸ್., ೨೦೦೫, ಕನ್ನಡ ವ್ಯಾಕರಣ ಪರಿಭಾಷೆ, ವಿದ್ಯಾನಿಧಿ ಪ್ರಕಾಶನ, ಗದಗ

೪. ಅಂಗಡಿ ಎಸ್.ಎಸ್., ೨೦೦೩, ಕನ್ನಡ ನಿಘಂಟು ರಚನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫. ಅಂಗಡಿ ಎಸ್.ಎಸ್., ೨೦೦೦, ಸಂಕೀರ್ಣ ವೃತ್ತಿ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಅಶೋಕ ಕುಮಾರ ರಂಜೇರೆ, ೨೦೦೦, ವಿವಿಧ ವೃತ್ತಿ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಅಶೋಕ ಕುಮಾರ ರಂಜೇರೆ, ೨೦೦೫, ಭಾಷೆ ಮತ್ತು ಶಿಕ್ಷಣ, ನಿಧಿ ಪ್ರಕಾಶನ, ಹೊಸಪೇಟೆ.

೮. ಎಚ್ಚೆಸ್ಕೆ, ೨೦೦೪, ಆಡಳಿತ ಕನ್ನಡ, ಚೇತನ ಬುಕ್‌ಹೌಸ್, ಮೈಸೂರು.

೯. ಎಚ್ಚೆಸ್ಕೆ, ೨೦೦೧, ಕನ್ನಡದ ಸ್ಥಿತಿಗತಿ, ಮಹಿಮ ಪ್ರಕಾಶನ, ಮೈಸೂರು.

೧೦. ಎಚ್ಚೆಸ್ಕೆ, ೨೦೦೪, ಬಳಕೆಯ ಭಾಷೆ, ಚೇತನ ಬುಕ್‌ಹೌಸ್, ಮೈಸೂರು.

೧೧. ಕಮ್ಮಾರ್ ಎಸ್.ಎಂ., ೧೯೯೯, ಸಮೂಹ ಮಾಧ್ಯಮಗಳು ಹಾಗೂ ಸಮುದಾಯ, ಮುಂಡರಗಿ.

೧೨. ಕುಶಾಲಪ್ಪಗೌಡ ಕೆ., ೧೯೯೧, ಕನ್ನಡ, ತಿರುಳ ಕನ್ನಡ ಮತ್ತು ಸಮಾಜ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೩. ಖಾದ್ರಿ ಎಸ್.ಅಚ್ಯುತನ್, ೨೦೦೧, ಟೆಲಿವಿಷನ್ ವರದಿಗಾರಿಕೆ, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.

೧೪. ಗೋಪಾಲಕೃಷ್ಣ ಹೆಗಡೆ, ೨೦೦೪, **ಕ್ರೀಡಾ ಪತ್ರಿಕೋದ್ಯಮ**, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.

೧೫. ಗೋಪಾಲಕೃಷ್ಣಯ್ಯ ಕೆ.ಎಲ್., ೨೦೦೩, **ಭಾಷೆಯ ಬೆಳಕು**, ನವಕರ್ನಾಟಕ ಪ್ರಕಾಶನ.

೧೬. ಚಂದ್ರಶೇಖರ ಬಿ.ಎಸ್., ೨೦೦೩, **ಸವಂಹನ ಮಾಧ್ಯಮಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ಚಂದ್ರಶೇಖರ ಐತಾಳ ಗುಂಡ್ಮಿ, ೧೯೮೯, **ಸಂಶೋಧನೆ ವಿಹಾರ**, ಆನಂದ ಪ್ರಕಾಶನ, ಮಂಗಳಗಂಗೋತ್ರಿ.

೧೮. ಚಿದಾನಂದಮೂರ್ತಿ ಎಂ., ೧೯೮೧, **ವಾಗರ್ಥ**, ಭಾಪ್ಕೋ ಪ್ರಕಾಶನ, ಬೆಂಗಳೂರು.

೧೯. ಚಿದಾನಂದಮೂರ್ತಿ ಎಂ., ೧೯೮೬, **ಭಾಷಾವಿಜ್ಞಾನದ ಮೂಲತತ್ವಗಳು**, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೨೦. ಜಯತೀರ್ಥ ರಾಜಪುರೋಹಿತ, ೧೯೭೬, **ಆಡಳಿತ ಭಾಷೆ : ಸಮಸ್ಯೆಗಳ ವಿಶ್ಲೇಷಣೆ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೧. ಡಿ.ವಿ.ಜಿ., ೧೯೮೮, **ವೃತ್ತಪತ್ರಿಕೆ**, ಬೆಂಗಳೂರು.

೨೨. ದಿವಾಕರ್ ಎಸ್., ೧೯೮೮೨೦೦೪, **ಸಮೂಹ ಮಾಧ್ಯಮಗಳು**, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ.

೨೩. ನರಸಿಂಹಪ್ರಸಾದ್ ಎಂ.ಆರ್., ೧೯೯೭, **ಸಂವಹನ ಕನ್ನಡ**, ಕಾಮಧೇನು ಪ್ರಕಾಶನ, ಬೆಂಗಳೂರು.

೨೪. ನಾಗರಾಜ್ ಕೆ.ವಿ., ೧೯೯೭, **ಸಮೂಹ ಮಾಧ್ಯಮಗಳು ಮತ್ತು ಸಮಾಜ**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೫. ನಾಗರಾಜರಾವ್ ಹ.ವೆಂ., ೧೯೯೮, **ಸಂಪಾದಕೀಯ**, ಪದ್ಮಪ್ರಜ್ಞಾ ಪ್ರಕಾಶನ, ಬೆಂಗಳೂರು.

೨೬. ನಾಗರಾಜರಾವ್ ಹ.ವೆಂ., ೧೯೯೮, **ವಾರಪತ್ರಿಕೆಗಳು**, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.

೨೭. ನಾಗರಾಜರಾವ್ ವಿ., ನಾಗಭೂಷಣಂ ಕೆ.ಎಸ್., ಅರ್ಜುನದೇವ ಎನ್., (ಸಂ.) ೨೦೦೪, **ಮಾಧ್ಯಮ ಪಾರಿಭಾಷಿಕ**, ಮಾಧ್ಯಮ ಅಕಾಡೆಮಿ, ಬೆಂಗಳೂರು.

೨೮. ನಾಗರಾಜರಾವ್ ಹಂ.ಪ., ೧೯೭೩, **ಭಾಷೆ**, ಬೆಂಗಳೂರು.

೨೯. ನಾಯಕ ಡಿ.ಬಿ., ೧೯೯೦, **ಸಮೂಹ ಮಾಧ್ಯಮಗಳು**, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೩೦. ನಾಯಕ ಡಿ.ಬಿ., ೨೦೦೩, **ಸಮೂಹ ಮಾಧ್ಯಮಗಳು ಮತ್ತು ಸಮಾಜ**, ಬಂಜಾರಾ ಪ್ರಕಾಶನ, ಗುಲಬರ್ಗಾ.

೩೧. ನಾಯಕ ಡಿ.ಬಿ., ೨೦೦೫, **ಸಂವಹನ ಕನ್ನಡ**, ಬಂಜಾರಾ ಪ್ರಕಾಶನ, ಗುಲಬರ್ಗಾ.

೩೨. ನಾರಾಯಣ ಕೆ.ವಿ., ೨೦೦೬, **ಕನ್ನಡ ಶೈಲಿ ಕೈಪಿಡಿ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸಿ.ಐ.ಐ.ಎಲ್. ಮೈಸೂರು.

೩೩. ನಾರಾಯಣ ಕೆ.ವಿ., ೨೦೦೦, **ಭಾಷೆ**, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೪. ನಾರಾಯಣ ಕೆ.ವಿ., ೨೦೦೫, **ನಮ್ಮೊಡನೆ ನಮ್ಮ ನುಡಿ**, ಲೋಹಿಯಾ ಪ್ರಕಾಶನ, ಬಳ್ಳಾರಿ.

೩೫. ನಾರಾಯಣ ಕೆ.ವಿ., ೧೯೯೮, **ದ್ವಿಭಾಷಿಕತೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೬. ನಿರಂಜನ ವಾನಳ್ಳಿ, ೨೦೦೩, **ಪತ್ರಿಕೋದ್ಯಮ ಶಿಕ್ಷಣ**, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.

೩೭. ಪದ್ಮರಾಜ ದಂಡಾವತಿ, ೨೦೦೪, **ರಿಪೋರ್ಟಿಂಗ್**, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.

೩೮. ಪದ್ಮರಾಜ ದಂಡಾವತಿ, ೨೦೦೪, **ಪತ್ರಿಕಾ ಭಾಷೆ**, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.

೩೯. ಪಾಂಡುರಂಗಬಾಬು ಡಿ., ೧೯೯೫, **ಆದಿಜಾಂಬವರ ಕನ್ನಡ**, ಪಿಎಚ್.ಡಿ. ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪೦. ಪೂರ್ಣಿಮಾ ಟಿ.ಸಿ., ೨೦೦೩, **ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೧. ಭಾಗ್ಯಲಕ್ಷ್ಮಿ ಎಂ., ೨೦೦೧, **ಬಳ್ಳಾರಿ ಪರಿಸರದ ಕನ್ನಡ-ತೆಲುಗು ದ್ವಿಭಾಷಿಕತೆ : ಸಮಾಜೋಭಾಷಿಕ ಅಧ್ಯಯನ**, ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೨. ಮಂಜುಳಾ ಸಿ.ಜಿ., ೨೦೦೩, **ಡೆಸ್ಕ್ ಪತ್ರಿಕೋದ್ಯಮ**, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.

೪೩. ಮರುಳಯ್ಯ ಸಾ.ಶಿ., ೧೯೯೯, **ಕನ್ನಡ ಭಾಷೆಯ ಚರಿತೆ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೪೪. ಮಹಾದೇವಯ್ಯ ಪಿ., ೨೦೦೦, **ಸಾಮಾಜಿಕ ಉಪಭಾಷೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೫. ಮಹಾದೇವಯ್ಯ ಪಿ., ೨೦೦೬, **ದಲಿತರು ಭಾಷೆ ಮತ್ತು ಸಮಾಜ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೬. ಮಹೇಶ ಸುರ್ವೆ, ೨೦೦೦, **ಪತ್ರಕರ್ತರ ಕೈಪಿಡಿ**, ಪತ್ರಕರ್ತರ ವೇದಿಕೆ, ಬೆಂಗಳೂರು.

೪೭. ರಂಗನಾಥರಾವ್ ಜಿ.ಎಸ್., ೨೦೦೬, ಪತ್ರಿಕೋದ್ಯಮ, ಕಾಮಧೇನು ಪ್ರಕಾಶನ, ಬೆಂಗಳೂರು.

೪೮. ರಮೇಶ್ ಬೇ.ಗೋ., ೧೯೯೭, ಸಂಪರ್ಕ ಸಾಧನಗಳು, ವಿಜಯ ಸಾಹಿತ್ಯ ಪ್ರಕಾಶನ, ಬೆಂಗಳೂರು.

೪೯. ರಾಜಪುರೋಹಿತ ಬಿ.ಬಿ., ೨೦೦೫, ಭಾಷೆ ಮತ್ತು ಅರ್ಥಗಳ ಗುಟ್ಟು, ಮೈಸೂರು.

೫೦. ರಾಮಚಂದ್ರರಾವ್ ಬಿ., ೧೯೮೩, ಕನ್ನಡ ಭಾಷೆ ಪ್ರಾದೇಶಿಕ ವೈವಿಧ್ಯ, ಐ.ಬಿ.ಎಮ್ ಪ್ರಕಾಶನ, ಬೆಂಗಳೂರು.

೫೧. ರಾಮಚಂದ್ರ ಸಿ.ಎಸ್., ೧೯೯೯, ಕನ್ನಡ ಭಾಷಾಲೋಚನ, ಮಾಂಗೀರಿ ಪ್ರಕಾಶನ, ಮೈಸೂರು.

೫೨. ರಾಮಚಂದ್ರರಾವ್ ಬಿ., ೧೯೯೮, ಕನ್ನಡ ಭಾಷೆ ಇತಿಹಾಸ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೫೩. ರಾಜೇಶ್ವರಿ ಮಹೇಶ್ವರಯ್ಯ, ೨೦೦೩, ಆಧುನಿಕ ವರ್ಣನಾತ್ಮಕ ಭಾಷಾವಿಜ್ಞಾನ, ಸಮಾಜ ಪುಸ್ತಕಾಲಯ, ಧಾರವಾಡ.

೫೪. ಲಕ್ಷ್ಮೀಕಾಂತ ಇನಾಂದಾರ, ೧೯೯೬, ಸಮೂಹ ಮಾಧ್ಯಮದೊಂದಿಗೆ ಸಂವಹನ, ಶ್ರೀಮತಿ ಇನಾಂದಾರ ಪ್ರಕಾಶನ.

೫೫. ವಿಜಯಕುಮಾರ ಅವರೆಕಾಳು, ೨೦೦೪, ಭಾಷಾ ಸೌಜನ್ಯ, ತಳಗವಾದಿ ಪ್ರಕಾಶನ, ಮೈಸೂರು.

೫೬. ಶಂಕರಭಟ್ಟ ಡಿ.ಎಸ್., ೨೦೦೧, ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಭಾಷಾ ಪ್ರಕಾಶನ, ಮೈಸೂರು.

೫೭. ಶಂಕರಭಟ್ಟ ಡಿ.ಎಸ್., ೧೯೯೯, ಕನ್ನಡ ಪದಗಳ ಒಳರಚನೆ, ಭಾಷಾ ಪ್ರಕಾಶನ, ಮೈಸೂರು.

೫೮. ಶಂಕರಭಟ್ಟ ಡಿ.ಎಸ್., ೨೦೦೪, ಕನ್ನಡ ವಾಕ್ಯಗಳ ಒಳರಚನೆ, ಭಾಷಾ ಪ್ರಕಾಶನ, ಮೈಸೂರು.

೫೯. ಶಂಕರಭಟ್ಟ ಡಿ.ಎಸ್., ೨೦೦೨, ಭಾಷೆಯ ಬಗೆಗೆ ನೀವೇನು ಬಲ್ಲಿರಿ, ಭಾಷಾ ಪ್ರಕಾಶನ, ಮೈಸೂರು.

೬೦. ಶಾಂತಾ ಈಚನೂರು, ೧೯೯೭, ಸಂಪರ್ಕ ಮಾಧ್ಯಮಗಳು, ಕನ್ನಡ ಭಾರತಿ ಪ್ರತಿಷ್ಠಾನ, ಬೆಂಗಳೂರು.

೬೧. ಶಿರೂರು ಬಿ.ವಿ., ೨೦೦೦, ಸಂಶೋಧನಾ ಸ್ವರೂಪ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ.

೬೨. ಶ್ರೀಧರ ಎಸ್.ಎಸ್., ೧೯೯೫, ಇಂದಿನ ಕನ್ನಡ ರಚನೆ ಮತ್ತು ಬಳಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೩. ಸಂಗಮೇಶ ಸವದತ್ತಿಮಠ, ೨೦೦೩, ಕನ್ನಡ ಭಾಷಾ ಸ್ವರೂಪ, ರೂಪರಶ್ಮಿ ಪ್ರಕಾಶನ, ಕಲಬುರ್ಗಿ.

೬೪. ಸಂಗಮೇಶ ಸವದತ್ತಿಮಠ, ೨೦೦೧, **ತೌಲನಿಕ ದ್ರಾವಿಡ ಭಾಷಾ ವಿಜ್ಞಾನ**, ರೂಪರಶ್ಮಿ ಪ್ರಕಾಶನ, ಕಲಬುರ್ಗಿ.

೬೫. ಸಾಂಬಮೂರ್ತಿ, ೨೦೦೪, **ಭಾಷೆ ಮತ್ತು ಅಶಾಬ್ದಿಕ ಸಂವಹನ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.

೬೬. ಸೋಮಶೇಖರಗೌಡ, ೨೦೦೦, **ಭಾಷೆ : ರಚನೆ ಬಳಕೆ**, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಮೈಸೂರು.

□□